ಸತ್ಯಮೇವ ಜಯತೇ

**ಭಾರತ ಸರ್ಕಾರ**

# ಮಿಷನ್ ವಾತ್ಸಲ್ಯ

**ಸಾವಧಾಂತ ಸಂರಕ್ಷಣಂ**

# (Mission Vatsalya)

(Savdhanta Sanrakshnam)

# ಅನುಷ್ಠಾನ ಮಾರ್ಗಸೂಚಿಗಳು

ಹೊಸ ಉದಯದ ಕಡೆಗೆ

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ
## ಭಾರತ ಸರ್ಕಾರ

***ದಯವಿಟ್ಟು ಗಮನಿಸಿ;*** **ಈ ಕನ್ನಡ ಅನುವಾದವು ಮಿಷನ್ ವಾತ್ಸಲ್ಯ ಯೋಜನೆಯ ಅನುಷ್ಠಾನ ಮಾರ್ಗಸೂಚಿಯನ್ನು ಕೇವಲ ಅರ್ಥ ಮಾಡಿಕೊಳ್ಳಲು ಮಾತ್ರ, ಹೆಚ್ಚಿನ ಮಾಹಿತಿ, ಸ್ಪಷ್ಟತೆ ಹಾಗೂ ಯಾವುದೇ ಕಾನೂನಿಗೆ ಸಂಬಂಧಿಸಿದ ಚರ್ಚೆ ಅಥವಾ ನ್ಯಾಯಾಲಯದಲ್ಲಿ ಉಲ್ಲೇಖಿಸಲು ಮೂಲ ಇಂಗ್ಲೀಷ್ (ಆಂಗ್ಲ) ಪ್ರತಿಯನ್ನು ಬಳಸುವುದು.**

***ಮೂಲ ಕನ್ನಡ ಅನುವಾದ:*** **ಬಿ.ವಿ.ಕಿಶೋರ್ ಕುಮಾರ್, ಬೆಂಗಳೂರು. (9880415328)**

***ತಿದ್ದುಪಡಿ ಮತ್ತು ಸಂಯೋಜನೆ:*** **ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ, ಜಿಲ್ಲಾಡಳಿತ ಭವನ, ಕೊಪ್ಪಳ. (08539–225006).**

***ಸೂಚನೆ:*** ***ಕೇಂದ್ರ ಸರಕಾರದಲ್ಲಿನ ಮಾರ್ಗಸೂಚಿಯಂತೆ ಕೆಲವು ವ್ಯವಸ್ಥೆಗಳ/ಸಮಿತಿಗಳ ಹೆಸರು ಹಾಗೂ ಕೆಲವು ಹುದ್ದೆಗಳ ಹೆಸರುಗಳಲ್ಲಿ ಆಯಾ ರಾಜ್ಯಕ್ಕನುಸಾರ ಸ್ವಲ್ಪ ಬಿನ್ನ ಇರುತ್ತದೆ. ಅನುವಾದ ಮಾಡುವಾಗ ಕೆಲವನ್ನು ಮೂಲ ದಾಖಲೆಯಲ್ಲಿರುವಂತೆ ಅನುವಾದ ಮಾಡಲಾಗಿದೆ. ತಾವುಗಳು ಓದುವಾಗ ಪ್ರಸ್ತುತ ನಮ್ಮ ರಾಜ್ಯದಲ್ಲಿ ಕೈಗೊಂಡಿರುವ ವವ್ಯಸ್ಥೆಗಳಿಗನುಗುಣವಾಗಿ ಓದಿಕೊಂಡು ಅರ್ಥಮಾಡಿಕೊಳ್ಳುವುದು.***

# ವಿಷಯ

**1. ಪೀಠಿಕೆ**

1.1 ಕಾಣ್ಕೆ

1.2 ಮಿಷನ್ (ಧ್ಯೇಯ)

1.3 ಉದ್ದೇಶಗಳು

**2. ಅನುಷ್ಠಾನಕ್ಕಾಗಿ ಸಾಂಸ್ಥಿಕ ಚೌಕಟ್ಟು**

2.1 ಕೇಂದ್ರ ಹಂತದ ಚೌಕಟ್ಟು

2.2 ನಿಧಿ ಹರಿವಿನ ವ್ಯವಸ್ಥೆ

2.3 ರಾಜ್ಯ ಮಟ್ಟದ ಉಸ್ತುವಾರಿ ಹಾಗೂ ಪ್ರಗತಿಪರಿಶೀಲನೆ

2.4 ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ

2.5 ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ

2.6 ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ

2.7 ಜಿಲ್ಲಾ ದಂಡಾಧಿಕಾರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ

2.8 ಜಿಲ್ಲಾ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ

2.9 ಮಕ್ಕಳ ನ್ಯಾಯ ಮಂಡಳಿ

2.10 ಮಕ್ಕಳ ಕಲ್ಯಾಣ ಸಮಿತಿ

2.11 ಮಕ್ಕಳ ವಿಶೇಷ ಪೊಲೀಸ್ ಘಟಕಗಳು

2.12 ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ

2.13 ಮಿಷನ್ ವಾತ್ಸಲ್ಯ ಪೋರ್ಟಲ್

2.14 ಚೈಲ್ಡ್ ಲೈನ್–1098 (ಮಕ್ಕಳ ಸಹಾಯವಾಣಿ)

**3. ಸಾಂಸ್ಥಿಕ ಸೇವೆಗಳು**

3.1 ಮಕ್ಕಳ ಪಾಲನಾ ಮತ್ತು ರಕ್ಷಣಾ ಸಂಸ್ಥೆಗಳು

3.2 ಸ್ವಚ್ಛತಾ ಕಾರ್ಯ ಯೋಜನೆ

**4. ಅಸಾಂಸ್ಥಿಕ ಪಾಲನಾ ಸೇವೆಗಳು**

4.1 ಪ್ರಾಯೋಜಕತ್ವ

4.2 ಫಾಸ್ಟರ್ ಕೇರ್

4.3 ಅನುಪಾಲನಾ ಸೇವೆ

**5. ಸಹಭಾಗಿತ್ವ (ಒಮ್ಮುಖಗೊಳ್ಳುವಿಕೆ)**

5.1 ಸಹಭಾಗಿತ್ವ ಕಾರ್ಯತಂತ್ರ

5.2 ಭಾಗೀದಾರರ ಸಾಮರ್ಥ್ಯಾಭಿವೃದ್ಧಿ

**6. ಇತರೆ ಉಪಕ್ರಮಗಳು**

**ಅನುಬಂಧಗಳು**

ಅನುಬಂಧ 1 (ಸಿಪಿಎಂಯುಗಾಗಿ ಹಣಕಾಸಿನ ಬೆಂಬಲ)

ಅನುಬಂಧ 2 (ರಾಜ್ಯ ಅನುಬಂಧ)

ಅನುಬಂಧ 3 (ಜಿಲ್ಲಾ ಅನುಬಂಧ)

ಅನುಬಂಧ (ಸಿಸಿಐಗಳ ಅನುಬಂಧ)

## ಸಂಕ್ಷೇಪಣಗಳು:

ಎಎನ್ಎಂ (ANM) – ಸಹಾಯಕ ಸೂಲಗಿತ್ತಿ ಶುಶ್ರೂಷಕಿ (ಆಕ್ಸಿಲಿಯರಿ ನರ್ಸ್ ಮಿಡ್‌ವೈಫ್)

ಆಶಾ (ASHA) – ಮಾನ್ಯತೆ ಪಡೆದಿರುವ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ

ಸಿಸಿಐ (CCI) – ಮಕ್ಕಳ ಪೋಷಣಾ ಸಂಸ್ಥೆಗಳು

ಸಿಸಿಎಲ್ (CCL) – ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು

ಸಿಎನ್‌ಸಿಪಿ (CNCP) – ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಗು

ಸಿಪಿಎಂಯು (CPMU)– ಕೇಂದ್ರ ಯೋಜನಾ ಉಸ್ತುವಾರಿ (ನಿಗಾವಣಾ) ಘಟಕ

ಸಿಡಬ್ಲ್ಯೂಸಿ (CWC) – ಮಕ್ಕಳ ಕಲ್ಯಾಣ ಸಮಿತಿ

ಸಿಡಬ್ಲ್ಯೂಓ (CWO) – ಮಕ್ಕಳ ಕಲ್ಯಾಣ ಅಧಿಕಾರಿ

ಸಿಡಬ್ಲ್ಯೂಪಿಸಿ (CWPC) – ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ

ಸಿಡಬ್ಲ್ಯೂಪಿಓ (CWPO) – ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ

ಡಿಸಿಪಿಯು (DCPU) – ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಡಿಸಿಪಿಓ (DCPO) – ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ

ಜೆಜೆಬಿ (JJB) – ಮಕ್ಕಳ ನ್ಯಾಯ ಮಂಡಳಿ

ಜೆಜೆ ಕಾಯ್ದೆ (JJ ACT) – ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣಾ) ಕಾಯ್ದೆ

ಜೆಜೆ ನಿಯಮಗಳು (JJ Rules)– ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣಾ) ನಿಯಮಾವಳಿಗಳು

ಎಲ್‌ಸಿಪಿಓ (LCPO) – ಕಾನೂನು–ಕಂ–ಪರಿವೀಕ್ಷಣಾಧಿಕಾರಿ

ಎನ್‌ಜಿಓ (NGO) – ಸ್ವಯಂಸೇವಾ ಸಂಸ್ಥೆ

ಪಿಎಬಿ (PAB) – ಯೋಜನೆಯ ಅನುಮೋದನಾ ಮಂಡಳಿ

ಪಿಎಫ್‌ಎಂಎಸ್ (PFMS) – ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ

ಪಿಓ (PO) – ಪ್ರೊಬೇಷನರಿ ಅಧಿಕಾರಿ (ಪರಿವೀಕ್ಷಣಾಧಿಕಾರಿ)

ಪಿಓಐಸಿ (POIC) – ರಕ್ಷಣಾಧಿಕಾರಿ (ಸಾಂಸ್ಥಿಕ ಪೋಷಣೆ)

ಪಿಓಎನ್‌ಐಸಿ (PONIC) – ರಕ್ಷಣಾಧಿಕಾರಿ (ಅಸಾಂಸ್ಥಿಕ ಪೋಷಣೆ)

ಪಿಓಸಿಎಸ್‌ಓ (POCSO)– ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ.

ಪಿಆರ್‌ಐ (PRI) – ಪಂಚಾಯಿತಿ ರಾಜ್ ಸಂಸ್ಥೆಗಳು

ಎಸ್‌ಎಎ (SAA) – ವಿಶೇಷ ದತ್ತು ಏಜೆನ್ಸಿ

ಎಸ್‌ಎಆರ್‌ಎ (SARA) – ರಾಜ್ಯ ದತ್ತು ಸಂಪನ್ಮೂಲ ಕೇಂದ್ರ

ಎಸ್‌ಸಿಪಿಎಸ್ (SCPC) – ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ

ಎಸ್‌ಎಫ್‌ಸಿಎಸಿ (SFCAC)– ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ (ಪೋಷಕತ್ವ) ಅನುಮೋದನಾ ಸಮಿತಿ

ಎಸ್‌ಜೆಪಿಯು (SJPU)– ಮಕ್ಕಳ ವಿಶೇಷ ಪೊಲೀಸ್ ಘಟಕ

ಎಸ್‌ಎನ್‌ಎ (SNA) – ಸಿಂಗಲ್ ನೋಡಲ್ ಏಜೆನ್ಸಿ

ಎಸ್‌ಓಪಿ (SOP) – ಪ್ರಮಾಣಿತ ಕ್ರಮಬದ್ಧ ಕಾರ್ಯವಿಧಾನ

ಯುಎಲ್‌ಬಿ (ULB) – ನಗರ ಸ್ಥಳೀಯ ಸಂಸ್ಥೆ

# 1. ಪರಿಚಯ – INTRODUCTION

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಕಲ್ಯಾಣವನ್ನು (ಅಭಿವೃದ್ಧಿ) ಖಾತ್ರಿಪಡಿಸುವ ನೋಡಲ್ ಸಚಿವಾಲಯವಾಗಿದೆ. ಇತರೆ ಸಚಿವಾಲಯಗಳು ಹಾಗೂ ಸಂಸ್ಥೆಗಳ ಸಂಯೋಜನೆಯೊಂದಿಗೆ ಶಾಸನ (ಕಾನೂನು), ನೀತಿ ಹಾಗೂ ಯೋಜನಾತ್ಮಕ ಮಧ್ಯಸ್ಥಿಕೆಗಳನ್ನು ರೂಪಿಸುವ ಮೂಲಕ ಇದನ್ನು ಸಾಧಿಸುವುದು ಇಲಾಖೆಯ ಆಶಯವಾಗಿರುತ್ತದೆ. ರಾಷ್ಟ್ರೀಯ ಮಕ್ಕಳ ನೀತಿ (2013 ರ ಪರಿಷ್ಕರಣೆಯಂತೆ), ಹಾಗೂ ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆ, 2016ರ ಪ್ರಕಾರ ಮಕ್ಕಳ ಕಲ್ಯಾಣ ಹಾಗೂ ರಕ್ಷಣೆಗೆ ನೀತಿಯ ಚೌಕಟ್ಟನ್ನು ರೂಪಿಸಲಾಯಿತು. ಭಾರತದ ಸಂಸತ್ತು ಮಕ್ಕಳಿಗಾಗಿ, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2015, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ 2012, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಕಾಯ್ದೆ 2005, ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಹಾಗೂ **ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ – 2009**, ಗಳಂತಹ ಹಲವು ಗುರುತರ ಶಾಸನಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಭಾರತ ದೇಶವು ಮಕ್ಕಳ ನ್ಯಾಯ ವ್ಯವಸ್ಥೆಯ ಕಡ್ಡಾಯ, ವ್ಯವಸ್ಥಿತ, ಅಭಿವೃದ್ಧಿ ಹಾಗೂ ಬಲಗೊಳಿಸುವಿಕೆಯನ್ನು ಖಾತ್ರಿಪಡಿಸುವ ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ಹಾಗೂ ಮಕ್ಕಳ ದತ್ತುವಿನ ಹೇಗ್ ಒಡಂಬಡಿಕೆಗಳಂತಹ ಪ್ರಮುಖ ಅಂತಾರಾಷ್ಟ್ರೀಯ ಒಡಂಬಡಿಕೆಗಳಿಗೆ ಸಹಿ ಹಾಕಿರುವ ರಾಷ್ಟ್ರವಾಗಿದೆ.

**"ಮಿಷನ್ ವಾತ್ಸಲ್ಯ"** ಯೋಜನೆಯು ಸುಸ್ಥಿರ ಅಭಿವೃದ್ಧಿಯ ಗುರಿಗಳಿಗೆ (ಎಸ್.ಡಿ.ಜಿ) ಪೂರಕವಾಗಿ ಮಕ್ಕಳ ಅಭಿವೃದ್ಧಿ ಹಾಗೂ ಮಕ್ಕಳ ಸಂರಕ್ಷಣೆಯ ಆದ್ಯತೆಗಳನ್ನು ಸಾಧಿಸುವ ಒಂದು ಮಾರ್ಗಸೂಚಿಯಾಗಿದೆ. ಈ ಯೋಜನೆಯು ***'ಯಾವುದೇ ಮಗುವನ್ನೂ ಬಿಡಬೇಡಿ (ನಿರ್ಲಕ್ಷಿಸದಿರಿ)'*** ಎಂಬ ಗುರಿಯೊಂದಿಗೆ (MOTTO) ಮಕ್ಕಳ ನ್ಯಾಯ, ಪೋಷಣೆ ಮತ್ತು ರಕ್ಷಣೆ ವ್ಯವಸ್ಥೆಯನ್ನು ಬಲಪಡಿಸುವುದರ ಜೊತೆಗೆ ಮಕ್ಕಳ ಹಕ್ಕುಗಳು, ವಕಾಲತ್ತು ಮತ್ತು ಅರಿವು ಮೂಡಿಸುವ ಚಟುವಟಿಕೆಗಳಿಗೆ ಒತ್ತು ನೀಡುತ್ತದೆ. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರ ಪ್ರಾವಧಾನಗಳು (Provisions) ಹಾಗೂ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ, 2012 ಈ ಧ್ಯೇಯದ ಅನುಷ್ಠಾನವು ಪ್ರಾಥಮಿಕ ಚೌಕಟ್ಟುಗಳಾಗಿವೆ.

**2009–10ಕ್ಕೂ ಮುಂಚೆ, ಸಚಿವಾಲಯದಡಿ ಈ ಕೆಳಕಂಡ ಮೂರು ಯೋಜನೆಗಳು ಅನುಷ್ಠಾನದಲ್ಲಿದ್ದವು,**

i. ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಹಾಗೂ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗಾಗಿ ಮಕ್ಕಳ ನ್ಯಾಯ, ಮಕ್ಕಳ ಪೋಷಣೆ ಮತ್ತು ರಕ್ಷಣೆ ಕಾರ್ಯಕ್ರಮ;
ii. ಬೀದಿ ಮಕ್ಕಳಿಗಾಗಿ ಸಮಗ್ರ ಕಾರ್ಯಕ್ರಮ; ಹಾಗೂ
iii. ಶಿಶು ಗೃಹಗಳಿಗೆ ಸಹಾಯ ನೀಡುವ ಯೋಜನೆ

ಈ ಮೂರೂ ಯೋಜನೆಗಳನ್ನು ರಾಷ್ಟ್ರೀಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐಸಿಪಿಎಸ್–ICPS) ಎಂಬ ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಡಿ ಅನುಷ್ಠಾನಗೊಳಿಸಲಾಗಿತ್ತು. ಐಸಿಪಿಎಸ್ ಅನ್ನು 2009–10ರಲ್ಲಿ ಸಚಿವಾಲಯ ಅನುಷ್ಠಾನಗೊಳಿಸಿತ್ತು. ನಂತರದಲ್ಲಿ ಅಂದರೆ 2017ರಲ್ಲಿ ಈ ಯೋಜನೆಯನ್ನು 'ಮಕ್ಕಳ ರಕ್ಷಣಾ ಸೇವೆಗಳು' (ಸಿಪಿಎಸ್–CPS) ಎಂದು ಮರುನಾಮಕರಣಗೊಳಿಸಲಾಯಿತು. ಈ ಸಿಪಿಎಸ್ ಯೋಜನೆಯನ್ನು ಪ್ರಸ್ತುತ, ಅಂದರೆ 2021–22ರಿಂದ **ಮಿಷನ್ ವಾತ್ಸಲ್ಯ** ಯೋಜನೆಯಡಿ ವಿಲೀನಗೊಳಿಸಲಾಗಿದೆ.

## 1.1 ಕಾಣ್ಕೆ (ದೃಷ್ಟಿಕೋನ – Vision):

ಭಾರತದಲ್ಲಿರುವ ಪ್ರತಿಯೊಂದು ಮಗುವಿಗೂ ಆರೋಗ್ಯ ಹಾಗೂ ಸಂತೋಷಕರವಾದ ಬಾಲ್ಯ ಒದಗುವುದನ್ನು ಖಾತ್ರಿಪಡಿಸುವುದು, ಸುಸ್ಥಿರವಾದ ರೀತಿಯಲ್ಲಿ ಸಂಪೂರ್ಣ ಸಾಮರ್ಥ್ಯತೆಯನ್ನು ಕಂಡುಕೊಳ್ಳಲು ಅವರಿಗೆ ಅವಕಾಶಗಳು ದೊರಕುವುದನ್ನು ಖಾತ್ರಿಪಡಿಸುವುದು ಹಾಗೂ ಎಲ್ಲಾ ರೀತಿಯಲ್ಲೂ ಅಭಿವೃದ್ಧಿ ಹೊಂದುವುದನ್ನು ಖಾತ್ರಿಪಡಿಸುವುದು. ಮಿಷನ್ ವಾತ್ಸಲ್ಯವು ಮಕ್ಕಳಿಗೆ ಸಾಂಸ್ಥೀಕರಣವು ಕೊನೆಯ ತಂತ್ರ ಎಂಬ ತತ್ವವನ್ನು ಆಧರಿಸಿ ಸಂಕಷ್ಟಕರ ಪರಿಸ್ಥಿತಿಗಳಲ್ಲಿ ಮಾತ್ರ ಸಾಂಸ್ಥೀಕರಣ ಮಾಡಿದರೂ, ಅಂತಿಮವಾಗಿ ಮಕ್ಕಳಿಗೆ ಕುಟುಂಬ–ಆಧಾರಿತ ಸಾಂಸ್ಥಿಕೇತರ ಪೋಷಣೆಯನ್ನೇ ಪ್ರೋತ್ಸಾಹಿಸುತ್ತದೆ.

## 1.2 ಧ್ಯೇಯ (Mission)

ಮಕ್ಕಳ ಬೆಳವಣಿಗೆ ವಿವಿಧ ವಯಸ್ಸು ಹಾಗೂ ವಿವಿಧ ಹಂತಗಳಲ್ಲಿ, ಸೂಕ್ಷ್ಮ, ಬೆಂಬಲಾತ್ಮಕ ಹಾಗೂ ಹೊಂದಾಣಿಕೆಯಾಗುವಂತಹ ಪರಿಸರ ವ್ಯವಸ್ಥೆಯಲ್ಲಿ ಮಕ್ಕಳ ಪೋಷಣೆಯ ಹಂತಗಳು ಸಾಗುತ್ತದೆ. ಇದನ್ನು ಖಾತ್ರಿಪಡಿಸಲು, ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳ ಸಾಂಸ್ಥಿಕ ಚೌಕಟ್ಟನ್ನು ಬಲಪಡಿಸುವುದು ಹಾಗೂ ದೇಶದ ಎಲ್ಲಾ ಜಿಲ್ಲೆಗಳಲ್ಲಿಯೂ ಕಾನೂನುಬದ್ಧ ಹಾಗೂ ಸೇವಾ ವಿತರಣೆಯ ವ್ಯವಸ್ಥೆಗಳ ಮೂಲಕ ಈ ಧ್ಯೇಯ ಈಡೇರಿಸುವ ಆಶಯವನ್ನು ಹೊಂದಿದೆ. ಸಂಕಷ್ಟದ ಪರಿಸ್ಥಿತಿಯಲ್ಲಿರುವ ಮಕ್ಕಳನ್ನು ಕಾನೂನುಬದ್ಧ ಹಾಗೂ ಸೇವಾ ವಿತರಣೆ ವ್ಯವಸ್ಥೆಗಳ ಮೂಲಕ ಸಂಯೋಜಿಸಲಾಗುವುದು. ಇದೇ ಸಮಯದಲ್ಲಿ ಸಮುದಾಯ ಮಟ್ಟದಲ್ಲಿ ಸ್ಥಳೀಯ ಅಭಿವೃದ್ಧಿ ಯೋಜನೆಗಳು ಹಾಗೂ ಅದಕ್ಕೆ ಪೂರಕವಾದ ಆಯವ್ಯಯಗಳೊಂದಿಗೆ ಮಕ್ಕಳ ಕಲ್ಯಾಣ ಹಾಗೂ ಸಂರಕ್ಷಣೆಯ ವಿಷಯಗಳಿಗೆ ಸಮಾನ ಒತ್ತನ್ನು ನೀಡಲಾಗುವುದು. ಈ ಪ್ರಕಾರವಾಗಿ, ಸಮುದಾಯದಲ್ಲಿ ಬಲಿಷ್ಠ ಮಕ್ಕಳ–ಸ್ನೇಹಿ ಪರಿಸರ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ವಕಾಲತ್ತು, ಅರಿವು ಮೂಡಿಸುವಿಕೆ, ಸಾಮರ್ಥ್ಯ ಅಭಿವೃದ್ಧಿ ಹಾಗೂ ತಡೆಗಟ್ಟುವ ಕ್ರಮಗಳಿಗೆ ಸಂಬಂಧಪಟ್ಟಂತೆ ಸಾಂಸ್ಥಿಕ ಚೌಕಟ್ಟಿನಡಿ ಬರುವ ಸಮಿತಿಗಳು ಶಾಸನಬದ್ಧ ಹಾಗೂ ಸೇವಾ ವಿತರಣಾ ರಚನೆಗಳಿಗೆ ಪೂರಕವಾಗಿರುವಂತೆ ನೋಡುವುದೇ ಈ ಮಿಷನ್‌ನ ಮುಖ್ಯ ಧ್ಯೇಯವಾಗಿದೆ,

### ಈ ಧ್ಯೇಯದ ಗುರಿಗಳು:

i. ಸಂಕಷ್ಟದ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಬೆಂಬಲ ಹಾಗೂ ಸುಸ್ಥಿರತೆ.

ii. ವಿವಿಧ ಹಿನ್ನೆಲೆಗಳನ್ನು ಹೊಂದಿರುವ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಸಂದರ್ಭ–ಆಧಾರಿತ ಪರಿಹಾರಗಳ ಅಭಿವೃದ್ಧಿ.

iii. ನವೀನ ಪರಿಹಾರಗಳನ್ನು ಉತ್ತೇಜಿಸಲು ಅವಕಾಶ ಒದಗಿಸುವುದು

iv. ಸಹಭಾಗಿತ್ವ ಕ್ರಮವನ್ನು ಭದ್ರಪಡಿಸುವುದು

## 1.3 ಉದ್ದೇಶಗಳು–Objectives:

### ಮಿಷನ್ ವಾತ್ಸಲ್ಯದ ಮುಖ್ಯ ಉದ್ದೇಶಗಳು:

i. ಮಿಷನ್‌ನಡಿ ಅಂದರೆ ಈ ಯೋಜನೆಯಡಿ ಕೈಗೊಳ್ಳುವ ಎಲ್ಲಾ ಚಟುವಟಿಕೆಗಳು ಹಾಗೂ ಕ್ರಮಗಳ ಸಂದರ್ಭಗಳಲ್ಲಿ ಮಗುವನ್ನು ಪ್ರಮುಖ ಕೇಂದ್ರಿತವಾಗಿಟ್ಟುಕೊಂಡೇ ಆಡಳಿತದ ಯೋಜನೆಯಲ್ಲಿ ಮಕ್ಕಳಿಗೆ ಆದ್ಯತೆ ನೀಡಲಾಗುವುದು.

ii. ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಾಗ ಮಕ್ಕಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಳ್ಳುವುದು ಹಾಗೂ ಕುಟುಂಬಗಳ ಬೆಂಬಲಕ್ಕಾಗಿ ಸುಭದ್ರ ಸಾಮಾಜಿಕ ಸುರಕ್ಷತೆಯೊಂದಿಗೆ ಮಕ್ಕಳು ಸಂತೋಷಕರವಾದ ಕೌಟುಂಬಿಕ ಪರಿಸರದಲ್ಲಿ ಬೆಳೆಯುವ ಹಕ್ಕನ್ನು ಖಾತ್ರಿಪಡಿಸಲು ದೃಢೀಕೃತ ಕ್ರಿಯೆ.

iii. ಮಕ್ಕಳಿಗೆ ಬದುಕುವ, ಅಭಿವೃದ್ಧಿ ಹೊಂದುವ, ರಕ್ಷಣೆ ಪಡೆಯುವ ಹಾಗೂ ಭಾಗವಹಿಸುವಿಕೆಯ ಹಕ್ಕುಗಳನ್ನು ಖಾತ್ರಿಪಡಿಸುವುದು.

iv. ರಾಷ್ಟ್ರ, ಪ್ರಾದೇಶಿಕ, ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಅಗತ್ಯ ಸೇವೆಗಳು ಹಾಗೂ ತುರ್ತು ಪರಿಸ್ಥಿತಿ ನಿರ್ವಹಣೆ ತಲುಪುವಿಕೆ, ಕುಟುಂಬಗಳಲ್ಲಿ ಹಾಗೂ ಸಮುದಾಯದೊಳಗೆ ಸಾಂಸ್ಥಿಕೇತರ ಪೋಷಣೆ, ಸಾಂಸ್ಥಿಕ ಪೋಷಣೆ ಆಪ್ತಸಮಾಲೋಚನೆ ಹಾಗೂ ಬೆಂಬಲ ಸೇವೆಗಳ ಸ್ಥಾಪನೆ.

v. ಎಲ್ಲಾ ಹಂತಗಳಲ್ಲಿಯೂ ಸೂಕ್ತ ಅಂತರ್–ಕ್ಷೇತ್ರೀಯ ಪ್ರತಿಕ್ರಿಯೆಯನ್ನು ಖಾತ್ರಿಪಡಿಸುವುದು, ಮಕ್ಕಳಿಗೆ ತಡೆರಹಿತ ಸೇವಾ ಹಂಚಿಕೆಗಾಗಿ ಸಂಯೋಜಿತ ಪ್ರಯತ್ನಗಳನ್ನು ಉತ್ತೇಜಿಸಲು ಎಲ್ಲಾ ಸಹಭಾಗಿತ್ವ ವ್ಯವಸ್ಥೆಗಳ ಜೊತೆ ಸಂಯೋಜನೆ ಹಾಗೂ ಸಂಪರ್ಕವನ್ನು ಖಾತ್ರಿಪಡಿಸುವುದು.

vi. ಕುಟುಂಬ ಹಾಗೂ ಸಮುದಾಯ ಮಟ್ಟದಲ್ಲಿ ಮಕ್ಕಳ ಸಂರಕ್ಷಣೆಯನ್ನು ಬಲಪಡಿಸುವುದು, ಮಕ್ಕಳ ಮೇಲೆ ಪರಿಣಾಮ ಬೀರುವಂತಹ ಗಂಡಾಂತರಗಳು ಹಾಗೂ ಅಪಾಯಗಳನ್ನು ಗುರುತಿಸಲು ಕುಟುಂಬಗಳು ಹಾಗೂ ಸಮುದಾಯಗಳನ್ನು ಸಜ್ಜುಗೊಳಿಸುವುದು, ಸಂಕಷ್ಟ, ಗಂಡಾಂತರ ಹಾಗೂ ನಿಂದನೆಗೆ ಈಡಾಗುವ ಪರಿಸ್ಥಿತಿಗಳಿಂದ ಮಕ್ಕಳನ್ನು ರಕ್ಷಿಸಲು ತಡೆಗಟ್ಟುವ ಕ್ರಮಗಳನ್ನು ಸೃಷ್ಟಿಸುವುದು ಹಾಗೂ ಪ್ರೋತ್ಸಾಹಿಸುವುದು.

vii. ಮಕ್ಕಳನ್ನು ಬೆಂಬಲಿಸಲು ಕಾನೂನಿನ ಚೌಕಟ್ಟಿನೊಳಗೆ ಖಾಸಗಿ ಕ್ಷೇತ್ರದ ಪಾಲುದಾರಿಕೆಗಳು ಹಾಗೂ ಮಧ್ಯಸ್ಥಿಕೆಗಳನ್ನು ಪ್ರೋತ್ಸಾಹಿಸುವುದು.

viii. ಮಕ್ಕಳ ಹಕ್ಕುಗಳು, ಮಕ್ಕಳ ದುರ್ಬಲತೆಯ ಬಗ್ಗೆ ಹಾಗೂ ಸರ್ಕಾರದಿಂದ ಪ್ರಾಯೋಜಿಸಿರುವ ರಕ್ಷಣೆಯ ಕ್ರಮಗಳ ಕುರಿತು ಸಾರ್ವಜನಿಕರನ್ನು ಜಾಗೃತರನ್ನಾಗಿಸುವುದು, ಸಾರ್ವಜನಿಕ ಅರಿವನ್ನು ಹೆಚ್ಚಿಸುವುದು ಹಾಗೂ ಮಕ್ಕಳ ಹಿತಾಸಕ್ತಿಯನ್ನು ಖಾತ್ರಿಪಡಿಸಲು ಸಮುದಾಯವನ್ನು ಎಲ್ಲಾ ಹಂತಗಳಲ್ಲಿಯೂ ಭಾಗೀಧಾರರನನ್ನಾಗಿ ಮಾಡಿ ಸಜ್ಜುಗೊಳಿಸುವುದು.

ix. ಎಲ್ಲಾ ಹಂತಗಳಲ್ಲಿಯೂ ಕರ್ತವ್ಯ ನಿರ್ವಾಹಕರು ಹಾಗೂ ಸೇವೆ ಒದಗಿಸುವವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.

x. ಉತ್ತಮವಾಗಿ ವ್ಯಾಖ್ಯಾನಿಸಬಹುದಾದ ಪರಿಣಾಮ ಹಾಗೂ ಫಲಿತಾಂಶಕ್ಕಾಗಿ ಉದ್ದೇಶ ಆಧಾರಿತ ಮಾನದಂಡಗಳ ಪ್ರಗತಿಯ ನಿಗಾವಣೆ ಮಾಡುವುದು, ಹಾಗೂ

xi. ಗ್ರಾಮ, ವಾರ್ಡ್ ಹಾಗೂ ನಗರ ಮುನಿಸಿಪಲ್ ವಾರ್ಡ್ ವ್ಯಾಪ್ತಿಯೊಳಗೆ ನಗರ ಕ್ಲಸ್ಟರ್ ಮಟ್ಟದಲ್ಲಿ ಗಮನ ನೀಡಬೇಕಾದ ಅಗತ್ಯವಿರುವ ವಿಷಯಗಳ ಸುಸ್ಥಿರ ಅಂದಾಜಿಸುವಿಕೆ, ಸೂಕ್ತ ಮಧ್ಯಸ್ಥಿಕೆಗಳ ಅನುಷ್ಠಾನ, ಮಕ್ಕಳ ಸಾಮಾಜಿಕ ಸುರಕ್ಷತೆಗಾಗಿ ಬಲಿಷ್ಠ ಸಾಮಾಜಿಕ ಜಾಲ ಅಭಿವೃದ್ಧಿಪಡಿಸಲು ನಿಯಮಿತವಾದ ನಿಗಾವಣೆ ವಹಿಸಲು ಪಂಚಾಯಿತಿಗಳು ಹಾಗೂ ಮುನಿಸಿಪಲ್ ಸ್ಥಳೀಯ ಸಂಸ್ಥೆಗಳ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಖಾತ್ರಿಪಡಿಸುವುದು.

ಕೇಂದ್ರ ಹಾಗೂ ರಾಜ್ಯ/ಕೇಂದ್ರಾಡಳಿತ ಸರ್ಕಾರಗಳ ನಡುವೆ ನಿಗಧಿತ ದರ ಹಂಚಿಕೆ ಅನುಪಾತದ ಪ್ರಕಾರ, ಮಿಷನ್ ವಾತ್ಸಲ್ಯವನ್ನು ಕೇಂದ್ರ ಪ್ರಾಯೋಜಿತ ಯೋಜನೆಯನ್ನಾಗಿ ಅನುಷ್ಠಾನಗೊಳಿಸಲಾಗುವುದು.

# 2. ಅನುಷ್ಠಾನಕ್ಕಾಗಿ ಸಾಂಸ್ಥಿಕ ಚೌಕಟ್ಟು – INSTITUTIONAL FRAMEWORK FOR IMPLEMENTATION

**"ಮಿಷನ್ ವಾತ್ಸಲ್ಯ"** ಯೋಜನೆಯು, ಕೇಂದ್ರ, ರಾಜ್ಯ ಹಾಗೂ ಜಿಲ್ಲಾಡಳಿತಗಳಿಂದ ವಿವಿಧ ಹಂತಗಳಲ್ಲಿ ಉಸ್ತುವಾರಿ/ನಿಗಾವಣೆ ವಹಿಸುವ ಮೂಲಕ ಬಲಿಷ್ಠ ಅನುಷ್ಠಾನ ಚೌಕಟ್ಟನ್ನು ರಚಿಸಿ ವ್ಯಾಖ್ಯಾನಿತ ಸಾಂಸ್ಥಿಕ ವ್ಯವಸ್ಥೆಯನ್ನು ಹೊಂದಲು ಅಪೇಕ್ಷಿಸುತ್ತದೆ.

## 2.1 ಕೇಂದ್ರ ಮಟ್ಟದ ಚೌಕಟ್ಟು – Framework at Central Level:

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ (ಎಂಡಬ್ಲ್ಯೂಸಿಡಿ MWCD) ಕಾರ್ಯದರ್ಶಿಯಡಿ ಇರುವ **ಮಿಷನ್ ವಾತ್ಸಲ್ಯ** ಯೋಜನೆಯ ಅನುಮೋದನಾ ಮಂಡಳಿ (ಪಿಎಬಿ–PAB) ಈ ಯೋಜನೆಯಡಿಯಲ್ಲಿ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಬರುವಂತಹ ಅನುದಾನಗಳ ಕೋರಿಕೆಗಳನ್ನು ಬಿಡುಗಡೆಗೊಳಿಸಲು ಬರುವಂತಹ ಹಣಕಾಸಿನ ಪ್ರಸ್ತಾವನೆಗಳು ಹಾಗೂ ವಾರ್ಷಿಕ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡುತ್ತದೆ. ರಾಜ್ಯ/ ಕೇಂದ್ರಾಡಳಿತ ಪ್ರದೇಶವು ಪರಿಶೀಲನೆಗಾಗಿ/ಅನುಮೋದನೆಗಾಗಿ ತಮ್ಮ ಅನುಷ್ಠಾನ ಯೋಜನೆಗಳ ಜೊತೆಗೆ ಹಣಕಾಸಿನ ಪ್ರಸ್ತಾವನೆಗಳನ್ನು ಮುಂಚಿತವಾಗಿ ತುಂಬಿರುವ ನಿಗಧಿತ ನಮೂನೆಗಳನ್ನು ಸಲ್ಲಿಸಬೇಕು. ಅಂದಾಜಿಸುವಿಕೆ ಹಾಗೂ ಅನುಮೋದನೆಗಾಗಿ ಮಂಡಳಿಯ ಮುಂದೆ ಹಾಜರುಪಡಿಸಬೇಕು. ಮಂಡಳಿಯ ಅಧ್ಯಕ್ಷರಿಗೆ ಮಂಡಳಿಯ ಸಭೆಗೆ ಹಾಜರಾಗಲು ಇತರೆ ಯಾರಾದರೂ ಕ್ಷೇತ್ರದ ತಜ್ಞರು, ಕಾನೂನುಬದ್ಧ ಸಮಿತಿಗಳು/ ಇತರ ಆಹ್ವಾನಿತರನ್ನು ಆಹ್ವಾನಿಸಲು ಅವಕಾಶವಿರುತ್ತದೆ.

**ಮಿಷನ್ ವಾತ್ಸಲ್ಯವು** ಕೇಂದ್ರ ಯೋಜನಾ ಉಸ್ತುವಾರಿ ಘಟಕ (ಸಿಪಿಎಂಯು–CPMU) ಮಂಡಳಿಗೆ ಅಗತ್ಯ ಕಾರ್ಯದರ್ಶಿ ನೆರವನ್ನು ಒದಗಿಸುತ್ತದೆ. ಸಿಪಿಎಂಯು ಸಚಿವಾಲಯದಲ್ಲಿ ರಾಜ್ಯ ಸರ್ಕಾರಗಳೊಂದಿಗೆ ಸಂಯೋಜನೆ ಹಾಗೂ ಉಸ್ತುವಾರಿ ವಹಿಸುವ ಕೆಲಸವನ್ನು ನಿರ್ವಹಿಸುತ್ತದೆ. ಈ ಕಾರ್ಯಾಲಯ ದೆಹಲಿಯಲ್ಲಿರುತ್ತದೆ ಹಾಗೂ ಮಿಷನ್ ನಿರ್ದೇಶಕರಾಗಿ ಜಂಟಿ ಕಾರ್ಯದರ್ಶಿ ಮಟ್ಟದ ಅಧಿಕಾರಿಯ ಮುಂದಾಳತ್ವದಲ್ಲಿ ಮಿಷನ್ ನಿರ್ದೇಶನಾಲಯದಂತೆ ಕಾರ್ಯನಿರ್ವಹಿಸುತ್ತದೆ.

**ಮಿಷನ್ ವಾತ್ಸಲ್ಯ ಯೋಜನೆ ಅನುಮೋದನಾ ಮಂಡಳಿಯಲ್ಲಿರುವ ಸದಸ್ಯರ ವಿವರಗಳು ಈ ಕೆಳಗಿನಂತಿರುತ್ತದೆ:**

| ಕ್ರ.ಸಂ. | ಸದಸ್ಯರು | ಹುದ್ದೆ |
|---|---|---|
| 1. | ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ | ಅಧ್ಯಕ್ಷರು |
| 2. | ಕಾರ್ಯದರ್ಶಿ, ಗೃಹ ವ್ಯವಹಾರಗಳ ಸಚಿವಾಲಯ | ಸದಸ್ಯರು |
| 3. | ಕಾರ್ಯದರ್ಶಿ, ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯ | ಸದಸ್ಯರು |
| 4. | ಕಾರ್ಯದರ್ಶಿ, ಪಂಚಾಯಿತಿ ರಾಜ್ ಸಚಿವಾಲಯ | ಸದಸ್ಯರು |
| 5. | ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಸಚಿವಾಲಯ | ಸದಸ್ಯರು |
| 6. | ಕಾರ್ಯದರ್ಶಿ, ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ | ಸದಸ್ಯರು |
| 7. | ಕಾರ್ಯದರ್ಶಿ, ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯ | ಸದಸ್ಯರು |
| 8. | ಕಾರ್ಯದರ್ಶಿ, ಯುವಜನ ಸೇವಾ ವ್ಯವಹಾರಗಳು ಹಾಗೂ ಕ್ರೀಡಾ ಸಚಿವಾಲಯ | ಸದಸ್ಯರು |
| 9. | ಕಾರ್ಯರ್ಶಿ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ | ಸದಸ್ಯರು |
| 10. | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಸಿಇಒ), ನೀತಿ ಆಯೋಗ | ಸದಸ್ಯರು |
| 11. | ಹೆಚ್ಚುವರಿ ಕಾರ್ಯದರ್ಶಿ ಹಾಗೂ ಹಣಕಾಸು ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ | ಸದಸ್ಯರು |
| 12. | ಜಂಟಿ ಕಾರ್ಯದರ್ಶಿ, ಮಿಷನ್ ನಿರ್ದೇಶಕರು (ಮಕ್ಕಳ ಕಲ್ಯಾಣ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ | ಸದಸ್ಯ ಕಾರ್ಯದರ್ಶಿ |
| 13. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಸಿಎಆರ್‌ಎ). | ಸದಸ್ಯರು |
| 14. | ನಿರ್ದೇಶಕರು, ರಾಷ್ಟ್ರೀಯ ಸಾರ್ವಜನಿಕ ಸಹಕಾರ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ಎನ್‌ಐಪಿಸಿಸಿಡಿ) | ಸದಸ್ಯರು |
| 15. | ಇತರೆ ಯಾವುದಾದರೂ ಕ್ಷೇತ್ರದ ತಜ್ಞರು/ ಕಾನೂನುಬದ್ಧ ಅಂಗಗಳು | ಸಹ ಆಯ್ಕೆಯಾದ ಸದಸ್ಯರು |

**ಪಿಎಬಿ ಸಭೆಗೆ ಸದಸ್ಯರು ಅಥವಾ ಅವರು ನಾಮ ನಿರ್ದೇಶನ ಮಾಡುವ ಪ್ರತಿನಿಧಿಗಳು ಹಾಜರಾಗಬಹುದು.**

## 2.2 ಹಣದ ಹರಿವಿನ ವ್ಯವಸ್ಥೆಗಳು – Fund Flow Arrangements:

ದೇಶದಾದ್ಯಂತ ಸೇವೆಗಳ ದೊರೆಯುವಿಕೆಯನ್ನು ಸಾರ್ವತ್ರೀಕರಣಗೊಳಿಸಲು ಹಾಗೂ ಗುಣಮಟ್ಟದ ಸುಧಾರಣೆಗಾಗಿ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಬೆಂಬಲ ನೀಡಲು, ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪಾಲುದಾರಿಕೆಯೊಂದಿಗೆ **ಈ ಯೋಜನೆಯನ್ನು** ಕೇಂದ್ರ ಪ್ರಾಯೋಜಿತ ಯೋಜನೆಯನ್ನಾಗಿ ಅನುಷ್ಠಾನಗೊಳಿಸಲಾಗುವುದು. ಕೇಂದ್ರ ಹಣಕಾಸು ಸಚಿವಾಲಯ ನಿಗಧಿಪಡಿಸಿರುವಂತೆ ಹಣಕಾಸು ಹಂಚಿಕೆ ಕೇಂದ್ರ ಹಾಗೂ ರಾಜ್ಯ ಮತ್ತು ಶಾಸಕಾಂಗ ಇರುವ ಕೇಂದ್ರಾಡಳಿತ ಪ್ರದೇಶಗಳ ನಡುವೆ 60:40 ಅನುಪಾತದಲ್ಲಿರುತ್ತದೆ.

ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ಹಾಗೂ ತ್ರಿಪುರ, ಹಿಮಾಲಯನ್ ರಾಜ್ಯಗಳಾದ ಹಿಮಾಚಲ ಪ್ರದೇಶ ಹಾಗೂ ಉತ್ತರಾಖಾಂಡ್, ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇಂದ್ರ ಹಾಗೂ ರಾಜ್ಯದ ಪಾಲು 90:10 ಅನುಪಾತದಲ್ಲಿರುತ್ತದೆ. ಶಾಸಕಾಂಗ ಇಲ್ಲದಿರುವಂತಹ ಕೇಂದ್ರಾಡಳಿತ ಪ್ರದೇಶಗಳಲ್ಲಿ 100% ಕೇಂದ್ರದ ಪಾಲಿರುತ್ತದೆ.

ಯೋಜನೆಯಡಿ ಹಣವನ್ನು ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ (ಪಿಎಫ್ಎಂಎಸ್–PFMS) ಮೂಲಕ ರಾಜ್ಯಗಳು/ ಕೇಂದ್ರಾಡಳಿತ ಸರ್ಕಾರಗಳಿಗೆ ಬಿಡುಗಡೆಗೊಳಿಸಲಾಗುವುದು. ಪೂರಕ ರಾಜ್ಯದ ಪಾಲಿನ ಹಣವನ್ನು ಸಾಧ್ಯವಾದಷ್ಟು ಬೇಗ ಬಿಡುಗಡೆಗೊಳಿಸಬೇಕು, ಕೇಂದ್ರದ ಪಾಲು ಬಿಡುಗಡೆ ಆದ 40 ದಿನಗಳಿಗಿಂತ ಹೆಚ್ಚು ವಿಳಂಬವಾಗುವಂತಿಲ್ಲ. ಈ ನಿಧಿಯನ್ನು ಮಿಷನ್ ವಾತ್ಸಲ್ಯದ ಸಿಂಗಲ್ ನೋಡಲ್ ಖಾತೆಯಲ್ಲಿ ರಾಜ್ಯದ ಸಿಂಗಲ್ ನೋಡಲ್ ಏಜೆನ್ಸಿ (ಎಸ್ಎನ್ಏರಿ–SNA) ನಿರ್ವಹಿಸುತ್ತದೆ. ರಾಜ್ಯಗಳು/ ಕೇಂದ್ರಾಡಳಿತ ಸರ್ಕಾರಗಳು, ಹಣ ಬಿಡುಗಡೆಗೊಳಿಸುವ ವಿಧಾನಕ್ಕೆ ಸಂಬಂಧಪಟ್ಟಂತೆ ಕೇಂದ್ರ ಹಣಕಾಸು ಸಚಿವಾಲಯದ ವೆಚ್ಚ ಇಲಾಖೆ ಹೊರಡಿಸಿರುವ ಮಾರ್ಗಸೂಚಿಗಳು ಹಾಗೂ ಕಾಲಕಾಲಕ್ಕೆ ಹೊರಡಿಸುವ ಹೆಚ್ಚಿನ ಮಾರ್ಗಸೂಚಿಗಳನ್ನು ಅನುಸರಿಸಬೇಕು.

**ಕಡ್ಡಾಯ ಷರತ್ತು:** ಈ ಯೋಜನೆಯಡಿ ವಿವಿಧ ಉಪಯೋಜನೆಗಳು/ ಘಟಕಗಳಡಿ ನಿಗಧಿಪಡಿಸಿರುವ ಷರತ್ತುಗಳ ಜೊತೆಗೆ, ಮತ್ಯಾವುದಾದರೂ ಉಪ–ಯೋಜನೆ/ ಇತರೆ ಅಂಶದ ಲಾಭಗಳನ್ನು ಪಡೆಯಲು, ರಾಜ್ಯ ಸರ್ಕಾರ ಎಲ್ಲಾ ಕೇಂದ್ರೀಯ ಪ್ರಾಯೋಜಿತ ಯೋಜನೆಗಳ (ಸಿಎಸ್ಎಸ್‌ಗಳು–CSSs) ಅಧಿಕೃತ ಹೆಸರು ಹಾಗೂ ಈ ಯೋಜನೆಯ ಬ್ರ್ಯಾಂಡಿಂಗ್‌ಗೆ ಸಂಬಂಧಪಟ್ಟಂತೆ ಭಾರತ ಸರ್ಕಾರ ಹೊರಡಿಸುವ ಮತ್ಯಾವುದಾದರೂ ಮಾರ್ಗಸೂಚಿಗಳು/ ಸೂಚನೆಗಳನ್ನು ಪಾಲಿಸುವ ಅಗತ್ಯವಿರುತ್ತದೆ. (CSSs-Centrally Sponsored Schemes)

## 2.3 ರಾಜ್ಯ ಮಟ್ಟದ ಉಸ್ತುವಾರಿ ಹಾಗೂ ಪುನರ್‌ಮನನ (ಪ್ರಗತಿ ಪರಿಶೀಲನೆ) – State Level Monitoring and Review:

ರಾಜ್ಯ ಮಟ್ಟದಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಸಹಭಾಗಿತ್ವವನ್ನು (ಒಮ್ಮುಖತೆಯನ್ನು) ಸಾಧಿಸಲು ಹಾಗೂ ಪ್ರೋತ್ಸಾಹಿಸಲು, ಉಸ್ತುವಾರಿ ಮಾಡಲು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿ ಇರಬೇಕು. ಈ ಸಮಿತಿಯು ಒಂದು ಹಣಕಾಸು ವರ್ಷದಲ್ಲಿ ಕನಿಷ್ಟ ಎರಡು ಬಾರಿ ಸಭೆ ನಡೆಸಬೇಕು. ಅಧ್ಯಕ್ಷರು ಸಮಿತಿಗೆ ಮತ್ಯಾವುದಾದರೂ ವಿವಿಧ ಕ್ಷೇತ್ರದ ತಜ್ಞರು/ ಶಾಸನಬದ್ಧ ಅಂಗ ಸಂಸ್ಥೆಗಳು/ ಇಲಾಖೆಗಳನ್ನು ಸೇರ್ಪಡೆಗೊಳಿಸಬಹುದು.

**ಸಮಿತಿಯ ಸದಸ್ಯರಲ್ಲಿ ಈ ಕೆಳಕಂಡ ಹಂತದ ಅಧಿಕಾರಿಗಳು ಇರಬೇಕು:**

| ಕ್ರ. ಸಂ. | ಸದಸ್ಯರು | ಹುದ್ದೆ |
|---|---|---|
| **1.** | **ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳು** | **ಅಧ್ಯಕ್ಷರು** |
| 2. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗೃಹ ವ್ಯವಹಾರಗಳು | ಸದಸ್ಯರು |
| 3. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಇಲಾಖೆ | ಸದಸ್ಯರು |
| **4.** | **ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** | **ಸದಸ್ಯ ಕಾರ್ಯದರ್ಶಿ** |
| 5. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| 6. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಕಾನೂನು ಹಾಗೂ ಸುವ್ಯವಸ್ಥೆ ಇಲಾಖೆ | ಸದಸ್ಯರು |
| 7. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಶಿಕ್ಷಣ ಇಲಾಖೆ | ಸದಸ್ಯರು |
| 8. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಯುವಜನ ಸೇವಾ ವ್ಯವಹಾರಗಳು ಹಾಗೂ ಕ್ರೀಡೆಗಳು | ಸದಸ್ಯರು |
| 9. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಪಂಚಾಯಿತಿ ರಾಜ್ ಇಲಾಖೆ | ಸದಸ್ಯರು |
| 10. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಇಲಾಖೆ | ಸದಸ್ಯರು |
| 11. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮ | ಸದಸ್ಯರು |
| 12. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಸದಸ್ಯರು |
| 13. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ/ ಕಾರ್ಮಿಕ ಮತ್ತು ಉದ್ಯೋಗ ಇಲಾಖೆ | ಸದಸ್ಯರು |
| 14. | ಇತರೇ ಯಾವುದೇ ಕ್ಷೇತ್ರದ ತಜ್ಞರು/ ಶಾಸನಬದ್ಧ ಅಂಗ ಸಂಸ್ಥೆಗಳ ಪದಾಧಿಕಾರಿಗಳು/ ಇಲಾಖೆಗಳು | ಸಹ ಆಯ್ಕೆಯಾದ ಸದಸ್ಯರು |

ಅನುಷ್ಠಾನ, ಉಸ್ತುವಾರಿ ಹಾಗೂ ಸಂಯೋಜನೆಗೆ ಸಂಬಂಧಪಟ್ಟಂತೆ ರಾಜ್ಯಮಟ್ಟದ ಸಾಂಸ್ಥಿಕ ವ್ಯವಸ್ಥೆಯು ಈ ಕೆಳಗಿನಂತೆ ಶಾಸನಬದ್ಧ ಹಾಗೂ ಸೇವಾ ವಿತರಣಾ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ:

i. **ಶಾಸನಬದ್ಧ (ಕಾನೂನುಬದ್ದ) ವ್ಯವಸ್ಥೆ –** (i) ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ, ಹಾಗೂ ರಾಜ್ಯ ದತ್ತು ಸಂಪನ್ಮೂಲ ಕೇಂದ್ರ ಒಳಗೊಂಡಿರುವ ರಾಜ್ಯಮಟ್ಟದ ಶಾಸನಬದ್ಧ ವ್ಯವಸ್ಥೆಗಳು; (ii) ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿಗಳು, ಮಕ್ಕಳ ನ್ಯಾಯ ಮಂಡಳಿಗಳು ಹಾಗೂ ಮಕ್ಕಳ ವಿಶೇಷ ಪೊಲೀಸ್ ಘಟಕಗಳು ಜಿಲ್ಲಾ ಮಟ್ಟದ ಶಾಸನಬದ್ಧ ವ್ಯವಸ್ಥೆ.

***ii.*** **ಸೇವಾ ವಿತರಣಾ ವ್ಯವಸ್ಥೆಗಳು –** ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳಾಗಿ ಕಾರ್ಯನಿರ್ವಹಿಸಲು (i) ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ (ii) ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ; (iii) ಜಿಲ್ಲಾ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ; (iv) ಮಹಿಳೆಯರು ಹಾಗೂ ಮಕ್ಕಳ/ ಸಾಮಾಜಿಕ ನ್ಯಾಯದ ವಿಷಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪಂಚಾಯತ್ ರಾಜ್ ಸಂಸ್ಥೆಗಳು/ನಗರ ಸ್ಥಳೀಯ ಸಂಸ್ಥೆಗಳ ಸಮಿತಿಗಳು. ***(ಮಾಹಿತಿಗಾಗಿ: ನಮ್ಮ ರಾಜ್ಯದಲ್ಲಿ ಹಾಲಿ ರಾಜ್ಯ ಮಟ್ಟದಲ್ಲಿ ರಾಜ್ಯ ಮಕ್ಕಳ ರಕ್ಷಣಾ ಸಮಿತಿ–SCPC ಅಂತಲೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ–DCPC ಅಂತ ಕಾರ್ಯನಿರ್ವಹಿಸುತ್ತಿದೆ)***

## 2.4 ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ – State Child Protection Society (SCPS):

**ಮಿಷನ್ ವಾತ್ಸಲ್ಯ ಯೋಜನೆಯ** ಮ್ಯಾಪಿಂಗ್ ಹಾಗೂ ಯೋಜನೆ ತಯಾರಿಕೆ ಒಳಗೊಂಡಂತೆ ಅನುಷ್ಠಾನವನ್ನು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015ರಡಿ ಸ್ಥಾಪಿಸಲಾಗಿರುವ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಸಿ) ಖಾತ್ರಿಪಡಿಸುತ್ತದೆ. ಎಸ್‌ಸಿಪಿಎಸ್, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012, (POCSO) ಬಾಲ್ಯವಿವಾಹ ನಿಷೇಧ ಕಾಯ್ದೆ– 2006, (CMPA) ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಆಯೋಗಗಳ ಕಾಯ್ದೆ–2005 (ಸಿಪಿಸಿಆರ್ ಕಾಯ್ದೆ–(CPCR)), ಜೊತೆಗೆ ಅದರಡಿ ರೂಪಿಸಲ್ಪಟಿರುವ ನಿಯಮಾವಳಿಗಳು ಹಾಗೂ ನಿಬಂಧನೆಗಳು, ಹಿಂದೂ ದತ್ತು ಹಾಗೂ ನಿರ್ವಹಣಾ ಕಾಯ್ದೆ (ಹೆಚ್‌ಎಎಂಎ–(HAMA)) 1956, ಪಾಲಕರು ಹಾಗೂ ಮಕ್ಕಳ ಕಾಯ್ದೆ (ಜಿಎಡಬ್ಲ್ಯೂಎ–(GAWA)) 1890, ಮಕ್ಕಳು ಹಾಗೂ ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986 (CALPRA) , ಹಾಗೂ ಮಾನವ ಅನೈತಿಕ ಕಳ್ಳ ಸಾಗಣೆ ತಡೆಗಟ್ಟುವ ಕಾಯ್ದೆ–1986 (ITPA), ಗರ್ಭಧಾರಣೆ ಪೂರ್ವ ಹಾಗೂ ಪ್ರಸವಪೂರ್ವ ತಂತ್ರಗಳು (ಭ್ರೂಣಲಿಂಗ ಪತ್ತೆ ನಿಷೇಧ) ಕಾಯ್ದೆ–1994 (PC-PNDT) ಹಾಗೂ ಇತರೆ ಕಾಯ್ದೆ, ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಜಾರಿಯಲ್ಲಿರುವ ನಿಯಮಾವಳಿ, ನಿಬಂಧನೆಗಳು ಹಾಗೂ ನೀತಿ ಒಳಗೊಂಡಂತೆ, ರಾಜ್ಯದಲ್ಲಿ ಜಾರಿಯಲ್ಲಿರುವ ಮಕ್ಕಳ ಕಲ್ಯಾಣ ಹಾಗೂ ರಕ್ಷಣೆಯ ಕಾನೂನುಗಳು, ನೀತಿಗಳು ಹಾಗೂ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಸಂಯೋಜನೆಗಾಗಿ ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗೆ ಅಗತ್ಯ ನೆರವನ್ನು ಒದಗಿಸುತ್ತದೆ.

ಎಸ್‌ಸಿಪಿಎಸ್ ಕಚೇರಿ ರಾಜ್ಯ ಕೇಂದ್ರಸ್ಥಾನದಲ್ಲಿರುತ್ತದೆ ಹಾಗೂ ರಾಜ್ಯ ಮಿಷನ್ ನಿರ್ದೇಶನಾಲಯದಂತೆ ಕಾರ್ಯನಿರ್ವಹಿಸುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಿಷನ್ ವಾತ್ಸಲ್ಯ ಅನುಷ್ಠಾನಕ್ಕಾಗಿ ಗುರುತಿಸಲ್ಪಟ್ಟಿರುವ ರಾಜ್ಯದ ಸಾಮಾಜಿಕ ನ್ಯಾಯ ಸಬಲೀಕರಣದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು ಎಸ್‌ಸಿಪಿಎಸ್‌ನ ನೇತೃತ್ವವನ್ನು ವಹಿಸುತ್ತಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆಯುಕ್ತರು/ ನಿರ್ದೇಶಕರು ಎಸ್‌ಸಿಪಿಎಸ್‌ನ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ ಮತ್ತು ಇವರು ಈ ಯೋಜನೆಯ ಅನುಷ್ಠಾನದಲ್ಲಿ ಮಿಷನ್ ನಿರ್ದೇಶಕರಿಗೆ ನೆರವಾಗುತ್ತಾರೆ.

### (ಎ) ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ನ ಪಾತ್ರ ಹಾಗೂ ಜವಾಬ್ದಾರಿಗಳು: Roles and Responsibilities of SCPS:

1) ರಾಜ್ಯದಲ್ಲಿ ಕಾಯ್ದೆಯ ಅನುಷ್ಠಾನ ಹಾಗೂ ಅದರಡಿ ರೂಪಿಸಲಾಗಿರುವ ನಿಯಮಗಳ ಅನುಷ್ಠಾನ, ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ಕಾಯ್ದೆಯಡಿ ಬರುವ ವಿವಿಧ ಕೇಂದ್ರಗಳು ಹಾಗೂ ಸಂಸ್ಥೆಗಳ ಮೇಲ್ವಿಚಾರಣೆ ಹಾಗೂ ಉಸ್ತುವಾರಿ;

2) ರಾಜ್ಯದಾದ್ಯಂತ ಮಿಷನ್ ವಾತ್ಸಲ್ಯ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ, ಉಸ್ತುವಾರಿ ಹಾಗೂ ಮೌಲ್ಯಮಾಪನ ಮಾಡುವುದು.

3) ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗೆ ಕಾರ್ಯದರ್ಶಿ ಕಾರ್ಯಾಲಯದ ಬೆಂಬಲ ಒದಗಿಸುವುದು.

4) ಮಕ್ಕಳ ಪೋಷಣೆ ಹಾಗೂ ರಕ್ಷಣೆಗೆ ಸಂಬಂಧಪಟ್ಟಂತೆ ಎದುರಾಗುವ ತಡೆಗಳು, ಸಮಸ್ಯೆಗಳು, ಬರುವ ದೂರುಗಳನ್ನು ಬಗೆಹರಿಸುವುದು;

5) ಕಾಯ್ದೆಯಡಿ ಸ್ಥಾಪಿಸಲಾಗುವ ಎಲ್ಲಾ ಸಂಸ್ಥೆಗಳು ಹಾಗೂ ನಿಯಮಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಾತ್ರಿಪಡಿಸುವುದು ಹಾಗೂ ನಿಯೋಜಿಸಲಾಗಿರುವ ಕರ್ತವ್ಯಗಳನ್ನು ನಿರ್ವಹಿಸುತ್ತಿರುವುದನ್ನು ಖಾತ್ರಿಪಡಿಸುವುದು;

6) ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳ ಸಂಯೋಜನೆಯೊಂದಿಗೆ ಅಗತ್ಯ ಮೌಲ್ಯಮಾಪನವನ್ನು ಖಾತ್ರಿಪಡಿಸುವುದು.

7) ಜಿಲ್ಲೆಗಳ ಅಗತ್ಯ ಮೌಲ್ಯಮಾಪನದ ವರದಿ, ಮಕ್ಕಳ ಸಂಕಷ್ಟದ ಸಮೀಕ್ಷಾ ವರದಿಗಳ ಲಭ್ಯತೆಯ ಪ್ರಕಾರ ಅವುಗಳನ್ನು ಆಧರಿಸಿ ಮಿಷನ್ ವಾತ್ಸಲ್ಯದ ಅನುಷ್ಠಾನಕ್ಕಾಗಿ ರಾಜ್ಯ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಲು ಮಿಷನ್ ವಾತ್ಸಲ್ಯ ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಯ ಪರಿಗಣನೆಗಾಗಿ ಹಣಕಾಸಿನ ಪ್ರಸ್ತಾವನೆಗಳನ್ನು ಸಲ್ಲಿಸುವುದು.

8) ಯೋಜನೆಯಡಿ ಸಹಾಯಧನ (grant-in-aid) ಬಿಡುಗಡೆಯನ್ನು ಕೋರುವಾಗ ಬಳಕೆ ಪ್ರಮಾಣಪತ್ರ, ವೆಚ್ಚಗಳ ಸ್ಟೇಟ್‌ಮೆಂಟ್, ಭೌತಿಕ ಪ್ರಗತಿ ವರದಿ ಹಾಗೂ ಇತರ ಅಗತ್ಯ ಮಾಹಿತಿಯನ್ನು ಸಲ್ಲಿಸುವುದು.

9) ತ್ರೈಮಾಸಿಕವಾಗಿ ತಪಾಸಣಾ ವರದಿಗಳು, ಕುಂದುಕೊರತೆಗಳು/ ಸಲಹೆಗಳ ವಿವರಗಳು, ಹಾಗೂ ಆರೋಗ್ಯ ತಪಾಸಣೆಗಳು, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಅನುಸರಣೆ (ನೋಂದಾಯಿತವಾಗಿರುವ ಹಾಗೂ ವಿಲೇವಾರಿ ಆಗಿರುವ ಪ್ರಕರಣಗಳು), ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಅನುಸರಣೆ (ಮರುಸ್ಥಾಪಿತ/ಪುನರ್ವಸತಿ ಕಲ್ಪಿಸಲಾದ), ಉತ್ತಮ ಅಭ್ಯಾಸಗಳು ಹಾಗೂ ಯಶೋಗಾಥೆಗಳನ್ನು ಒದಗಿಸುವುದು.

10) ವಿವಿಧ ಜಿಲ್ಲೆಗಳಲ್ಲಿ ಸಂಸ್ಥೆಗಳ ಕಾರ್ಯನಿರ್ವಹಣೆ ಕುರಿತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಪಡೆದುಕೊಂಡಿರುವ ವರದಿಗಳ ಪರಿಶೀಲನೆ/ಪುನರ್ಮನನ ಹಾಗೂ ಅಗತ್ಯವಿರುವ ಸಂದರ್ಭಗಳಲ್ಲಿ ಮಕ್ಕಳ ರಕ್ಷಣೆಗಾಗಿ ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಕಾರ್ಯನಿರ್ವಹಣೆಯ ಉಸ್ತುವಾರಿ ವಹಿಸುವುದು.

11) ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳ ನೋಂದಣಿಯನ್ನು ಖಾತ್ರಿಪಡಿಸುವುದು ಹಾಗೂ ಮಕ್ಕಳ ನ್ಯಾಯ ವ್ಯವಸ್ಥೆಯೊಂದಿಗೆ ಸಂಪರ್ಕಕ್ಕೆ ಬರುವ ಮಕ್ಕಳ ವಿವರಗಳು ಹಾಗೂ ಬೆಂಬಲಿತ ಮಕ್ಕಳ ವಿವರಗಳು ಒಳಗೊಂಡಂತೆ ಎಲ್ಲಾ ವಿವರಗಳನ್ನೂ ಸಹ ಮಿಷನ್ ವಾತ್ಸಲ್ಯ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.

12) ಫಾಸ್ಟರ್ ಕೇರ್, ಪ್ರಾಯೋಜನೆ ಹಾಗೂ ಪೋಷಕತ್ವಕ್ಕಾಗಿ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು.

13) ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ ಹಾಗೂ ಇತರೆ ಸಾಂಸ್ಥಿಕ ಪೋಷಣಾ ಕೇಂದ್ರಗಳಲ್ಲಿ ಸಂಭವಿಸುವ ಮರಣ ಅಥವಾ ಆತ್ಮಹತ್ಯೆಯ ಪ್ರಕರಣಗಳನ್ನು ತಪಾಸಣೆ ಕೈಗೊಳ್ಳುವುದು, ವರದಿಗಳನ್ನು ಪಡೆಯುವುದು ಹಾಗೂ ಶಿಫಾರಸ್ಸುಗಳನ್ನು ಮಾಡುವುದು.

14) ಅಂತರ್–ಇಲಾಖಾ ಸಂಯೋಜನೆ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಪೂರಕ ಇಲಾಖೆಗಳು ಹಾಗೂ ಇತರೆ ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಗಳ ಹಾಗೂ ಪೂರಕ ಇಲಾಖೆಗಳೊಂದಿಗೆ ಸಂಪರ್ಕ ಸ್ಥಾಪಿಸುವುದನ್ನು ಖಾತ್ರಿಪಡಿಸುವುದು.

15) ಕಾಯ್ದೆ ಹಾಗೂ ನಿಯಮಾವಳಿಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ನಾಗರಿಕ ಸಮಾಜ ಸಂಸ್ಥೆಗಳೊಂದಿಗೆ ನೆಟ್‌ವರ್ಕಿಂಗ್ ಹಾಗೂ ಸಂಯೋಜನೆ ಹೊಂದುವುದು.

16) ಸಾಂಸ್ಥಿಕ ಪೋಷಣೆ ಹಾಗೂ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಯಲ್ಲಿರುವ ಎಲ್ಲಾ ಮಕ್ಕಳ ರಾಜ್ಯ–ಮಟ್ಟದ ದತ್ತಾಂಶ ನಿರ್ವಹಣೆ ಹಾಗೂ ತ್ರೈಮಾಸಿಕ ಅವಧಿಗೆ ಅಪ್‌ಡೇಟ್ ಮಾಡುವುದು.

17) ಎಲ್ಲಾ ಮಕ್ಕಳ ಜನನ ಪ್ರಮಾಣಪತ್ರ, ಆಧಾರ್ ಕಾರ್ಡ್, ಶಾಲಾ ಪ್ರಮಾಣಪತ್ರ, ಲಸಿಕಾ ಪ್ರಮಾಣಪತ್ರಗಳು, ಆರೋಗ್ಯ ತಪಾಸಣಾ ಕಾರ್ಡುಗಳು, ಇತ್ಯಾದಿಗಳಂತಹ ದಾಖಲೆಪತ್ರಗಳು ಸಿಸಿಐನಲ್ಲಿ ಲಭ್ಯವಿರುವುದನ್ನು ಖಾತ್ರಿಪಡಿಸುವುದು.

18) ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರರೋಗ ವಿಜ್ಞಾನಗಳ ಸಂಸ್ಥೆಯು (ನಿಮ್ಹಾನ್ಸ್ –(NIMHANS)) ಸಂಕಷ್ಟದ ಪರಿಸ್ಥಿತಿಗಳು ಹಾಗೂ ಯಾತನೆ (ಸಂವಾದ (SAMVAD)) ಯಲ್ಲಿರುವ ಮಕ್ಕಳಿಗಾಗಿ ಬೆಂಬಲ, ವಕಾಲತ್ತು ಹಾಗೂ ಮಾನಸಿಕ ಆರೋಗ್ಯ ಮಧ್ಯಸ್ಥಿಕೆಗಳ ಸಂಯೋಜನೆಯೊಂದಿಗೆ ಮಕ್ಕಳ ಮನೋವೈಜ್ಞಾನಿಕ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯ ಯೋಗಕ್ಷೇಮ ಒಳಗೊಂಡಂತೆ ರಾಜ್ಯ/ ಕೇಂದ್ರಾಡಳಿತ ಮಟ್ಟದಲ್ಲಿ ಆಪ್ತಸಮಾಲೋಚನಾ ಸಾಮರ್ಥ್ಯ ಹಾಗೂ ಸಂಪನ್ಮೂಲ ವ್ಯಕ್ತಿಗಳ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಹಾಗೂ ಹೆಚ್ಚಿಸುವುದು.

19) ರಾಜ್ಯಮಟ್ಟದಲ್ಲಿರುವ ಮಕ್ಕಳ ಪೋಷಣಾ ಕೇಂದ್ರಗಳು, ವಿಶೇಷ ದತ್ತು ಕೇಂದ್ರಗಳು, ಮುಕ್ತ ಗೃಹಗಳು, ಫಿಟ್ ವ್ಯಕ್ತಿಗಳು ಹಾಗೂ ಫಿಟ್ ಸೌಲಭ್ಯಗಳು, ನೋಂದಾಯಿತ ಪಾಲನಾ ಪೋಷಕರು, ಪ್ರಾಯೋಜಕರು, ಪೋಷಣಾ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳ ಡೇಟಾಬೇಸ್ ಅನ್ನು ನಿರ್ವಹಿಸುವುದು.

20) ವೈದ್ಯಕೀಯ ಹಾಗೂ ಆಪ್ತಸಮಾಲೋಚನಾ ಕೇಂದ್ರಗಳು, ವ್ಯಸನಮುಕ್ತಗೊಳಿಸುವ ಕೇಂದ್ರಗಳು, ಆಸ್ಪತ್ರೆಗಳು, ದೂರ ಶಿಕ್ಷಣ ಶಾಲೆಗಳು, ಶೈಕ್ಷಣಿಕ ಸೌಲಭ್ಯಗಳು, ಶಿಷ್ಯವೃತ್ತಿ ಹಾಗೂ ವೃತ್ತಿಪರ ತರಬೇತಿ ಕಾರ್ಯಕ್ರಮಗಳು ಹಾಗೂ ಕೇಂದ್ರಗಳು, ಪ್ರದರ್ಶನ ಕಲೆಗಳು, ಲಲಿತ ಕಲೆಗಳು ಹಾಗೂ ವಿಶೇಷ ಅಗತ್ಯಗಳಿರುವ ಮಕ್ಕಳಿಗಾಗಿ ಸೌಲಭ್ಯಗಳು ಹಾಗೂ ರಾಜ್ಯಮಟ್ಟದಲ್ಲಿನ ಇತರೆ ಇಂತಹ ಸೌಕರ್ಯಗಳ ಡೇಟಾಬೇಸ್ ನಿರ್ವಹಣೆ.

21) ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಮಕ್ಕಳ ವಿಶೇಷ ಪೊಲೀಸ್ ಘಟಕಗಳು ಹಾಗೂ ಪೊಲೀಸ್ ಠಾಣೆಗಳು, ಒಳಗೊಂಡಂತೆ ರಾಜ್ಯ ಸರ್ಕಾರ ಸ್ಥಾಪಿಸಿರುವಂತಹ ಮಕ್ಕಳ ನ್ಯಾಯ ನಿಧಿಯ ನಿಗಾವಣೆ ಹಾಗೂ ನಿರ್ವಹಣೆ.

22) ಮಕ್ಕಳ ನ್ಯಾಯ ನಿಧಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳಡಿ ಇರುವ ಎಲ್ಲಾ ನಿಧಿಗಳ ಪ್ರತ್ಯೇಕ ಖಾತೆಗಳ ನಿರ್ವಹಣೆ ಹಾಗೂ ಅವುಗಳ ವಾರ್ಷಿಕ ಲೆಕ್ಕಪರಿಶೋಧನೆ ಮಾಡುವುದು.

23) ಕಾಯ್ದೆ ಹಾಗೂ ನಿಯಮಗಳ ವಿವಿಧ ಅಂಶಗಳು, ವಿಶೇಷವಾಗಿ ಹಾಲಿ ಸಾಂಸ್ಥಿಕ ಚೌಕಟ್ಟು, ಪುನರ್ವಸತಿ ಕ್ರಮಗಳು, ದಂಡಗಳು, ಮಕ್ಕಳ ಉತ್ತಮ ರಕ್ಷಣೆಗಾಗಿ ವಿಧಾನಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.

24) ಭಾಗೀದಾರರ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಒಳಗೊಂಡಂತೆ ಕಾಯ್ದೆಯ ಅನುಷ್ಠಾನಕ್ಕಾಗಿ ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಹಾಗೂ ಆಯೋಜಿಸುವುದು.

25) ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸುವುದು.

26) ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕಾನೂನು ಶಾಲೆಗಳೊಂದಿಗೆ ಸಂಯೋಜನೆ; ಹಾಗೂ

27) ಕಾಯ್ದೆ ಹಾಗೂ ಅವುಗಳ ನಿಯಮಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಇತರೇ ಅಗತ್ಯ ಕಾರ್ಯನಿರ್ವಹಣೆ.

**ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ, ಈ ಕೆಳಕಂಡ ಹೊರಗುತ್ತಿಗೆ ಸಿಬ್ಬಂದಿಗಳನ್ನು ಹೊಂದಿರಬೇಕು**

–The State Child Protection Society shall consist of the following contractual staff:

i. ಕಾರ್ಯಕ್ರಮ ವ್ಯವಸ್ಥಾಪಕರು (20 ಜಿಲ್ಲೆಗಳಿರುವ ರಾಜ್ಯಗಳಿಗೆ ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು ಹಾಗೂ 20ಕ್ಕಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳಿಗೆ ಇಬ್ಬರು ಕಾರ್ಯಕ್ರಮ ವ್ಯವಸ್ಥಾಪಕರು)

ii. ಕಾರ್ಯಕ್ರಮ ಅಧಿಕಾರಿಗಳು (20 ಜಿಲ್ಲೆಗಳಿರುವ ರಾಜ್ಯಗಳಿಗೆ ಇಬ್ಬರು ಕಾರ್ಯಕ್ರಮ ಅಧಿಕಾರಿ ಹಾಗೂ 20ಕ್ಕಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳಿಗೆ ನಾಲ್ವರು ಕಾರ್ಯಕ್ರಮ ಅಧಿಕಾರಿಗಳು)

## (ಬಿ) ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ನಲ್ಲಿ ರಾಜ್ಯ ಮಿಷನ್ ನಿರ್ದೇಶಕರ ಪಾತ್ರಗಳು ಹಾಗೂ ಜವಾಬ್ದಾರಿಗಳು:

## Roles and Responsibilities of the State Mission Director in SCPS:

i. ಮಿಷನ್ ವಾತ್ಸಲ್ಯ ಯೋಜನೆಯ ಅನುಷ್ಠಾನ ಹಾಗೂ ಸಂಬಂಧಿತ ನಿಧಿ ಹಂಚಿಕೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಭಿಯಾನ ಅನುಷ್ಠಾನದ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವುದು.

ii. ಯೋಜನೆಯಡಿ ಅಗತ್ಯ ಸಿಬ್ಬಂದಿಗಳ ನಿಯೋಜನೆಯನ್ನು ಖಾತ್ರಿಪಡಿಸುವುದು.

iii. ಎಲ್ಲಾ ಕರ್ತವ್ಯನಿರ್ವಾಹಕರು/ಸಿಬ್ಬಂದಿ ಹಾಗೂ ಭಾಗೀದಾರರ ಸಾಮರ್ಥ್ಯ ಅಭಿವೃದ್ಧಿಯನ್ನು ಹೆಚ್ಚಿಸುವುದು ಹಾಗೂ ಅನುಷ್ಠಾನಗೊಳಿಸುವುದು.

iv. ಅಭಿಯಾನದ ವಿವಿಧ ಕಾರ್ಯಕ್ರಮಗಳ ಅಂಶಗಳಡಿ ಜಿಲ್ಲೆಗಳು ಸಲ್ಲಿಸಿರುವ ಪ್ರಸ್ತಾವನೆಗಳು/ಯೋಜನೆಗಳ ಪರಿಶೀಲನೆ ಹಾಗೂ ಕ್ರಮಬದ್ದ ಅನುಷ್ಠಾನಕ್ಕೆ ಅನುಮೋದನೆ ನೀಡುವುದು.

v. ರಾಜ್ಯ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾನೂನುಬದ್ಧ ಹಾಗೂ ಸೇವಾ ವಿತರಣಾ ವ್ಯವಸ್ಥೆಗಳ ಸ್ಥಾಪನೆಯನ್ನು ಖಾತ್ರಿಪಡಿಸುವುದು.

vi. ಜಿಲ್ಲೆ/ ನಗರ/ ತಾಲ್ಲೂಕು/ ವಾರ್ಡ್/ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಮಾಜಿಕ ನ್ಯಾಯ/ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಷಯಗಳನ್ನು ನಿರ್ವಹಿಸುತ್ತಿರುವ ಸಮಿತಿಗೆ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಕ್ರಮಗಳ ಕಾರ್ಯನಿರ್ವಹಣಾ ಜವಾಬ್ದಾರಿಯನ್ನು ವಹಿಸಿ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ (ಪಿಆರ್‌ಐ & ಯುಎಲ್‌ಬಿ (PRIs & ULB)) ಗಳಿಂದ ಅಧಿಸೂಚನೆ ಹೊರಡಿಸುವುದನ್ನು ಖಾತ್ರಿಪಡಿಸುವುದು.

vii. ಮಿಷನ್ ವಾತ್ಸಲ್ಯ ಯೋಜನೆಯಡಿ ಮಕ್ಕಳ ಕಲ್ಯಾಣ ಹಾಗೂ ಅಭಿವೃದ್ಧಿಗಾಗಿ ಯೋಜನೆ ರೂಪಿಸಲು, ಮಕ್ಕಳ ಉತ್ತಮ ಹಿತದೃಷ್ಟಿ/ಹಿತಾಸಕ್ತಿಗಾಗಿ ಮತ್ತು ಸಹಭಾಗಿತ್ವ ಕ್ರಿಯೆಯ ಮೂಲಕ ಸಮಯಕ್ಕೆ ಸರಿಯಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಭಾಗೀದಾರರೊಂದಿಗೆ ಸಂಯೋಜನೆ ಹೊಂದುವುದು.

viii. ರಾಜ್ಯದಲ್ಲಿನ ಮಕ್ಕಳ ಪುನರ್‌ಸ್ಥಾಪನೆ, ಪುನರ್ವಸತಿ ಹಾಗೂ ಮುಖ್ಯವಾಹಿನಿಗಾಗಿ ಸುಗಮಗಾರಿಕೆಯನ್ನು ಒದಗಿಸುವುದು

ix. ಮಿಷನ್ ವಾತ್ಸಲ್ಯ ಯೋಜನೆಯಡಿ ಬೆಂಬಲ ಒದಗಿಸಿರುವ ಮಕ್ಕಳು 18 ವರ್ಷ ವಯಸ್ಸು ತುಂಬಿದ ನಂತರ ಸ್ವಸಮರ್ಥರಾಗುವುದನ್ನು ಖಾತ್ರಿಪಡಿಸುವುದು ಹಾಗೂ ಅವರ ಉನ್ನತ ಶಿಕ್ಷಣ, ವೃತ್ತಿಪರ ಕೋರ್ಸ್‌ಗಳು ಅಥವಾ ಸಣ್ಣ ವ್ಯಾಪಾರಗಳನ್ನು ಆರಂಭಿಸಲು ವಿದ್ಯಾರ್ಥಿವೇತನ ಅಥವಾ ಸಾಲಗಳು ದೊರಕುವ ವ್ಯವಸ್ಥೆ ಮಾಡುವುದು.

x. ಮಕ್ಕಳಿಗೆ ಹಣಕಾಸಿನ ಬೆಂಬಲ ಒದಗಿಸಲು ಮಕ್ಕಳ ನ್ಯಾಯ ನಿಧಿ ನಿರ್ವಹಣೆ ಮತ್ತು ಈ ಖಾತೆಗೆ ಬರುವಂತಹ ಯಾವುದಾದರೂ ದಾನ ಕೊಡುಗೆಗಳಿಗೆ ಆದಾಯ ತೆರಿಗೆ ವಿನಾಯಿತಿ ಪಡೆಯಲು ಅಗತ್ಯ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ಸೂಕ್ತ ಸಹಕಾರ ಒದಗಿಸುವುದು.

xi. ಮಕ್ಕಳಿಗಾಗಿ ಹಾಗೂ ಮಕ್ಕಳಿಗೆ ಸಂಬಂಧಿಸಿದ ಸಂಪನ್ಮೂಲಗಳನ್ನು ವೃದ್ಧಿಗೊಳಿಸಲು ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ಬೆಂಬಲವನ್ನು ಕ್ರೋಢೀಕರಿಸುವುದು.

xii. ರಾಜ್ಯ ಅಭಿಯಾನ/ಮಿಷನ್ ನಿರ್ದೇಶಕರು ಈ ಯೋಜನೆಯ ಕುಂದುಕೊರತೆಗಳ ಪರಿಹಾರ ಸಂಯೋಜಿಸುವ ಪ್ರಾಧಿಕಾರಿಯಾಗಿರುತ್ತಾರೆ.

1) ಎಸ್‌ಸಿಪಿಎಸ್‌ನ ಕರ್ತವ್ಯ ನಿರ್ವಾಹಕರ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ರಾಜ್ಯ ಅನುಬಂಧಗಳು–II , ಭಾಗ–ಎ ದಲ್ಲಿ ಒದಗಿಸಲಾಗಿದೆ.

2) ಎಸ್‌ಸಿಪಿಎಸ್‌ನ ಸಿಬ್ಬಂದಿಗಳ ಸೂಚಕ ಅರ್ಹತೆಗಳು ಒಳಗೊಂಡಂತೆ ಆಯ್ಕೆ ಪ್ರಕ್ರಿಯೆಯನ್ನು ರಾಜ್ಯ ಅನುಬಂಧ – II ಭಾಗ–ಸಿ & ಭಾಗ–ಡಿ ರಲ್ಲಿ ಒದಗಿಸಲಾಗಿದೆ.

## 2.5 ರಾಜ್ಯ ದತ್ತು ಸಂಪನ್ಮೂಲ ಕೇಂದ್ರ (ಎಸ್‌ಎಆರ್‌ಎ) –

## State Adoption Resource Agency (SARA):

ದೇಶದೊಳಗಿನ ದತ್ತು ಹಾಗೂ ಅಂತರರಾಷ್ಟ್ರೀಯ ದತ್ತುವನ್ನು ಪ್ರೋತ್ಸಾಹಿಸಲು ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರಕ್ಕೆ (ಸಿಎಆರ್‌ಎ) ಬೆಂಬಲಿಸುವ ಸಲುವಾಗಿ, ಮಿಷನ್ ವಾತ್ಸಲ್ಯ ಯೋಜನೆಯು ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿಯೂ ರಾಜ್ಯ ದತ್ತು ಸಂಪನ್ಮೂಲ ಕೇಂದ್ರ (ಎಸ್‌ಎಆರ್‌ಎ)ಗೆ ಅಗತ್ಯ ಬೆಂಬಲ ಒದಗಿಸುತ್ತದೆ. ಎಸ್‌ಎಆರ್‌ಎ, ರಾಜ್ಯದಲ್ಲಿನ ದತ್ತು ಒಳಗೊಂಡಂತೆ ಸಾಂಸ್ಥಿಕೇತರ ಪೋಷಣೆಗೆ ಸಂಬಂಧಪಟ್ಟ ಕೆಲಸಗಳ ಸಂಯೋಜನೆ, ಉಸ್ತುವಾರಿ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ/ ಸಾಮಾಜಿಕ ನ್ಯಾಯ ಸಬಲೀಕರಣ ಇವರು ಎಸ್‌ಎಆರ್‌ಎ ದ ನೇತೃತ್ವವನ್ನು ವಹಿಸಲಿದ್ದು, ಮಿಷನ್ ವಾತ್ಸಲ್ಯದ ರಾಜ್ಯ ಮಿಷನ್/ಅಭಿಯಾನದ ನಿರ್ದೇಶಕರಾಗಿರುತ್ತಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ ರಾಜ್ಯ ಸಾಮಾಜಿಕ ನ್ಯಾಯ ಸಬಲೀಕರಣ ಇವರು ಅಭಿಯಾನ ನಿರ್ದೇಶಕರಿಗೆ ನೆರವಾಗುತ್ತಾರೆ.

## (ಎ) ರಾಜ್ಯ ದತ್ತು ಸಂಪನ್ಮೂಲ ಕೇಂದ್ರದ (ಎಸ್‌ಎಆರ್‌ಎ) ಪಾತ್ರಗಳು ಹಾಗೂ ಜವಾಬ್ದಾರಿಗಳು Roles and Responsibilities of SARA:

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರಡಿ ಕಾಲಕಾಲಕ್ಕೆ ಹೊರಡಿಸಿರುವ ದತ್ತು ನಿಯಮಗಳ ಪ್ರಕಾರ ಸೂಚಿಸಿರುವ ಕಾರ್ಯನಿರ್ವಹಣೆಗಳು ಎಸ್‌ಎಆರ್‌ಎ ದ ನಿರ್ದಿಷ್ಟ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ಒಳಗೊಂಡಿರಬೇಕು. ಎಸ್‌ಎಆರ್‌ಎ ದ ಇತರೆ ಕರ್ತವ್ಯನಿರ್ವಾಹಕರ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ರಾಜ್ಯ ಅನುಬಂಧ–II, ಭಾಗ–ಬಿ ರಲ್ಲಿ ಒದಗಿಸಲಾಗಿದೆ ಹಾಗೂ ಎಸ್‌ಎಆರ್‌ಎ ಸಿಬ್ಬಂದಿಗಳ ಸೂಚಕ ಅರ್ಹತೆ ಒಳಗೊಂಡಂತೆ ಆಯ್ಕೆ ಪ್ರಕ್ರಿಯೆಯ ವಿವರಗಳನ್ನು ರಾಜ್ಯ ಅನುಬಂಧ– II, ಭಾಗ–ಸಿ & ಭಾಗ–ಡಿ ರಲ್ಲಿ ಒದಗಿಸಲಾಗಿದೆ.

**ರಾಜ್ಯ ದತ್ತು ಸಂಪನ್ಮೂಲ ಕೇಂದ್ರ (ಎಸ್ಎಆರ್ಎ) ಈ ಕೆಳಕಂಡ ಗುತ್ತಿಗೆ ಆಧಾರಿತ ಸಿಬ್ಬಂದಿಗಳನ್ನು ಒಳಗೊಂಡಿರಬೇಕು**

i. ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು
ii. ಓರ್ವ ಕಾರ್ಯಕ್ರಮ ಅಧಿಕಾರಿ
iii. ಓರ್ವ ಕಾರ್ಯಕ್ರಮ ಸಹಾಯಕರು

**ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ಹಾಗೂ ರಾಜ್ಯ ದತ್ತು ಸಂಪನ್ಮೂಲ ಕೇಂದ್ರಕ್ಕೆ (ಎಸ್ಎಆರ್ಎ) ಮೂಲಭೂತಸೌಕರ್ಯ –Infrastructure for SCPS and SARA:**

ಆಯಾ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಎಸ್‌ಸಿಪಿಎಸ್ & ಎಸ್ಎಆರ್ಎಗಳಿಗೆ ಅವುಗಳ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸಲು ಅಗತ್ಯ ಸೂಕ್ತ ಸ್ಥಳ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. ಎಸ್‌ಸಿಪಿಎಸ್ & ಎಸ್ಎಆರ್ಎ, ರಾಜ್ಯದಲ್ಲಿನ ಮಕ್ಕಳ ರಕ್ಷಣೆ/ ಕಲ್ಯಾಣ ವಿಷಯಗಳ ಮೇಲೆ ಕೆಲಸ ಮಾಡುತ್ತಿರುವ ಇಲಾಖೆಯ ಕಚೇರಿ ಆವರಣದಿಂದ ಕಾರ್ಯನಿರ್ವಹಿಸಬಹುದು. ಒಂದು ವೇಳೆ ಎಸ್‌ಸಿಪಿಎಸ್ ಅಥವಾ ಎಸ್ಎಆರ್ಎಗೆ ರಾಜ್ಯ/ಕೇಂದ್ರಾಡಳಿತ ಸರ್ಕಾರ ಸೂಕ್ತ ಸ್ಥಳಾವಕಾಶವನ್ನು ಕಲ್ಪಿಸುವುದು ಸಾಧ್ಯವಾಗದಿದ್ದರೆ ಬಾಡಿಗೆ ಕಟ್ಟಡದಿಂದ ಕೆಲಸ ನಿರ್ವಹಿಸಬಹುದು. ಹೊಸ ಸ್ಥಳವನ್ನು ಸೃಷ್ಟಿಸುವುದಕ್ಕೆ ಬದಲಾಗಿ ರಾಜ್ಯ/ಕೇಂದ್ರಾಡಳಿತ ಸರ್ಕಾರಗಳು ಇರುವ ಮೂಲಭೂತಸೌಕರ್ಯವನ್ನೇ ಬಳಸಿಕೊಳ್ಳಲು ಪ್ರಯತ್ನಿಸಬೇಕು. ಎಸ್‌ಸಿಪಿಎಸ್ ಸ್ಥಾಪನೆಗಾಗಿ ಅಗತ್ಯವಿರುವ ಹಣಕಾಸಿನ ಬೆಂಬಲದ ವಿವರಗಳನ್ನು ರಾಜ್ಯ **ಅನುಬಂಧ – II, ಭಾಗ** ಇ ಹಾಗೂ ಎಸ್ಎಆರ್ಎ ಸ್ಥಾಪನೆಗೆ ಅಗತ್ಯವಿರುವ ಹಣಕಾಸಿನ ಬೆಂಬಲದ ವಿವರಗಳನ್ನು ರಾಜ್ಯ **ಅನುಬಂಧ – II, ಭಾಗ–ಎಫ್** ರಲ್ಲಿ ಒದಗಿಸಲಾಗಿದೆ.

## 2.6 ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ – State Child Welfare and Protection Committee:

ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ಯ ನೆರವಿನೊಂದಿಗೆ ಮಿಷನ್ ವಾತ್ಸಲ್ಯ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ ಸಾಮಾಜಿಕ ನ್ಯಾಯ ಸಬಲೀಕರಣ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಯನ್ನು ರಚಿಸಬೇಕು. ಈ ಸಮಿತಿಯು ರಾಜ್ಯಕ್ಕಾಗಿ ಹಣಕಾಸಿನ ಪ್ರಸ್ತಾವನೆ ಒಳಗೊಂಡಂತೆ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ಅದನ್ನು ಅನುಮೋದನೆಗಾಗಿ ಸಚಿವಾಲಯಕ್ಕೆ ಸಲ್ಲಿಸುತ್ತದೆ. ಈ ಸಮಿತಿಯು, ಮಿಷನ್ ವಾತ್ಸಲ್ಯದ ವಿವಿಧ ಅಂಶಗಳಡಿಯ ವ್ಯವಸ್ಥೆಗಳು, ಸೇವೆಗಳು ಹಾಗೂ ಪ್ರಗತಿಯ ಕೆಲಸದ ಪರಿಶೀಲನೆ ಹಾಗೂ ನಿಕಟ ಉಸ್ತುವಾರಿಯನ್ನು ಮಾಡುತ್ತದೆ ಹಾಗೂ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳೊಂದಿಗೆ ತ್ರೈಮಾಸಿಕ ಪ್ರಗತಿ ಪರಿಶೀಲನೆ ಸಭೆಗಳನ್ನು ನಡೆಸುತ್ತದೆ. ರಾಜ್ಯ ಸಮಿತಿಯು, ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ಕಲ್ಯಾಣದ ಕುರಿತು ಎಲ್ಲಾ ಭಾಗೀದಾರರ ವಕಾಲತ್ತು ವಹಿಸುವಿಕೆ, ಅರಿವು ಮೂಡಿಸುವುದು, ಸಾಮರ್ಥ್ಯ ಅಭಿವೃದ್ಧಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ ಹಾಗೂ ರಾಜ್ಯದಲ್ಲಿ ಮಕ್ಕಳ ಪೋಷಣೆ ಹಾಗೂ ರಕ್ಷಣೆಗೆ ಸಂಬಂಧಪಟ್ಟಂತೆ ಎದುರಾಗುವ ತಡೆಗಳು, ಸಮಸ್ಯೆಗಳು, ದೂರುಗಳನ್ನು ಬಗೆಹರಿಸುತ್ತದೆ. ಮಕ್ಕಳಿಗಾಗಿ ಸರ್ಕಾರದ ಎಲ್ಲಾ ಸಂಭವನೀಯ ಕಲ್ಯಾಣ ಯೋಜನೆಗಳಡಿ ದೊರಕುವ ಲಾಭಗಳು ಮಕ್ಕಳಿಗೆ ತಲುಪುವುದನ್ನು ಖಾತ್ರಿಪಡಿಸಲು ರಾಜ್ಯ ಸಮಿತಿಯು ಸಹಭಾಗಿತ್ವಕ್ಕಾಗಿ ವಿಶೇಷ ಪ್ರಯತ್ನಗಳನ್ನು ಮಾಡುವುದು. ರಾಜ್ಯ ಸಮಿತಿಯು, ಎಲ್ಲಾ ಸಂಸ್ಥೆಗಳೂ ಸಹ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 ಹಾಗೂ ನಿಯಮಗಳಡಿ ಸ್ಥಾಪನೆಯಾಗುವುದನ್ನು ಖಾತ್ರಿಪಡಿಸುವುದು. ಅಧ್ಯಕ್ಷರು ಸಮಿತಿಯ ಸಭೆಗೆ ಇತರೆ ಯಾವುದಾದರೂ ಕ್ಷೇತ್ರದ ತಜ್ಞರು/ ಶಾಸನಬದ್ಧ ಅಂಗ/ ಆಹ್ವಾನಿತರು/ ಇಲಾಖೆಗಳ ಪ್ರತಿನಿಧಿಗಳನ್ನು ಹಾಜರಾಗಲು ಆಹ್ವಾನಿಸಬಹುದು. ಸಮಿತಿಯಲ್ಲಿ ಈ ಕೆಳಕಂಡಂತೆ ಸದಸ್ಯರು ಇರುತ್ತಾರೆ:

| ಕ್ರ.ಸಂ. | ಸದಸ್ಯರು | ಹುದ್ದೆ |
|---|---|---|
| **1.** | **ಪ್ರಧಾನ ಕಾರ್ಯದರ್ಶಿ/ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** | **ಅಧ್ಯಕ್ಷರು** |
| 2. | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಗೃಹ ವ್ಯವಹಾರಗಳು (ಒಳಾಡಳಿತ ಇಲಾಖೆ) | ಸದಸ್ಯರು |
| 3. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಾಮಾಜಿಕ ನ್ಯಾಯ & ಸಬಲೀಕರಣ ಇಲಾಖೆ. (ಸಮಾಜ ಕಲ್ಯಾಣ ಇಲಾಖೆ) | ಸದಸ್ಯರು |
| 4. | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. | ಸದಸ್ಯರು |
| 5. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಕಾನೂನು & ಸುವ್ಯವಸ್ಥೆ ಇಲಾಖೆ. (ಕಾನೂನು ಇಲಾಖೆ) | ಸದಸ್ಯರು |
| 6. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 7. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಯುವಜನ ಸೇವಾ ವ್ಯವಹಾರಗಳು & ಕ್ರೀಡಾ ಇಲಾಖೆ. | ಸದಸ್ಯರು |
| 8. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 9. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಇಲಾಖೆ | ಸದಸ್ಯರು |
| 10. | ಪ್ರಧಾನ ಕಾರ್ಯದರ್ಶಿ/ಅಧ್ಯಕ್ಷರು, ಕೌಶಲ್ಯ ಅಭಿವೃದ್ಧಿ. ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ (ಕೆಎಸ್‌ಡಿಎ) | ಸದಸ್ಯರು |
| 11. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ವಸತಿ ಹಾಗೂ ನಗರ ವ್ಯವಹಾರಗಳು. (ವಸತಿ ಇಲಾಖೆ)<br>ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ. | ಸದಸ್ಯರು |
| 12. | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆ. (ಕಾರ್ಮಿಕ ಇಲಾಖೆ) | ಸದಸ್ಯರು |
| **13** | **ಆಯುಕ್ತರು/ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಕರ್ನಾಟಕದಲ್ಲಿ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರು)** | **ಸದಸ್ಯ ಕಾರ್ಯದರ್ಶಿ** |
| 14. | ಇತರೆ ಯಾವುದಾದರೂ ಕ್ಷೇತ್ರದ ತಜ್ಞರು/ ಶಾಸನಬದ್ಧ ಅಂಗ ಸಂಸ್ಥೆಗಳು/ಇಲಾಖೆಗಳು | ಸಹ–ಆಯ್ಕೆಯಾದ ಸದಸ್ಯರು |

ಎಸ್‌ಸಿಪಿಎಸ್‌ನ ಸಹಾಯದೊಂದಿಗೆ ರಾಜ್ಯ ಸಮಿತಿಯು, ಮಕ್ಕಳ ಉತ್ತಮ ರಕ್ಷಣೆಗಾಗಿ ವಿಧಾನಗಳು ಹಾಗೂ ಪುನರ್ವಸತಿಗಾಗಿ ಅಭಿಯಾನದ ವಿವಿಧ ಅಂಶಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮಾಧ್ಯಮ ಹಾಗೂ ಸಂವಹನಾ ಯೋಜನೆಯನ್ನು ಸೃಷ್ಟಿಸಬೇಕು. ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಯು, ಬ್ಲಾಕ್‌ಗಳ ಸಂಖ್ಯೆ, ಪ್ರಕರಣದ ಹೊರೆ ಹಾಗೂ ಅಂತರ್–ಜಿಲ್ಲಾ ವರ್ಗಾವಣೆಗಳ ಪ್ರಕಾರ ಆಡಳಿತಾತ್ಮಕ ಅಗತ್ಯತೆಗಳನ್ನು ಆಧರಿಸಿ, ಸಂಪನ್ಮೂಲಗಳ ಗರಿಷ್ಠ ಉಪಯೋಗಕ್ಕಾಗಿ ಅನುಷ್ಠಾನ ಕೇಂದ್ರಗಳ ಹಾಲಿ ಮಾನವ ಸಂಪನ್ಮೂಲವನ್ನು ಸುಧಾರಣೆಗೊಳಿಸಬೇಕು. ರಾಜ್ಯ ಸರ್ಕಾರಗಳು, ಜಿಲ್ಲೆಗಳಲ್ಲಿರುವ ಕೆಲಸದ ಹೊರೆ/ ಬ್ಲಾಕ್‌ಗಳ ಸಂಖ್ಯೆಯ ಪ್ರಕಾರ ಪ್ರತಿ ಡಿಸಿಪಿಯುಗೆ ಅಗತ್ಯವಿರುವ ಮಾನವ ಸಂಪನ್ಮೂಲ ಹಂಚಿಕೆಯನ್ನು ಸುಧಾರಣೆಗೊಳಿಸಬೇಕು.

## 2.7 ಜಿಲ್ಲಾಧಿಕಾರಿಗಳು/ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ – District Magistrate (Deputy Commissioner) and District Child Protection Unit:

ಜಿಲ್ಲಾಧಿಕಾರಿಗಳು/ ಜಿಲ್ಲಾ ದಂಡಾಧಿಕಾರಿಗಳು ಜಿಲ್ಲೆಯಲ್ಲಿ ಮಿಷನ್/ಅಭಿಯಾನದ ಯೋಜನೆಯ ಅನುಷ್ಠಾನಕ್ಕೆ ಜವಾಬ್ದಾರಿಯಾಗಿರುತ್ತಾರೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲೆಯಲ್ಲಿ ಮಕ್ಕಳ ಪೋಷಣೆ ಮತ್ತು ರಕ್ಷಣೆ ಹಾಗೂ ಸೇವಾ ವಿತರಣೆಯನ್ನು ಖಾತ್ರಿಪಡಿಸುವಲ್ಲಿ ಜಿಲ್ಲಾಧಿಕಾರಿಗಳ ಒಟ್ಟಾರೆ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುತ್ತಾರೆ. ಜಿಲ್ಲಾಧಿಕಾರಿಗಳು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ; ಹಾಗೂ ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ, ಮಕ್ಕಳ ಹಕ್ಕುಗಳು ಹಾಗೂ ಸಂರಕ್ಷಣೆಯನ್ನು ಖಾತ್ರಿಪಡಿಸುವ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ, 2012; ಬಾಲ್ಯವಿವಾಹ ನಿಷೇಧ ಕಾಯ್ದೆ, 2006; ಹಿಂದೂ ದತ್ತು ಹಾಗೂ ನಿರ್ವಹಣಾ ಕಾಯ್ದೆ (ಹೆಚ್ಎಎಂಎ) 1956; ಪಾಲಕರು ಹಾಗೂ ಮಕ್ಕಳ ಕಾಯ್ದೆ (ಜಿಎಡಬ್ಲ್ಯೂಎ) 1890; ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿರ್ಮೂಲನೆ) ಕಾಯ್ದೆ, 1986; ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಆಯೋಗಗಳ ಕಾಯ್ದೆ, 2005; ಅನೈತಿಕ ಮಾನವ ಕಳ್ಳ ಸಾಗಣೆ ತಡೆಗಟ್ಟುವ ಕಾಯ್ದೆ, 1986; ಭ್ರೂಣಲಿಂಗ ಪತ್ತೆ ಹಚ್ಚುವಿಕೆ ಹಾಗೂ ಪ್ರಸವಪೂರ್ವ ತಪಾಸಣಾ ತಂತ್ರಗಳು (ಲಿಂಗ ಪತ್ತೆ ಹಚ್ಚುವ ನಿಷೇಧ) ಕಾಯ್ದೆ, 1994, ಇತ್ಯಾದಿ ಸೇರಿದಂತೆ ಎಲ್ಲಾ ಇತರೆ ಕಾನೂನುಗಳು, ನಿಯಮಗಳು, ನಿಬಂಧನೆಗಳು ಹಾಗೂ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಜಾರಿಯಾಗುವ ಇತರೆ ಯಾವುದೇ ಕಾಯ್ದೆಯ ಅನುಷ್ಠಾನಕ್ಕೆ ಬದ್ಧರಾಗಿರುತ್ತಾರೆ.

### (ಎ) ಡಿಸಿಪಿಯು ಪಾತ್ರಗಳು ಹಾಗೂ ಜವಾಬ್ದಾರಿಗಳು – Roles and Responsibilities of DCPU:

1) ಡಿಸಿಪಿಯು, ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ನಿಯಮಾವಳಿಗಳ ಪ್ರಕಾರ ಕಾರ್ಯನಿರ್ವಹಿಸಬೇಕಾಗುತ್ತದೆ.

2) ಡಿಸಿಪಿಯು, ಎಲ್ಲಾ ಮಕ್ಕಳ ರಕ್ಷಣಾ ಕಾನೂನುಗಳು, ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಮಿಷನ್/ಅಭಿಯಾನದಡಿ ನಿಗದಿಪಡಿಸಲಾಗಿರುವ ಮಕ್ಕಳ ರಕ್ಷಣಾ ಗುರಿಗಳನ್ನು ಸಾಧಿಸಲು ಕಾರ್ಯೋನ್ಮುಖವಾಗಿರುತ್ತದೆ.

3) ಜಿಲ್ಲಾ ಮಟ್ಟದಲ್ಲಿ ಎಲ್ಲಾ ಮಕ್ಕಳ ಹಕ್ಕುಗಳು ಹಾಗೂ ರಕ್ಷಣಾ ಚಟುವಟಿಕೆಗಳ ಸಂಯೋಜನೆ ಹಾಗೂ ಅನುಷ್ಠಾನ.

4) ಜಿಲ್ಲಾ ಮಟ್ಟದಲ್ಲಿ ಮಿಷನ್/ಅಭಿಯಾನದ ಅನುಷ್ಠಾನಕ್ಕಾಗಿ ಆಡಳಿತಾತ್ಮಕ ಬೆಂಬಲ ಒದಗಿಸುವುದು ಹಾಗೂ ಸಚಿವಾಲಯದಂತೆ ಕಾರ್ಯನಿರ್ವಹಿಸುವುದು.

5) ತಾಲ್ಲೂಕು/ ಗ್ರಾಮ ಪಂಚಾಯಿತಿ/ ವಾರ್ಡ್ ಮಟ್ಟದ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳು, ಪೋಷಣ್ 2.0 ಕಾರ್ಯನಿರ್ವಾಹಕರು, ವಿಶೇಷ ದತ್ತು ಕೇಂದ್ರಗಳು (ಎಸ್ಎಎ), ಮಕ್ಕಳ ರಕ್ಷಣಾ ವಿಷಯಗಳಲ್ಲಿ ತೊಡಗಿಸಿಕೊಂಡಿರುವ ಎನ್‌ಜಿಒಗಳು ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ಪರಿಣಾಮಕಾರಿ ಸಂಪರ್ಕಜಾಲ ಸ್ಥಾಪನೆ ಹಾಗೂ ಸಂಪರ್ಕಗಳನ್ನು ಹೊಂದುವ ಮೂಲಕ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳು ಹಾಗೂ ಅಪಾಯದಲ್ಲಿರುವ ಕುಟುಂಬಗಳನ್ನು ಗುರುತಿಸುವುದು.

6) ಸಂಕಷ್ಟದ ಸನ್ನಿವೇಶಗಳಲ್ಲಿರುವ ಮಕ್ಕಳಿಗೆ ಸಂಬಂಧಿಸಿದಂತೆ, ಸೂಕ್ತ ಕ್ರಮ ಕೈಗೊಳ್ಳುವ ಸಂಬಂಧ ಪ್ರವೃತ್ತಿಗಳು ಹಾಗೂ ಮಾದರಿಗಳ ವಿಶ್ಲೇಷಣೆ ಹಾಗೂ ಉಸ್ತುವಾರಿಗಾಗಿ ಜಿಲ್ಲೆಯ ಹಾಗೂ ಸ್ಥಳೀಯ ಮಟ್ಟದಲ್ಲಿ ಸಂಕಷ್ಟಕ್ಕೀಡಾಗುವ ಸಂಭವವಿರುವ ಕ್ಷೇತ್ರಗಳನ್ನು ಗುರುತಿಸಿ ಮ್ಯಾಪಿಂಗ್ ಮಾಡಿ ಯೋಜನೆ ತಯಾರಿಸಿ ಅನುಷ್ಠಾನಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದು.

7) ಮಕ್ಕಳ ಸಂಬಂಧಿತ ಸೇವಾದಾರರು ಹಾಗೂ ಮಕ್ಕಳಿಗಾಗಿ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಜಿಲ್ಲೆಯ ಸಂಪನ್ಮೂಲಗಳ ಸಂಗ್ರಹ/ ಕ್ರೂಡೀಕರಣ ಮಾಡಿ ಮ್ಯಾಪಿಂಗ್ ಮಾಡುವುದು.

8) ಮಿಷನ್ ವಾತ್ಸಲ್ಯ ಯೋಜನೆಯ ಕಾರ್ಯಕ್ರಮದ ಅಂಶಗಳ ಅನುಷ್ಠಾನ ಹಾಗೂ ಅವುಗಳನ್ನು ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದಕ್ಕಾಗಿ ನಂಬಿಕಸ್ಥ ಸ್ವಯಂಸೇವಾ ಸಂಸ್ಥೆಗಳನ್ನು ಗುರುತಿಸುವುದು ಹಾಗೂ ಪರಿಶೀಲಿಸುವುದು.

9) ದತ್ತು ನಿಬಂಧನೆಗಳಲ್ಲಿ ವ್ಯಾಖ್ಯಾನಿಸಿರುವಂತೆ ಪ್ರಾಯೋಜಕತ್ವ, ಪೋಷಣೆ, ಹಾಗೂ ಎಲ್ಲಾ ರೀತಿಯ ದತ್ತು ವಿಷಯಗಳು ಒಳಗೊಂಡಂತೆ ಕುಟುಂಬ ಆಧಾರಿತ ಸಾಂಸ್ಥಿಕೇತರ ಸೇವೆಗಳ ಅನುಷ್ಠಾನಕ್ಕೆ ಅನುಕೂಲ ಒದಗಿಸುವುದು.

10) ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಪ್ರತಿಯೊಂದು ಮಗುವಿಗೂ ಸಹ **ವೈಯಕ್ತಿಕ ಪೋಷಣಾ ಯೋಜನೆ** ಇರುವುದನ್ನು ಹಾಗೂ ಆ ಯೋಜನೆಯ ನಿಯಮಿತ ಪರಿಷ್ಕರಣೆಯನ್ನು ಖಾತ್ರಿಪಡಿಸುವುದು. ಯೋಜನೆಯ ಅನುಷ್ಠಾನದ ಉಸ್ತುವಾರಿ ವಹಿಸುವುದು.

11) ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಾಗೂ ಅವುಗಳ ಕಾರ್ಯನಿರ್ವಹಣೆಗಳ ಪರಿಣಾಮಕಾರಿ ನಿರ್ವಹಣೆಗಾಗಿ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳ ರಚನೆಯಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಾತ್ರಿಪಡಿಸುವುದು.

12) ಜಿಲ್ಲೆಯ ಮಕ್ಕಳಿಗೆ ಪೋಷಣೆ ಮತ್ತು ರಕ್ಷಣಾ ಸೌಲಭ್ಯಗಳನ್ನು ಒದಗಿಸುವ ಎಲ್ಲಾ ಸಂಸ್ಥೆಗಳು/ ಕೇಂದ್ರಗಳ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ವಹಿಸುವುದು

13) ಮಕ್ಕಳನ್ನು ಎಲ್ಲಾ ಹಂತಗಳಲ್ಲಿಯೂ ಅವರ ಕುಟುಂಬಗಳೊಂದಿಗೆ ಪುನಃ ಸೇರಿಸುವುದು ಅಥವಾ ಸ್ಥಳೀಯ ದತ್ತು, ಪೋಷಣೆ, ಅಂತರರಾಷ್ಟ್ರೀಯ ದತ್ತು ಹಾಗೂ ಸಾಂಸ್ಥಿಕ ಸೇರ್ಪಡೆಗಾಗಿ ಮಕ್ಕಳ ವರ್ಗಾವಣೆಗೆ ಅನುಕೂಲ ಒದಗಿಸುವುದು.

14) ಮಕ್ಕಳಿಗೆ ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸಲು ಮಕ್ಕಳ ರಕ್ಷಣಾ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ (ಸರಕಾರಿ ಮತ್ತು ಸರಕಾರೇತರ ಸ್ವಯಂಸೇವಾ ಸಂಸ್ಥೆಗಳ) ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ದಿ ನಿರ್ಮಾಣ ಮಾಡುವುದು.

15) ಜಿಲ್ಲೆ, ತಾಲ್ಲೂಕು ಹಾಗೂ ಸಮುದಾಯ ಮಟ್ಟಗಳಲ್ಲಿ, ಮಕ್ಕಳ ರಕ್ಷಣಾ ಕಾರ್ಯಕ್ರಮಗಳಲ್ಲಿ ಯುವಜನರ ಸ್ವಯಂಪ್ರೇರಿತ ಭಾಗವಹಿಸುವಿಕೆಯನ್ನು ಖಾತ್ರಿಪಡಿಸುವುದು.

16) ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಕುರಿತಂತೆ ಅಂತರ್–ಕ್ಷೇತ್ರೀಯ ಸಂಪರ್ಕಗಳನ್ನು ನಿರ್ಮಾಣ ಮಾಡಲು ಹಾಗೂ ಮಕ್ಕಳ ಕಲ್ಯಾಣಕ್ಕಾಗಿ ಕೇಂದ್ರ/ರಾಜ್ಯ/ ಇತರೆ ಯಾವುದಾದರೂ ಯೋಜನೆಗಳಡಿ ಮಕ್ಕಳಿಗೆ ಲಾಭಗಳು ದೊರಕುವುದನ್ನು ಖಾತ್ರಿಪಡಿಸಲು ಇತರೆ ಇಲಾಖೆಗಳು (ಮಿಷನ್ ವಾತ್ಯಲ್ಯದಡಿ ಒಮ್ಮುಖ ಮೇಟ್ರಿಕ್ಸ್‌ನಲ್ಲಿ ನಮೂದಿಸಿರುವುದನ್ನೂ ಒಳಗೊಂಡಂತೆ), ನಾಗರಿಕ ಸಮಾಜ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಇತರೆ ಭಾಗೀದಾರರೊಂದಿಗೆ ಒಮ್ಮುಖತೆಯನ್ನು ಖಾತ್ರಿಪಡಿಸುವುದು ಹಾಗೂ ಸುಗಮಗಾರಿಕೆ ಒದಗಿಸುವುದು

17) ಮಕ್ಕಳ ಮೇಲೆ ಪರಿಣಾಮ ಬಿರುವ ಸಾಂದರ್ಭಿಕ ತೊಂದರೆಗಳು ಹಾಗೂ ಸಂಭವನೀಯ ಪರಿಹಾರಗಳ ವಿಶ್ಲೇಷಣೆಗಾಗಿ ಜಿಲ್ಲಾ ಮಟ್ಟದಲ್ಲಿ ಅಗತ್ಯ–ಆಧಾರಿತ ಸಂಶೋಧನೆ/ಅಧ್ಯಯನ ಹಾಗೂ ದಾಖಲೆಪತ್ರಗಳ ನಿರ್ವಹಣೆ ಚಟುವಟಿಕೆಗಳನ್ನು ಕೈಗೊಳ್ಳುವುದು.

18) ಜಿಲ್ಲೆಯಲ್ಲಿ ಮಿಷನ್ ವಾತ್ಸಲ್ಯದ ಅನುಷ್ಠಾನದ ಮೇಲ್ವಿಚಾರಣೆ, ಉಸ್ತುವಾರಿ/ನಿಗಾವಣೆ ಹಾಗೂ ಮೌಲ್ಯಮಾಪನದ ನಿರ್ವಹಣೆ.

19) ಮಕ್ಕಳ ಪುನಃಸ್ಥಾಪನೆ ಹಾಗೂ ಪುನರ್ವಸತಿ ಹಾಗೂ ಪಿಯರ್ ಕಲಿಕೆಗಾಗಿ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಡಿಸಿಪಿಯುಗಳು ಹಾಗೂ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಗಳೊಂದಿಗೆ ಕಾರ್ಯನಿರ್ವಹಣಾ ಸಂಪರ್ಕ ಸ್ಥಾಪಿಸುವುದು

20) ರಾಜ್ಯ/ಕೇಂದ್ರಾಡಳಿತ ಪ್ರದೇಶ ಅಥವಾ ಕೇಂದ್ರ ಸರ್ಕಾರದ ಕೋರಿಕೆಯಂತೆ/ ನಿಗದಿಪಡಿಸಿದಂತೆ ಮಾಹಿತಿ ಹಾಗೂ ಕಾಲಕಾಲಕ್ಕೆ ವರದಿಗಳನ್ನು ಒದಗಿಸುವುದು. ಮಿಷನ್ ವಾತ್ಸಲ್ಯ ಪೋರ್ಟಲ್‌ನಲ್ಲಿ ಮಾಸಿಕ ವರದಿಗಳನ್ನು ಅಪ್‌ಲೋಡ್ ಮಾಡುವುದು.

21) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಎಲ್ಲಾ ಭಾಗೀದಾರ ಇಲಾಖೆಗಳ/ಅಧಿಕಾರಿಗಳ ಮಾಸಿಕ ಸಭೆಗಳನ್ನು ಆಯೋಜಿಸುವುದು.

22) ಮಿಷನ್ ವಾತ್ಸಲ್ಯದ ಗುರಿಗಳು ಹಾಗೂ ಉದ್ದೇಶಗಳ ಸಾಧನೆಗಾಗಿ ಅಗತ್ಯವಿರುವ ಇತರೆ ಯಾವುದಾದರೂ ಚಟುವಟಿಕೆ.

## (ಬಿ) ಡಿಸಿಪಿಯುನಲ್ಲಿ ಕರ್ತವ್ಯ ನಿರ್ವಾಹಕರ ಪಾತ್ರಗಳು ಹಾಗೂ ಜವಾಬ್ದಾರಿಗಳು:

## Roles and Responsibilities of Duty holders in DCPU:

### 1) ಜಿಲ್ಲಾಧಿಕಾರಿಗಳು/ ಜಿಲ್ಲಾ ದಂಡಾಧಿಕಾರಿಗಳು (ಡಿಸಿ/ಡಿಎಂ) –District Magistrate (DM/DC):

i. ಜಿಲ್ಲಾಧಿಕಾರಿಗಳು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ನಿಯಮಗಳನ್ವಯ ಒದಗಿಸಿರುವ ಕಾರ್ಯನಿರ್ವಹಣೆಗಳನ್ನು ನಿರ್ವಹಿಸುವುದು.

ii. ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ಆಯಾ ಕಾಲಮಿತಿಯಲ್ಲಿಯೇ ಹಾಗೂ ಸಮಯೋಚಿತವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕು.

iii. ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ವಾರ್ಷಿಕವಾಗಿ ಮಕ್ಕಳಿಗೆ ವಿಶೇಷವಾಗಿ ಸಂಕಷ್ಟದಲ್ಲಿರುವ ಮಕ್ಕಳಿಗೆ ಸಂಬಂಧಪಟ್ಟಂತೆ ಅಗತ್ಯ ಯೋಜನೆ ಹಾಗೂ ಸಂಪನ್ಮೂಲ ಮ್ಯಾಪಿಂಗ್ ಚಟುವಟಿಕೆ ಆಗುವಂತೆ ನೋಡಿಕೊಂಡು ಅದರ ಅನುಷ್ಠಾನವನ್ನು ಖಾತ್ರಿಪಡಿಸುವುದು.

iv. ಜಿಲ್ಲೆಯಲ್ಲಿ ಮಕ್ಕಳ ಬದುಕುವ, ಅಭಿವೃದ್ಧಿ, ರಕ್ಷಣೆ ಹಾಗೂ ಭಾಗವಹಿಸುವಿಕೆಯ ಹಕ್ಕನ್ನು ಮಕ್ಕಳು ಅನುಭವಿಸುವಂತೆ ಆಗಲು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಇತರ ಎಲ್ಲಾ ಇಲಾಖೆಗಳೂ ಒಳಗೊಂಡಂತೆ ಎಲ್ಲಾ ಭಾಗೀದಾರರೊಂದಿಗೆ ಸಮಾಲೋಚಿಸಿ ಜಿಲ್ಲಾ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಅಭಿವೃದ್ಧಿಪಡಿಸಿ ಅನುಷ್ಠಾನಕ್ಕೆ ತರುವುದು.

v. ಮಕ್ಕಳ ಪುನಃಸ್ಥಾಪನೆ, ಪುನರ್ವಸತಿ ಹಾಗೂ ಸಾಮಾಜಿಕ ಪುನರ್ ಸಂಯೋಜನೆಗಾಗಿ ರಾಜ್ಯ ಸರ್ಕಾರ, ಇತರೆ ಜಿಲ್ಲೆಗಳು ಹಾಗೂ ಕೇಂದ್ರಗಳೊಂದಿಗೆ ಸೂಕ್ತ ಕ್ರಮವಹಿಸುವುದು.

vi. ಸೂಕ್ತ ಸಹಭಾಗಿತ್ವ ಯೋಜನೆ ಹಾಗೂ ಕ್ರಮದ ಮೂಲಕ ಎಲ್ಲಾ ಯೋಜನೆಗಳು ಮಕ್ಕಳಿಗೆ ತಲುಪುವುದನ್ನು ಖಾತ್ರಿಪಡಿಸಲು ವಿಶೇಷ ಪ್ರಯತ್ನಗಳೊಂದಿಗೆ ಸರ್ಕಾರದ ಇತರೆ ಹಾಲಿ ಯೋಜನೆಗಳಡಿ ಮಕ್ಕಳಿಗಾಗಿ ಇರುವ ಎಲ್ಲಾ ಸೌಲಭ್ಯಗಳನ್ನು ಹಾಗೂ ವಿಶೇಷ ಹಕ್ಕುಗಳು ಮಕ್ಕಳಿಗೆ ತಲುಪುವುದನ್ನು ಖಾತ್ರಿಪಡಿಸುವುದು.

vii. ಅನುಪಾಲನಾ ಕೇಂದ್ರಗಳ ಧಿಡೀರ್ ತಪಾಸಣೆಗಳನ್ನು ಕೈಗೊಳ್ಳುವುದು.

viii. ಸೂಕ್ತ ಸಮಯದಲ್ಲಿ ಮಕ್ಕಳಿಗೆ ಪೂರಕ ಶಿಕ್ಷಣ, ವೃತ್ತಿ ಕೌಶಲ್ಯ. ಜೀವನ ಕೌಶಲ್ಯ, ಆಪ್ತಸಮಾಲೋಚನೆ ಸೌಲಭ್ಯ, ವೃತ್ತಿಪರ ತರಬೇತಿಗಳು ತಲುಪುವುದನ್ನು ಖಾತ್ರಿಪಡಿಸಿ, ಅನುಪಾಲನೆಯನ್ನು ಮಾಡುವುದು.

ix. ಈ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ಸೂಕ್ತ ಪ್ರಾಯೋಜಕತ್ವ, ವಿದ್ಯಾರ್ಥಿವೇತನಗಳು, ಸಾಂಸ್ಥೀಕರಣ, ಶಿಕ್ಷಣ ಪಡೆಯಲು ಸಾಲ ಸೌಲಭ್ಯಗಳನ್ನು ಒದಗಿಸುವುದು, ಇತ್ಯಾದಿಗಾಗಿ ಸಾರ್ವಜನಿಕ ಹಾಗೂ ಖಾಸಗಿ ವಲಯಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಇತರೆ ಭಾಗೀದಾರರ ಭಾಗವಹಿಸುವಿಕೆ ಹಾಗೂ ಕೊಡುಗೆಗಳನ್ನು ಪ್ರೋತ್ಸಾಹಿಸುವುದು.

x. ಜಿಲ್ಲೆಯಲ್ಲಿ ಮಕ್ಕಳಿಗೆ ಸಂಬಂಧಪಟ್ಟ ಈ ಕೆಳಕಂಡ ವಿವಿಧ ವಿಷಯಗಳ ಕುರಿತು ಚರ್ಚಿಸಲು ಡಿಸಿಪಿಯು, ಸಿಡಿಪಿಓ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಇಲಾಖೆ, ಪಂಚಾಯತ್‌ರಾಜ್ ಇಲಾಖೆ, ಡಿಎಲ್ಎಸ್ಎ ಹಾಗೂ ಇತರೆ ಭಾಗೀದಾರರೊಂದಿಗೆ ಮಾಸಿಕ ಸಭೆಗಳನ್ನು ನಡೆಸುವುದು:

a) ಮಕ್ಕಳ ಅಗತ್ಯಗಳು ಹಾಗೂ ಸಂಪನ್ಮೂಲಗಳ ಲಭ್ಯತೆಯನ್ನು ಕಾಲಕಾಲಕ್ಕೆ ಖಾತ್ರಿಪಡಿಸಿಕೊಳ್ಳುವುದು.

b) ಆರೋಗ್ಯ ಶಿಕ್ಷಣ ಒಳಗೊಂಡಂತೆ ಲಸಿಕಾಕರಣ ಹಾಗೂ ಇತರೆ ಆರೋಗ್ಯ ಸೇವೆಗಳು

c) ಮಕ್ಕಳ ವಿರುದ್ಧ ಅಪರಾಧ ಹಾಗೂ ಹಿಂಸೆಯ ಪ್ರವೃತ್ತಿ ಹಾಗೂ ಮಕ್ಕಳ ವಿರುದ್ಧದ ಅಪರಾಧಗಳ ಪ್ರಕರಣಗಳಲ್ಲಿ ಅಪರಾಧಿಗಳ ಬಂಧನಕ್ಕಾಗಿ ಕೈಗೊಂಡಿರುವ ಕ್ರಮಗಳು.

d) ಮಕ್ಕಳಿಗಾಗಿ ಗುಣಮಟ್ಟ ಅನುಪಾಲನಾ ಸೇವೆಗಳ ಲಭ್ಯತೆ.

e) ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್‌ನ ಸ್ಥಿತಿಗತಿ ಹಾಗೂ ಅನುಪಾಲನೆಗಾಗಿ ವ್ಯವಸ್ಥೆಗಳು.

f) ಜಿಲ್ಲೆಗಳಲ್ಲಿ ಹಾಗೂ ಸಿಸಿಐಗಳಲ್ಲಿ ತಪ್ಪಿಸಿಕೊಂಡಿರುವ, ಓಡಿಹೋದ, ಅಥವಾ ಮೃತಪಟ್ಟಿರುವ ಮಕ್ಕಳ ವರದಿಗಾರಿಕೆ.

g) ಮಕ್ಕಳ ಪುನಃಸ್ಥಾಪನೆಗಾಗಿ ಸಂಯೋಜನಾ ವ್ಯವಸ್ಥೆಗಳು.

h) ಮಕ್ಕಳಿಗೆ ಸಂಬಂಧಪಟ್ಟಂತೆ ಮತ್ಯಾವುದಾದರೂ ಅಗತ್ಯ ವಿಷಯಗಳು.

xi. ಅನುಪಾಲನಾ ಸಂಸ್ಥೆಗಳು, ಪೊಲೀಸ್ ಠಾಣೆಗಳು ಹಾಗೂ ಹೆಚ್ಚಿನ ಸಂಖ್ಯೆಯ ಮಕ್ಕಳಿರುವ ಇತರೆ ಸ್ಥಳಗಳಲ್ಲಿ ಸಲಹಾ ಪೆಟ್ಟಿಗೆ ಇರಿಸುವಿಕೆಯನ್ನು ಖಾತ್ರಿಪಡಿಸುವುದು, ಹಾಗೂ ಮಕ್ಕಳು ನೀಡಿರುವ ದೂರುಗಳು ಹಾಗೂ ಸಲಹೆಗಳನ್ನು ಅವಲೋಕಿಸಿ, ಸಂಯೋಜಿಸಿ ಸೂಕ್ತ ಕ್ರಮ ಕೈಗೊಳ್ಳುವುದನ್ನು ಖಾತ್ರಿಪಡಿಸುವುದು.

xii. ದತ್ತು ನಿಯಮಾವಳಿಗಳಲ್ಲಿ ಹೇಳಿರುವ ವಿಷಯ ಹಾಗೂ ವ್ಯಾಖ್ಯಾನಿಸಿರುವಂತೆಯೇ ದತ್ತು ಪ್ರಕ್ರಿಯೆ ಆಗುವಂತೆ ಮಾಡುವುದು.

xiii. ಈ ಯೋಜನೆಗೆ ಜಿಲ್ಲಾಧಿಕಾರಿಗಳು/ದಂಡಾಧಿಕಾರಿಗಳು ಕುಂದುಕೊರತೆಗಳ ಪರಿಹಾರ ಪ್ರಾಧಿಕಾರ ಆಗಿರುತ್ತಾರೆ.

## 2. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಡಿಸಿಪಿಓ) –District Child Protection Officer (DCPO):

ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸಿಪಿಓ) ಅವರು ಡಿಸಿಪಿಯುನ ಪ್ರಭಾರ ಅಧಿಕಾರಿಯಾಗಿ ಕಾರ್ಯನಿರ್ವಹಿಸಬೇಕು ಹಾಗೂ ಜಿಲ್ಲಾ ಮಟ್ಟದಲ್ಲಿ ಡಿಸಿಪಿಯುನ ದೈನಂದಿನ ಕಾರ್ಯನಿರ್ವಹಣೆಗಳನ್ನು ಕೈಗೊಳ್ಳಬೇಕು. ಡಿಸಿಪಿಓ, ಸರ್ಕಾರದ ವತಿಯಿಂದ ನಿಯೋಜನೆಗೊಂಡಿರುವ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಗೆಜೆಟೆಡ್ ಅಧಿಕಾರಿಗೆ ಆದ್ಯತೆ ನೀಡಬೇಕು. ಮಿಷನ್ ವಾತ್ಸಲ್ಯ ಯೋಜನೆಯ ಅನುಷ್ಠಾನ ಇಲಾಖೆಯ (ಸಮಾಜ ಕಲ್ಯಾಣ/ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ) ಜಿಲ್ಲಾ ಮಟ್ಟದ ಅಧಿಕಾರಿ ಲಭ್ಯವಿರುವ ಜಿಲ್ಲೆಗಳಲ್ಲಿ ಆತ/ಆಕೆ ಡಿಸಿಪಿಓ ಆಗಿ ಕಾರ್ಯನಿರ್ವಹಿಸಬಹುದು. **ಡಿಸಿಪಿಓ ರವರ ಪಾತ್ರಗಳು ಹಾಗೂ ಜವಾಬ್ದಾರಿಗಳು ಈ ಕೆಳಗಿನಂತಿರುತ್ತವೆ:**

i. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಎಲ್ಲಾ ಸಂಸ್ಥೆಗಳು/ ಕೇಂದ್ರಗಳು/ ಯೋಜನೆಗಳು/ ಕಾರ್ಯಕ್ರಮಗಳು/ ಎನ್‌ಜಿಒಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಹಾಗೂ ಸಾಂಸ್ಥಿಕೇತರ ಪೋಷಣಾ ಕಾರ್ಯಕ್ರಮಗಳ ಸಂಯೋಜನೆ ಒಳಗೊಂಡಂತೆ ಜಿಲ್ಲಾ ಮಟ್ಟದಲ್ಲಿ ಮಿಷನ್/ಅಭಿಯಾನದ ಯೋಜನೆಯ ಹಾಗೂ ಇತರೆ ಎಲ್ಲಾ ಮಕ್ಕಳ ರಕ್ಷಣಾ ಚಟುವಟಿಕೆಗಳ ಅನುಷ್ಠಾನ, ಸಂಯೋಜನೆ ಹಾಗೂ ಮೇಲ್ವಿಚಾರಣೆಯನ್ನು ಮಾಡಬೇಕು.

ii. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ವಾರ್ಷಿಕ ಮಕ್ಕಳ ರಕ್ಷಣಾ ಯೋಜನೆ ತಯಾರಿಕೆ/ಅಭಿವೃದ್ಧಿಯಲ್ಲಿ ಜಿಲ್ಲಾಧಿಕಾರಿಗಳಿಗೆ ನೆರವಾಗಬೇಕು ಹಾಗೂ ಜಿಲ್ಲಾಧಿಕಾರಿಗಳಿಗೆ ಅದರ ವರದಿಯನ್ನು ಒಪ್ಪಿಸಿ ಸೂಕ್ತ ಅನುಮತಿಯೊಂದಿಗೆ ಅನುಷ್ಠಾನಕ್ಕೆ ತರಬೇಕು.

iii. ಮಕ್ಕಳ ನ್ಯಾಯಕ್ಕೆ ಸಂಬಂಧಪಟ್ಟ ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಪ್ರತಿಯೊಂದು ಮಗುವಿನ ವಿವರಗಳನ್ನೂ ಸಹ ಕೇಂದ್ರೀಯ ನಿರ್ವಹಣೆಯಡಿ ಇರುವ ವಾತ್ಸಲ್ಯ ಪೋರ್ಟಲ್‌ನಲ್ಲಿ ಅಪ್‌ಲೋಡ್ ಆಗುವುದನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಖಾತ್ರಿಪಡಿಸಬೇಕು.

iv. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಈ ಕೆಳಗಿನವುಗಳು ಒಳಗೊಂಡಂತೆ ಎಲ್ಲಾ ಪೂರಕ ಇಲಾಖೆಗಳು/ ಅಧಿಕಾರಿಗಳೊಂದಿಗೆ ಸೂಕ್ತ ಸಹಯೋಗ/ಸಂಯೋಜನೆ ಮತ್ತು ಸಹಭಾಗಿತ್ವವನ್ನು ಪಡೆಯಬೇಕು.

a) ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
b) ಪೊಲೀಸ್ ವರಿಷ್ಠಾಧಿಕಾರಿ
c) ಕಾರ್ಮಿಕ ಅಧಿಕಾರಿ, ಶಿಕ್ಷಣ ಅಧಿಕಾರಿ
d) ಜಿಲ್ಲಾ ವೈದ್ಯಕೀಯ ಅಧಿಕಾರಿ/ ಮುಖ್ಯ ವೈದ್ಯಕೀಯ ಅಧಿಕಾರಿ/ ಸಿವಿಲ್ ಸರ್ಜನ್
e) ಪಂಚಾಯತ್‌ರಾಜ್ ಸಂಸ್ಥೆಗಳು (ಪಿಆರ್‌ಐ) ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳು
f) ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ (ಸಿಡಿಪಿಓ)
g) ಸ್ವಯಂಸೇವಾ ಸಂಸ್ಥೆಗಳು
h) ಆಸ್ಪತ್ರೆಗಳು/ ನರ್ಸಿಂಗ್ ಹೋಂಗಳು
i) ಮಕ್ಕಳ ಕಲ್ಯಾಣ ಸಮಿತಿ
j) ಮಕ್ಕಳ ನ್ಯಾಯ ಮಂಡಲಿ
k) ಜಿಲ್ಲಾ ಮಟ್ಟದಲ್ಲಿ ಮಕ್ಕಳ ರಕ್ಷಣಾ ಕಾರ್ಯಕ್ರಮಗಳು/ ಸೇವೆಗಳ ಮೇಲೆ ನೇರ ಅಥವಾ ಪರೋಕ್ಷ ಪರಿಣಾಮ ಉಂಟು ಮಾಡುವಂತಹ ಇತರೆ ಪ್ರಾಧಿಕಾರಗಳು/ ಸಂಸ್ಥೆಗಳು/ ವ್ಯಕ್ತಿಗಳು, ಇತ್ಯಾದಿ

v. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲೆಯಲ್ಲಿರುವ ಪ್ರತಿ ಪೋಷಣಾ ಮತ್ತು ರಕ್ಷಣಾ ಸಂಸ್ಥೆಗಳ ನಿರ್ವಹಣಾ ಸಮಿತಿಯನ್ನು ಮುನ್ನಡೆಸಬೇಕು ಹಾಗೂ ಮಕ್ಕಳ ಪಾಲನಾ ಮತ್ತು ರಕ್ಷಣಾ ಸಂಸ್ಥೆಗಳ (ಸಿಸಿಐಗಳ) ಕ್ಷೇತ್ರ ಭೇಟಿಗಳನ್ನು ಕೈಗೊಳ್ಳಬೇಕು.

vi. ಅಭಿಯಾನದಡಿ ಎಸ್‌ಸಿಪಿಎಸ್‌ನಿಂದ ಬರುವ ಅನುದಾನವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದನ್ನು ಖಾತ್ರಿಪಡಿಸಬೇಕು.

vii. ಆತ/ಆಕೆ ಕೈಗೊಂಡ ಸಭೆಗಳು ಹಾಗೂ ಸಭೆಯ ನಿರ್ಣಯಗಳಿಗೆ ಸಂಬಂಧಪಟ್ಟಂತೆ ಕೈಗೊಂಡ ಕ್ರಮಗಳ ಕುರಿತು ನಿಯಮಿತವಾಗಿ ವರದಿ ಮಾಡಲು ಪಂಚಾಯತ್‌ರಾಜ್ ಸಂಸ್ಥೆಗಳು (ಪಿಆರ್‌ಐಗಳು–PRIs) ಹಾಗೂ ನಗರ ಸ್ಥಳೀಯ ಸಂಸ್ಥೆ (ಯುಎಲ್‌ಬಿ–ULBs) ಗಳೊಂದಿಗೆ ಸಂಯೋಜಿಸಬೇಕು ಹಾಗೂ ಆ ವರದಿಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದನ್ನು ಖಾತ್ರಿಪಡಿಸಬೇಕು.

viii. ಸಮುದಾಯದ ಪ್ರತಿನಿಧಿಗಳು ಹಾಗೂ ಸ್ಥಳೀಯ ಸಂಸ್ಥೆಗಳು ಹಾಗೂ ಮಾಧ್ಯಮದವರು ಒಳಗೊಂಡಂತೆ ಎಲ್ಲಾ ಭಾಗೀದಾರರೊಂದಿಗೆ ಮಾಸಿಕ ಪರಿಶೀಲನಾ ಸಭೆಗಳನ್ನು ಆಯೋಜಿಸಬೇಕು.

ix. ಮಿಷನ್/ಅಭಿಯಾನದ ಯೋಜನೆಯ ಉದ್ದೇಶಗಳ ಈಡೇರಿಕೆಗಾಗಿ ಜಿಲ್ಲಾಧಿಕಾರಿಗಳು ನಿಯೋಜಿಸುವ ಇತರ ಯಾವುದೇ ಕೆಲಸವನ್ನು ನಿರ್ವಹಿಸಬೇಕು.

3) **ಜಿಲ್ಲಾ ಮಕ್ಕಳ ರಕ್ಷಣಾ ಘಟಕದ** ಇತರೆ ಕರ್ತವ್ಯ ನಿರ್ವಾಹಕರ (ಸಿಬ್ಬಂದಿಗಳ) ಜಿಲ್ಲಾ ವ್ಯಾಪ್ತಿಯಲ್ಲಿನ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ಅನುಬಂಧ–III, ಭಾಗ– ಎ ರಲ್ಲಿ ಒದಗಿಸಿದೆ.

4) **ಜಿಲ್ಲಾ ಮಕ್ಕಳ ರಕ್ಷಣಾ ಘಟಕದ** ಸಿಬ್ಬಂದಿಗಳ ಆಯ್ಕೆ ಪ್ರಕ್ರಿಯೆಗೆ ಅಗತ್ಯವಿರುವ ಸೂಚಕ ಅರ್ಹತೆಯ ವಿವರಗಳನ್ನು ಅನುಬಂಧ – III, ಭಾಗ–ಬಿ & ಭಾಗ–ಸಿ ರಲ್ಲಿ ಒದಗಿಸಲಾಗಿದೆ.

## ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಭೂತಸೌಕರ್ಯ–

## Infrastructure for District Child Protection Unit:

ಸಂಬಂಧಪಟ್ಟ ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಡಿಸಿಪಿಯುಗೆ ಅವರ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸಲು ಅಗತ್ಯ ಸ್ಥಳ ಹಾಗೂ ಮೂಲಭೂತಸೌಕರ್ಯವನ್ನು ಒದಗಿಸಬೇಕು. ಡಿಸಿಪಿಯುಗಳು ಜಿಲ್ಲಾ ಮಟ್ಟದಲ್ಲಿ ಸಂಬಂಧಪಟ್ಟ ಇಲಾಖೆಯ ಕಚೇರಿಯ ಆವರಣದಿಂದಲೇ ಕಾರ್ಯನಿರ್ವಹಿಸಬಹುದು. ಒಂದು ವೇಳೆ ರಾಜ್ಯ/ಕೇಂದ್ರಾಡಳಿತ ಸರ್ಕಾರಗಳು ಅಥವಾ ಜಿಲ್ಲಾಡಳಿತಕ್ಕೆ ಡಿಸಿಪಿಯುಗೆ ಸೂಕ್ತ ಸ್ಥಳಾವಕಾಶ ಒದಗಿಸುವುದು ಸಾಧ್ಯವಾಗದಿದ್ದಲ್ಲಿ ಬಾಡಿಗೆ ಕಟ್ಟಡದಿಂದ ಕಾರ್ಯನಿರ್ವಹಿಸಬಹುದು. ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಹಾಲಿ ಇರುವ ಮೂಲಭೂತಸೌಕರ್ಯವನ್ನೇ ಬಳಸಿಕೊಳ್ಳಲು ಆದ್ಯತೆ ನೀಡಬೇಕು ಹಾಗೂ ಪ್ರಯತ್ನಿಸಬೇಕು. ಡಿಸಿಪಿಯು ಸ್ಥಾಪನೆಗೆ ಅಗತ್ಯವಿರುವ ಹಣಕಾಸಿನ ಬೆಂಬಲದ ವಿವರಗಳನ್ನು ಜಿಲ್ಲಾ ಅನುಬಂಧ–III, ಭಾಗ–ಡಿ ರಲ್ಲಿ ಒದಗಿಸಿದೆ.

## 2.8 ಜಿಲ್ಲಾ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ–

## District Child Welfare and Protection Committee:

ಜಿಲ್ಲಾಧಿಕಾರಿಗಳು ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಯ ಅಧ್ಯಕ್ಷತೆಯನ್ನು ವಹಿಸಬೇಕು. ಸಮಿತಿಯು ಮಿಷನ್ ವಾತ್ಸಲ್ಯದ ಪರಿಣಾಮಕಾರಿ ಅನುಷ್ಠಾನಕ್ಕೆ ಜವಾಬ್ದಾರಿಯಾಗಿರುತ್ತದೆ. ಜಿಲ್ಲಾಧಿಕಾರಿಗಳು ಸಮಿತಿಯ ತ್ರೈಮಾಸಿಕ ಪರಿಶೀಲನಾ ಸಭೆಗಳನ್ನು ನಡೆಸಬೇಕು. ಸಮಿತಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ: ***(ಕರ್ನಾಟಕದಲ್ಲಿ ಪ್ರತಿ ಜಿಲ್ಲೆಯಲ್ಲಿ, ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ–DCPC-Distrcit Child Protection Committee ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.)***

| **ಕ್ರ.ಸಂ.** | **ಸದಸ್ಯರು** | **ಹುದ್ದೆ** |
|---|---|---|
| **1.** | **ಜಿಲ್ಲಾಧಿಕಾರಿಗಳು** | **ಅಧ್ಯಕ್ಷರು** |
| 2. | ಪೊಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 3. | ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ರತಿನಿಧಿ | ಸದಸ್ಯರು |
| 4. | ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯರು |
| 5. | ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ. | ಸದಸ್ಯರು |
| 6. | ಜಿಲ್ಲಾ ಮುಖ್ಯ ವೈದ್ಯಕೀಯ ಅಧಿಕಾರಿ/ ಸಿವಿಲ್ ಸರ್ಜನ್ | ಸದಸ್ಯರು |
| 7. | ಜಿಲ್ಲಾ ಕಾರ್ಮಿಕ ಅಧಿಕಾರಿಗಳು | ಸದಸ್ಯರು |
| 8. | ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 9. | ಜಿಲ್ಲಾ ಯುವಜನ ಸೇವಾ ಹಾಗೂ ಕ್ರೀಡಾಧಿಕಾರಿಗಳು | ಸದಸ್ಯರು |
| 10. | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು | ಸದಸ್ಯರು |

| | | |
|---|---|---|
| 11. | ಯೋಜನಾ ಅಧಿಕಾರಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ (ಐಟಿಡಿಪಿ) | ಸದಸ್ಯರು |
| 12. | ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ | ಸದಸ್ಯರು |
| 13. | ಜಿಲ್ಲಾ ಯೋಜನಾಧಿಕಾರಿಗಳು (ಜಿಲ್ಲಾ ಪಂಚಾಯತ್/ಜಿಲ್ಲಾಡಳಿತ) | ಸದಸ್ಯರು |
| **14.** | **ಜಿಲ್ಲಾ ಕಾರ್ಯಕ್ರಮ ಅಧಿಕಾರಿ (ಡಬ್ಲ್ಯೂಸಿಡಿ)/ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ/ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕೇಂದ್ರ ಸ್ಥಾನ. *(ಹಾಲಿ ಕರ್ನಾಟಕದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳೇ ಈ ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ)*** | **ಸದಸ್ಯ ಕಾರ್ಯದರ್ಶಿ** |
| 15. | ಇತರೆ ಯಾವುದೇ ಕ್ಷೇತ್ರ/ ಶಾಸನಬದ್ಧ ಸಂಸ್ಥೆಗಳು/ ಇಲಾಖೆಗಳ ತಜ್ಞರು/ | ಸಹ–ಆಯ್ಕೆ ಮಾಡಲಾದ ಸದಸ್ಯರು |

ಮಿಷನ್ ವಾತ್ಸಲ್ಯ ಯೋಜನೆಯ ಅನುಷ್ಠಾನದ ಪ್ರಕ್ರಿಯೆಯಲ್ಲಿ ಅಭಿವೃದ್ಧಿಪಡಿಸಬೇಕಾಗಿರುವಂತೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನಿರ್ದಿಷ್ಟ ಸೂಚಕಗಳ ಆಧಾರದ ಮೇಲೆ, ಮಿಷನ್ ವಾತ್ಸಲ್ಯ ಯೋಜನೆಯ ಚಟುವಟಿಕೆಗಳು ಹಾಗೂ ಒಟ್ಟಾರೆ ಅನುಷ್ಠಾನದ ಮೇಲ್ವಿಚಾರಣೆ ಹಾಗೂ ಉಸ್ತುವಾರಿಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗೆ, **(ಕರ್ನಾಟಕದಲ್ಲಿ ಡಿಸಿಪಿಸಿ– ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ)** ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು) ನೆರವಾಗುತ್ತದೆ. ಡಿಸಿಪಿಯುನ ಸಹಾಯದೊಂದಿಗೆ ಸಮಿತಿಯು ಜಿಲ್ಲೆಗಳಲ್ಲಿ ಸಂಪನ್ಮೂಲ ಕೈಪಿಡಿಯನ್ನು ತಯಾರಿಸಲು ಹಾಗೂ ಕಾಲಕಾಲಕ್ಕೆ ಸಮಿತಿಗಳು ಹಾಗೂ ಮಂಡಳಿಗಳಿಗೆ ಮಾಹಿತಿಯನ್ನು ಒದಗಿಸಲು, ಸಂಕಷ್ಟದ ಸನ್ನಿವೇಶಗಳಲ್ಲಿರುವ ಮಕ್ಕಳ ಸಂಖ್ಯೆಯನ್ನು ಗುರುತಿಸಿ, ಅಂದಾಜಿಸಲು ಹಾಗೂ ಸಂಕಷ್ಟದ ಸನ್ನಿವೇಶಗಳಲ್ಲಿರುವ ಮಕ್ಕಳ ಪ್ರವೃತ್ತಿಗಳು ಹಾಗೂ ಮಾದರಿಗಳನ್ನು ಉಸ್ತುವಾರಿ ಮಾಡಲು ಜಿಲ್ಲಾ ಮಟ್ಟದಲ್ಲಿ ನಿರ್ದಿಷ್ಟ ಡೇಟಾಬೇಸ್‌ಗಳನ್ನು ತಯಾರಿಸಲು ಜಿಲ್ಲೆಗಳಲ್ಲಿ ಆವರ್ತಕ ಹಾಗೂ ಕ್ರಮಬದ್ಧವಾದ ಮ್ಯಾಪಿಂಗ್ ಅನ್ನು ನಡೆಸಬೇಕು. ಜೊತೆಗೆ ಸಮಿತಿಯು, ಜಿಲ್ಲಾ ಮಟ್ಟದಲ್ಲಿ ಪ್ರಾಯೋಜಕತ್ವ, ಪೋಷಣೆ ಹಾಗೂ ಅನುಪಾಲನೆ ಒಳಗೊಂಡಂತೆ ಸಾಂಸ್ಥಿಕೇತರ ಪೋಷಣಾ ಕಾರ್ಯಕ್ರಮಗಳ ಅನುಷ್ಠಾನಕ್ಕೂ ಅಗತ್ಯ ಅನುಕೂಲವನ್ನು ಒದಗಿಸಬೇಕು. ಡಿಸಿಪಿಯು ನೆರವಿನೊಂದಿಗೆ ಸಮಿತಿಯು, ಮಕ್ಕಳ ಉತ್ತಮ ರಕ್ಷಣೆಗಾಗಿ ಪುನರ್ವಸತಿ ಹಾಗೂ ವಿಧಾನಗಳಿಗಾಗಿ, ಮಿಷನ್/ಅಭಿಯಾನದ ಯೋಜನೆ ಕುರಿತ ವಿವಿಧ ಅಂಶಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಒಂದು ಮಾಧ್ಯಮ ಹಾಗೂ ಸಂವಹನಾ ಯೋಜನೆಯನ್ನೂ ರೂಪಿಸಬಹುದು. ಜಿಲ್ಲೆಯಲ್ಲಿ ಸರ್ಕಾರದ ವಿವಿಧ ಕಲ್ಯಾಣ/ಅಭಿವೃದ್ಧಿ ಯೋಜನೆಗಳು ಮಕ್ಕಳಿಗೆ ತಲುಪುವುದನ್ನು ಖಾತ್ರಿಪಡಿಸಲು ಸಮಿತಿಯು ಇತರೆ ಸರ್ಕಾರಿ ಇಲಾಖೆಗಳೊಂದಿಗೆ ಸಹಭಾಗಿತ್ವವನ್ನು ಸಾಧಿಸಲು ವಿಶೇಷ ಪ್ರಯತ್ನಗಳನ್ನೂ ಮಾಡಬೇಕು.

## 2.9 ಮಕ್ಕಳ ನ್ಯಾಯ ಮಂಡಳಿ – Juvenile Justice Board:

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 ಪ್ರಕಾರ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳನ್ನು ವಿಲೇವಾರಿ ಮಾಡಲು ಪ್ರತಿ ಜಿಲ್ಲೆಯಲ್ಲಿ ಒಂದು ಮಕ್ಕಳ ನ್ಯಾಯ ಮಂಡಳಿಯನ್ನು (ಜೆಜೆಬಿ) ಕಡ್ಡಾಯವಾಗಿ ಸ್ಥಾಪಿಸಬೇಕು. ಜೆಜೆಬಿಯ ಸದಸ್ಯರು ಹಾಗೂ ಕಾರ್ಯನಿರ್ವಹಣೆಯ ಸಿಬ್ಬಂದಿ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರ ಪ್ರಕಾರ ಇರಬೇಕು. ಮಿಷನ್ ವಾತ್ಸಲ್ಯ ಪ್ರತಿ ಜಿಲ್ಲೆಯಲ್ಲಿ ಜೆಜೆಬಿಗಳನ್ನು ಸ್ಥಾಪಿಸಲು ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸಲು ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ಬೆಂಬಲ ಹಾಗೂ ಮೂಲಸೌಕರ್ಯವನ್ನು ಒದಗಿಸಬೇಕು. ಮಕ್ಕಳ ನ್ಯಾಯ ಮಂಡಳಿಯು, ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಮಕ್ಕಳ ನ್ಯಾಯ ಕಾಯ್ದೆ/ ನಿಯಮಗಳ ಪ್ರಕಾರ ನಿಗಧಿಪಡಿಸುವ ಕಾರ್ಯನಿರ್ವಹಣೆಗಳು ಹಾಗೂ ಪಾತ್ರಗಳ ಪ್ರಕಾರ ಕಾರ್ಯನಿರ್ವಹಿಸಬೇಕು. ಜೆಜೆಬಿ ತನ್ನ ಸಭೆಗಳು, ವಿಚಾರಣೆಗಳು ಹಾಗೂ ಇತರೆ ಚಟುವಟಿಕೆಗಳನ್ನು ವೀಕ್ಷಣಾಲಯದ ಆವರಣದಲ್ಲಿ ನಡೆಸಬೇಕು. ಈ ಯೋಜನೆಯಡಿ ಇಬ್ಬರು ಸಾಮಾಜಿಕ ಕಾರ್ಯಕರ್ತ ಸದಸ್ಯರಿಗೆ ಪ್ರಯಾಣ/ ಸಭೆ ಭತ್ಯೆ ಅಥವಾ ಪ್ರೋತ್ಸಾಹಧನವನ್ನು ಒದಗಿಸಬಹುದು.

ಈ ಯೋಜನೆಯಡಿ ಪ್ರತಿ ಜೆಜೆಬಿಗೆ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಓರ್ವ ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್ ಅನ್ನು ಒದಗಿಸಲಾಗುವುದು. ಈ ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್‌ನ ಸೂಚಕ ಅರ್ಹತೆಗಳ ವಿವರಗಳನ್ನು ಜಿಲ್ಲಾ ಅನುಬಂಧ – III, ಭಾಗ–ಇ ರಲ್ಲಿ ಒದಗಿಸಿದೆ.

## ಮಕ್ಕಳ ನ್ಯಾಯ ಮಂಡಳಿ (ಜೆಜೆಬಿ) ಸ್ಥಳ:

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರ ಪ್ರಕಾರ ಜೆಜೆಬಿ ತನ್ನ ವಿಚಾರಣೆಗಳು ಹಾಗೂ ಇತರೆ ಚಟುವಟಿಕೆಗಳನ್ನು ವೀಕ್ಷಣಾಲಯದ ಆವರಣದಲ್ಲಿ ನಡೆಸಬೇಕು.

## ಮಕ್ಕಳ ನ್ಯಾಯ ಮಂಡಳಿಗೆ (ಜೆಜೆಬಿ) ಮೂಲಸೌಕರ್ಯ:

ನಿರ್ಮಾಣ ಮಾಡಲಾಗುವ ಪ್ರತಿ ವೀಕ್ಷಣಾಲಯದಲ್ಲಿ ಜೆಜೆಬಿಗಾಗಿ 300 ಚದರಡಿಯ ಎರಡು ಕೊಠಡಿಗಳಿರಬೇಕು. ಅಗತ್ಯ ಸ್ಥಳಾವಕಾಶವಿರುವ ಹಾಲಿ ವೀಕ್ಷಣಾಗೃಹಗಳಲ್ಲಿ ಮಂಡಳಿಗೆ ಒದಗಿಸುವುದು. ಆದರೆ ವೀಕ್ಷಣಾಲಯ ಇಲ್ಲದಿರುವಂತಹ ಜಿಲ್ಲೆಗಳಲ್ಲಿ ಅಥವಾ ಜೆಜೆಬಿಗೆ ಸ್ಥಳಾವಕಾಶ ಇಲ್ಲದಿರುವಂತಹ ಜಿಲ್ಲೆಗಳಲ್ಲಿ ಹಾಲಿ ವೀಕ್ಷಣಾಲಯದಲ್ಲಿ ಜೆಜೆಬಿಗಾಗಿ ಬಾಡಿಗೆಗೆ ಸೂಕ್ತ ಸ್ಥಳ ಅಥವಾ ಕಟ್ಟಡ ನಿರ್ಮಿಸಲು ಮಿಷನ್ ಅಡಿ ಹಣಕಾಸಿನ ನೆರವನ್ನು ಒದಗಿಸಲಾಗುವುದು.

ಮಂಡಳಿಯು ಒಂದು ಕೊಠಡಿಯನ್ನು ತನ್ನ ಚಟುವಟಿಕೆಗಳಿಗೆ ಹಾಗೂ ಮತ್ತೊಂದು ಕೊಠಡಿಯನ್ನು ಮಕ್ಕಳು ಹಾಗೂ ಅವರ ಕುಟುಂಬಗಳ ಸದಸ್ಯರು ಕಾಯುವ ಸ್ಥಳವನ್ನಾಗಿ ಬಳಸಿಕೊಳ್ಳಬೇಕು. ಮಂಡಳಿಯ ಆವರಣ ಸ್ವಾಗತಾರ್ಹ ಪರಿಸರವನ್ನು ಹೊಂದಿರಬೇಕು. ಮಂಡಳಿಯು ತನ್ನ ವಿಚಾರಣೆ, ಚಟುವಟಿಕೆಗಳನ್ನು ನಡೆಸುವ ಸಮಿತಿ ಕೊಠಡಿಯು ಮಕ್ಕಳ ಸ್ನೇಹಿ ಪರಿಸರವನ್ನು ಹೊಂದಿರಬೇಕು. ಅಗತ್ಯ ಪೀಠೋಪಕರಣಗಳು, ಗಣಕಯಂತ್ರ ಹಾಗೂ ಇತರೆ ಮೂಲ ಉಪಕರಣಗಳನ್ನು ಲಭ್ಯಗೊಳಿಸಬೇಕು. ಕಾಯುವ ಸ್ಥಳದಲ್ಲಿ ಶೌಚಾಲಯ ವ್ಯವಸ್ಥೆ, ಕುಡಿಯುವ ನೀರು ಹಾಗೂ ಮಕ್ಕಳಿಗಾಗಿ ಒಳಾಂಗಣ ಮನರಂಜನಾ ಸೌಕರ್ಯಗಳಿರಬೇಕು.

ಜೆಜೆಬಿಯು ತನ್ನ ವಿಚಾರಣೆಗಳನ್ನು ನಡೆಸುವ ವೀಕ್ಷಣಾಲಯವು ಜೆಜೆಬಿಗೆ ವಿಚಾರಣೆಗಳು ನಡೆಯುವ ದಿನಗಳಂದು ಆಪ್ತಸಮಾಲೋಚನೆ ಹಾಗೂ ಕಚೇರಿ ಸಹಾಯಕರ ಬೆಂಬಲವನ್ನು ಒದಗಿಸಬೇಕು. ಡಿಸಿಪಿಯು ಅಗತ್ಯವಿರುವಾಗ ಕಾನೂನು ಹಾಗೂ ಆಪ್ತಸಮಾಲೋಚನಾ ಬೆಂಬಲವನ್ನು ಒದಗಿಸಬೇಕು. ಜೆಜೆಬಿ ಸ್ಥಾಪಿಸಲು ಹಣಕಾಸಿನ ನೆರವಿನ ವಿವರಗಳನ್ನು ಜಿಲ್ಲಾ ಅನುಬಂಧ – III, ಭಾಗ–ಎಫ್ ರಲ್ಲಿ ಒದಗಿಸಲಾಗಿದೆ.

## 2.10 ಮಕ್ಕಳ ಕಲ್ಯಾಣ ಸಮಿತಿ – Child Welfare Committee (CWC):

***ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 ರಡಿ, ಪ್ರತಿ ಜಿಲ್ಲೆಯಲ್ಲಿಯೂ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಪೋಷಣೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಹಾಗೂ ಪುನರ್ವಸತಿಗಾಗಿ ಹಾಗೂ ಅವರ ಮೂಲಭೂತ ಅಗತ್ಯತೆಗಳು ಹಾಗೂ ಮಾನವ ಹಕ್ಕುಗಳ ರಕ್ಷಣೆಗಾಗಿ ಪ್ರಕರಣಗಳ ವಿಲೇವಾರಿ ಮಾಡುವ ಪ್ರಾಧಿಕಾರವಾಗಿ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಯನ್ನು ಸ್ಥಾಪಿಸುವುದು ಕಡ್ಡಾಯವಾಗಿದೆ.*** ಸಿಡಬ್ಲ್ಯೂಸಿಯ ರಚನೆ ಹಾಗೂ ಕಾರ್ಯನಿರ್ವಹಣೆ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರ ಹಾಗೂ ಸಂಬಂಧಪಟ್ಟ ನಿಯಮಗಳ ಪ್ರಕಾರ ಇರಬೇಕು. ಪ್ರತಿ ಜಿಲ್ಲೆಯಲ್ಲಿ ಸಿಡಬ್ಲ್ಯೂಸಿ ಸ್ಥಾಪಿಸಲು ಹಾಗೂ ಅವುಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸಲು ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಮಿಷನ್ ವಾತ್ಸಲ್ಯ ಅಗತ್ಯ ಮೂಲಸೌಕರ್ಯ ಹಾಗೂ ಹಣಕಾಸಿನ ಬೆಂಬಲವನ್ನು ಒದಗಿಸುತ್ತದೆ. ಮಕ್ಕಳ ಕಲ್ಯಾಣ ಸಮಿತಿಯು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಮಕ್ಕಳ ನ್ಯಾಯ ಕಾಯ್ದೆ/ ನಿಯಮಗಳು ನಿಗಧಿಪಡಿಸಿರುವ ಕಾರ್ಯನಿರ್ವಹಣೆಗಳು ಹಾಗೂ ನಿಯಮಗಳನ್ನು ಅನುಸರಿಸಬೇಕು. ಈ ಯೋಜನೆಯಡಿ ಸಮಿತಿಯ ಅಧ್ಯಕ್ಷರು, ಹಾಗೂ ನಾಲ್ವರ ಸದಸ್ಯರಿಗೆ ಪ್ರಯಾಣ/ಸಭೆ ಭತ್ಯೆ ಅಥವಾ ಪ್ರೋತ್ಸಾಹ ಧನವನ್ನು ಒದಗಿಸಲಾಗುವುದು.

ಈ ಯೋಜನೆಯಡಿ ಪ್ರತಿ **ಮಕ್ಕಳ ಕಲ್ಯಾಣ ಸಮಿತಿ**ಯಲ್ಲೂ ದೈನಂದಿನ ಕೆಲಸಗಳ ನಿರ್ವಹಣೆಗಾಗಿ ಓರ್ವ ಸಹಾಯಕರು–ಕಂ–ಡೇಟಾ ಎಂಟ್ರಿ ಆಪರೇಟರ್ ಸೇವೆಗಳನ್ನು ಒದಗಿಸಲಾಗುವುದು. ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್‌ನ ಸೂಚಕ ಅರ್ಹತೆಯ ವಿವರಗಳನ್ನು ಅನುಬಂಧ – III, ಭಾಗ–ಇ ರಲ್ಲಿ ಒದಗಿಸಿದೆ.

## ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಸ್ಥಳ:

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರಡಿ ಒದಗಿಸಿರುವಂತೆ, ಮಕ್ಕಳ ಕಲ್ಯಾಣ ಸಮಿತಿಯು ತನ್ನ ವಿಚಾರಣೆಗಳನ್ನು ಮಕ್ಕಳ ಪೋಷಣೆ ಮತ್ತು ರಕ್ಷಣಾ ಸಂಸ್ಥೆಗಳ (ಬಾಲ ಮಂದಿರಗಳಲ್ಲಿ) ಆವರಣದಲ್ಲಿ ನಡೆಸಬಹುದು.

## ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಗಾಗಿ ಮೂಲಸೌಕರ್ಯ:

ನಿರ್ಮಾಣ ಮಾಡಲಾಗುವ ಮಕ್ಕಳ ಪೋಷಣೆ ಮತ್ತು ರಕ್ಷಣಾ ಸಂಸ್ಥೆಗಳಲ್ಲಿ **(ಬಾಲಕರ/ಬಾಲಕಿಯರ ಬಾಲ ಮಂದಿರಗಳಲ್ಲಿ)** ಸಿಡಬ್ಲ್ಯೂಸಿಗಾಗಿ 300 ಚದರಡಿ ಅಳತೆಯ ಎರಡು ಕೊಠಡಿಗಳಿರಬೇಕು. ಮಕ್ಕಳ ಪೋಷಣೆ ಮತ್ತು ರಕ್ಷಣಾ ಸಂಸ್ಥೆಯ ಆವರಣದಲ್ಲಿ ಸಿಡಬ್ಲ್ಯೂಸಿಗಾಗಿ ಈಗಾಗಲೇ ಸ್ಥಳಾವಕಾಶ ಇದ್ದರೆ, ಅದನ್ನು ಸಮಿತಿಗೆ ಒದಗಿಸುವುದು. ಆದರೆ, ಮಕ್ಕಳ ಪೋಷಣೆ ಮತ್ತು ರಕ್ಷಣಾ ಸಂಸ್ಥೆ ಇಲ್ಲದಿರುವಂತಹ ಜಿಲ್ಲೆಗಳಲ್ಲಿ ಅಥವಾ ಹಾಲಿ ಇರುವ ಮಕ್ಕಳ ಪೋಷಣೆ ಮತ್ತು ರಕ್ಷಣಾ ಸಂಸ್ಥೆಯಲ್ಲಿ ಸಿಡಬ್ಲ್ಯೂಸಿಗೆ ಸೂಕ್ತ ಸ್ಥಳಾವಕಾಶ ಇಲ್ಲದಿದ್ದರೆ, ಸಿಡಬ್ಲ್ಯೂಸಿಗಾಗಿ ಸೂಕ್ತ ಸ್ಥಳವನ್ನು ಬಾಡಿಗೆಗೆ ಪಡೆಯಲು ಅಥವಾ ನಿರ್ಮಿಸಲು ಮಿಷನ್/ಅಭಿಯಾನದಡಿ ಹಣಕಾಸನ್ನು ಒದಗಿಸಲಾಗುವುದು.

ಸಮಿತಿಯು ಒಂದು ಕೊಠಡಿಯನ್ನು ತನ್ನ ಚಟುವಟಿಕೆಗಳಿಗೆ ಹಾಗೂ ಮತ್ತೊಂದು ಕೊಠಡಿಯನ್ನು ಮಕ್ಕಳು ಹಾಗೂ ಅವರ ಕುಟುಂಬಗಳ ಸದಸ್ಯರು ಕಾಯುವ ಸ್ಥಳವನ್ನಾಗಿ ಬಳಸಿಕೊಳ್ಳಬೇಕು. ಸಮಿತಿಯ ಆವರಣ ಸ್ವಾಗತಾರ್ಹ ಪರಿಸರವನ್ನು ಹೊಂದಿರಬೇಕು. ಸಮಿತಿಯು ತನ್ನ ವಿಚಾರಣೆ, ಚಟುವಟಿಕೆಗಳನ್ನು ನಡೆಸುವ ಕೊಠಡಿಯು **ಮಕ್ಕಳ ಸ್ನೇಹಿ** ಪರಿಸರವನ್ನು ಹೊಂದಿರಬೇಕು. ಅಗತ್ಯ ಪೀಠೋಪಕರಣಗಳು, ಗಣಕಯಂತ್ರ ಹಾಗೂ ಇತರೆ ಮೂಲ ಉಪಕರಣಗಳನ್ನು ಲಭ್ಯಗೊಳಿಸಬೇಕು. ಕಾಯುವ ಸ್ಥಳದಲ್ಲಿ ಶೌಚಾಲಯ ವ್ಯವಸ್ಥೆ, ಕುಡಿಯುವ ನೀರು ಹಾಗೂ ಮಕ್ಕಳಿಗಾಗಿ ಒಳಾಂಗಣ ಮನರಂಜನಾ ಸೌಕರ್ಯಗಳಿರಬೇಕು.

ಸಿಡಬ್ಲ್ಯೂಸಿ ತನ್ನ ವಿಚಾರಣೆಗಳನ್ನು ನಡೆಸುವ ಮಕ್ಕಳ ಗೃಹ, ಸಿಡಬ್ಲ್ಯೂಸಿಗೆ ವಿಚಾರಣೆಗಳು ನಡೆಯುವ ದಿನಗಳಂದು ಆಪ್ತಸಮಾಲೋಚಕ ಹಾಗೂ ಕಚೇರಿ ಸಹಾಯಕರ ಸೇವೆಗಳ ಬೆಂಬಲವನ್ನು ಒದಗಿಸಬೇಕು. ಜಿಲ್ಲೆಯಲ್ಲಿ ಸಿಡಬ್ಲ್ಯೂಸಿ ರಚಿಸಲು ಒದಗಿಸಲಾಗುವ ಹಣಕಾಸಿನ ಬೆಂಬಲದ ವಿವರಗಳನ್ನು ಜಿಲ್ಲಾ ಅನುಬಂಧ–III, ಭಾಗ–ಜಿ ರಲ್ಲಿ ಒದಗಿಸಲಾಗಿದೆ.

## 2.11 ಮಕ್ಕಳ ವಿಶೇಷ ಪೊಲೀಸ್ ಘಟಕ (ಎಸ್‌ಜೆಪಿಯು) – Special Juvenile Police Unit:

ಮಕ್ಕಳ ನ್ಯಾಯ ಕಾಯ್ದೆ, 2015, ಮಕ್ಕಳೊಂದಿಗೆ ಪೊಲೀಸರ ಇಂಟರ್‌ಫೇಸ್ ಅನ್ನು ಸಂಯೋಜಿಸಲು ಹಾಗೂ ಉನ್ನತೀಕರಿಸಲು ಮತ್ತು ಪ್ರತಿ ಜಿಲ್ಲೆಯಲ್ಲೂ ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು ಸ್ಥಾಪಿಸಲು ಸೂಚಿಸುತ್ತದೆ. ಜಿಲ್ಲೆಯಲ್ಲಿ ಅಥವಾ ನಗರದಲ್ಲಿ ಗೃಹ ಇಲಾಖೆಯ ವತಿಯಿಂದ ಜಿಲ್ಲಾ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು ಎಂದು ನಿಯೋಜಿಸಲ್ಪಡುವ ಪೊಲೀಸ್ ಅಧಿಕಾರಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರು ಎಸ್‌ಜೆಪಿಯು ಸದಸ್ಯರಾಗಿರುತ್ತಾರೆ.

ಈ ಯೋಜನೆಯು ಪ್ರತಿ ಎಸ್‌ಜೆಪಿಯುಗೆ ಇಬ್ಬರು ಸಾಮಾಜಿಕ ಕಾರ್ಯಕರ್ತರ ಬೆಂಬಲವನ್ನು ನೀಡಬೇಕು. ಈ ಸಾಮಾಜಿಕ ಕಾರ್ಯಕರ್ತರನ್ನು ಇಂತಹ ಸಿಬ್ಬಂದಿಗಳ ಅಗತ್ಯ ಹಾಗೂ ಲಭ್ಯತೆಯನ್ನು ಆಧರಿಸಿ ಡಿಸಿಪಿಯು ವತಿಯಿಂದ ಎಸ್‌ಜೆಪಿಯುಗೆ ನಿಯೋಜಿಸಲಾಗುತ್ತದೆ. ಇಬ್ಬರು ಸಾಮಾಜಿಕ ಕಾರ್ಯಕರ್ತರ ಪೈಕಿ, ಕನಿಷ್ಠ ಒಬ್ಬರು ಮಹಿಳಾ ಸಾಮಾಜಿಕ ಕಾರ್ಯಕರ್ತರಾಗಿರಬೇಕು. ಮಕ್ಕಳ ವಿಶೇಷ ಪೊಲೀಸ್ ಘಟಕವು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಮಕ್ಕಳ ನ್ಯಾಯ ಕಾಯ್ದೆ/ ನಿಯಮಾವಳಿಗಳಡಿ ನಿಗಧಿಪಡಿಸಲಾಗುವ ಕಾರ್ಯನಿರ್ವಹಣೆಗಳು ಹಾಗೂ ಪಾತ್ರಗಳನ್ನು ನಿರ್ವಹಿಸಬೇಕು. ಪ್ರತಿ ಎಸ್‌ಜೆಪಿಯುನಲ್ಲಿ 02 ಸಾಮಾಜಿಕ ಕಾಯಕರ್ತರಗೆ ಒದಗಿಸುವ ಹಣಕಾಸಿನ ಬೆಂಬಲದ ವಿವರಗಳನ್ನು ಜಿಲ್ಲಾ ಅನುಬಂಧ – III, ಭಾಗ–2, ಕೋಷ್ಠಕ–ಬಿ, ಕ್ರ. ಸಂ. 6ರಲ್ಲಿ ಒದಗಿಸಲಾಗಿದೆ.

## 2.12 ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳು – Child Welfare and Protection Committees:

ದೇಶದಲ್ಲಿನ ಮಕ್ಕಳ ಸುರಕ್ಷತೆ ಹಾಗೂ ಭದ್ರತೆಯನ್ನು ಖಾತ್ರಿಪಡಿಸಲು ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳ ಸಂಪರ್ಕಜಾಲದ ಮೂಲಕ ಬಲಿಷ್ಠ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು ಮಿಷನ್ ವಾತ್ಸಲ್ಯದ ಅಪೇಕ್ಷೆಯಾಗಿದೆ. ಈ ಸ್ಥಳೀಯ ಸಂಸ್ಥೆಗಳು ಮಕ್ಕಳನ್ನು ತಲುಪಬೇಕು ಹಾಗೂ ಅವರವರ ಪ್ರದೇಶಗಳಲ್ಲಿ ಮಕ್ಕಳ ಯೋಗಕ್ಷೇಮದ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಪ್ರೋತ್ಸಾಹ ನೀಡಿ ಸಮುದಾಯಗಳೊಂದಿಗೆ ಭಾಗಿಯಾಗಬೇಕು.

ಆದ್ದರಿಂದ, ಹಾಲಿ ಸ್ಥಳೀಯ ಸಂಸ್ಥೆಗಳ ಸ್ಥಾಯಿ/ ಉಪ–ಸಮಿತಿ ವ್ಯವಸ್ಥೆಯಲ್ಲಿ ಮಕ್ಕಳ ಕಲ್ಯಾಣ ಹಾಗೂ ರಕ್ಷಣೆಯ ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ವಿಷಯಗಳನ್ನು, ಮಹಿಳೆಯರು ಹಾಗೂ ಮಕ್ಕಳ ಸಾಮಾಜಿಕ ನ್ಯಾಯ/ ಕಲ್ಯಾಣದ ವಿಷಯಗಳೊಂದಿಗೆ ವ್ಯವಹರಿಸುವ ಸ್ಥಳೀಯ ಸಂಸ್ಥೆ/ ಪಂಚಾಯಿತಿ ರಾಜ್ ಸಂಸ್ಥೆ/ ಗ್ರಾಮ ಪಂಚಾಯಿತಿಗೆ ವಹಿಸಬಹುದು. ಸಂಬಂಧಪಟ್ಟ ಸಮಿತಿಗೆ ವಹಿಸಲಾಗುವ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಕ್ರಮಗಳ ಕಾರ್ಯದ ಅಧಿಸೂಚನೆಯನ್ನು ಸ್ಥಳೀಯ ಸಂಸ್ಥೆಯ ಸಕ್ಷಮ ಪ್ರಾಧಿಕಾರದಿಂದ ಹೊರಡಿಸಬಹುದು.

| | |
|---|---|
| **ಪಂಚಾಯಿತಿ ರಾಜ್ ಸಂಸ್ಥೆ** | ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣ (ಅಭಿವೃದ್ಧಿ) ಕಾರ್ಯಗಳೊಂದಿಗೆ ವ್ಯವಹರಿಸುತ್ತಿರುವ ಜಿಲ್ಲಾ ಪಂಚಾಯತ್ |
| | ಮಹಿಳೆಯರು ಹಾಗೂ ಮಕ್ಕಳೊಂದಿಗೆ ವ್ಯವಹರಿಸುತ್ತಿರುವ ತಾಲ್ಲೂಕು ಮಟ್ಟದ ಸಮಿತಿ |
| | ಮಹಿಳೆಯರು ಹಾಗೂ ಮಕ್ಕಳ ಸಾಮಾಜಿಕ ನ್ಯಾಯ/ ಕಲ್ಯಾಣಕ್ಕೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಸ್ಥಾಯಿ ಉಪ–ಸಮಿತಿ |

ದೇಶದ ಮಕ್ಕಳ ರಕ್ಷಣಾ ಚೌಕಟ್ಟನ್ನು ಬಲಪಡಿಸಲು, ಸೇವಾ ಹಂಚಿಕೆ ನಿಬಂಧನೆಗಾಗಿ ಎಲ್ಲಾ ಹಂತಗಳಲ್ಲಿಯೂ ಈ ಸಮಿತಿಗಳಿಗೆ ಬೆಂಬಲ ಒದಗಿಸುವುದು. ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಬ್ಲ್ಯೂಸಿಡಿ), ಜಿಲ್ಲಾ ಸಾಮಾಜ ಕಲ್ಯಾಣ ಅಧಿಕಾರಿ, ಶಿಶು ಅಭಿವೃದ್ಧಿ ಯೋಜನಾ ಕಚೇರಿಗಳು, ಮಾಹಿತಿ, ವರದಿಗಳು, ಸಮಿತಿಗಳನ್ನು ಬಲಪಡಿಸಲು ಅಗತ್ಯ ನೆರವನ್ನು ಒದಗಿಸಬಹುದು, (ಒದಗಿಸಬೇಕು).

ಅದೇ ರೀತಿಯಾಗಿ, ನಗರ ಪ್ರದೇಶಗಳಲ್ಲಿ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ವಿಷಯಗಳನ್ನು, ನಿರ್ಧಿಷ್ಟ ಮುನಿಸಿಪಾಲಿಟಿ ಪ್ರದೇಶದಲ್ಲಿ ಮಹಿಳೆಯರು ಹಾಗೂ ಮಕ್ಕಳ ವಿಷಯಗಳೊಂದಿಗೆ ವ್ಯವಹರಿಸುವ ಹಾಲಿ ಸ್ಥಾಯಿ ಸಮಿತಿಗಳಿಗೆ ವಹಿಸುವುದು.

| | |
|---|---|
| **ನಗರ ಸ್ಥಳೀಯ ಸಂಸ್ಥೆ** | ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣಕ್ಕೆ ಸಂಬಂಧಪಟ್ಟ ವಿಷಯಗಳನ್ನು ನೋಡಿಕೊಳ್ಳುವ ಮುನಿಸಿಪಾಲಿಟಿ/ನಗರ ಸಭೆ/ಪುರಸಭೆ ಹಂತದ ಸ್ಥಾಯಿ ಸಮಿತಿ |
| | ಪ್ರದೇಶದಲ್ಲಿನ ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣಕ್ಕೆ ಸಂಬಂಧಪಟ್ಟ ವಿಷಯಗಳೊಂದಿಗೆ ವ್ಯವಹರಿಸುವ ವಾರ್ಡ್ ಮಟ್ಟದ ಸಮಿತಿ. |

## ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳ ಪ್ರಮುಖ ಕಾರ್ಯನಿರ್ವಹಣೆಗಳು:

i. ಗ್ರಾಮಗಳು/ಗ್ರಾಮ ಪಂಚಾಯಿತಿ/ತಾಲ್ಲೂಕು/ ವಾರ್ಡ್ ಪ್ರದೇಶಗಳು **ಮಕ್ಕಳ ಸ್ನೇಹಿ ಪರಿಸರ** ಹಾಗೂ ಮಕ್ಕಳಿಗೆ ಸುರಕ್ಷಿತ ಸಾರ್ವಜನಿಕ ಸ್ಥಳವೆಂದು ಖಾತ್ರಿಪಡಿಸುವುದು.

ii. ಮಹಿಳೆಯರು ಹಾಗೂ ಮಕ್ಕಳ ಸಂಬಂಧಿತ ಚಟುವಟಿಕೆಗಳನ್ನು ಬೆಂಬಲಿಸಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯಲ್ಲಿ (ಜಿಪಿಡಿಪಿ–GPDP-Gram Panchayat Development Plan) ನಿಬಂಧನೆಯನ್ನು ಸೇರ್ಪಡೆಗೊಳಿಸಲು ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸಲಹೆ ನೀಡುವುದು.

iii. ನಗರ ವಾರ್ಡ್ ಪ್ರದೇಶಗಳಲ್ಲಿ ಮಹಿಳೆಯರು ಹಾಗೂ ಮಕ್ಕಳಿಗೆ ಮಹಾನಗರ ಪಾಲಿಕೆ/ಮುನಿಸಿಪಲ್/ನಗರ ಸಭೆ/ಪುರಸಭೆಗಳಲ್ಲಿ ಪ್ರತ್ಯೇಕ ಆಯವ್ಯಯ ನಿಗಧಿಪಡಿಸುವುದನ್ನು ಖಾತ್ರಿಪಡಿಸುವುದು.

iv. ಆಯಾ ಪ್ರದೇಶದಲ್ಲಿನ ಮಕ್ಕಳಿಗಾಗಿ ಪೂರಕ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಅನುಷ್ಠಾನದ ಪರಿಶೀಲನೆ ಹಾಗೂ ಅಂದಾಜಿಸುವಿಕೆ.

v. ಸಂಭವನೀಯವಾಗಿ ಸಂಕಷ್ಟದ ಸನ್ನಿವೇಶದಲ್ಲಿರುವ ಮಕ್ಕಳು, ಅನಾಥ ಮಕ್ಕಳು, ಬೀದಿ ಮಕ್ಕಳು, ಇತ್ಯಾದಿ ಮಕ್ಕಳ ಹಾಗೂ ವಿಶೇಷ ಅಗತ್ಯವಿರುವ ಎಲ್ಲಾ ಮಕ್ಕಳ ಸಮೀಕ್ಷೆಯನ್ನು ಖಾತ್ರಿಪಡಿಸುವ ಮುಖಾಂತರ ಯಾವುದೇ ಮಗು ಸಂರಕ್ಷಣೆಯಿಂದ ತಪ್ಪಿಸಿಕೊಳ್ಳದಂತೆ/ನಿರ್ಲಕ್ಷ್ಯಕ್ಕೆ ಒಳಗಾಗದಂತೆ ನೋಡುವುದು.

vi. ತಪ್ಪಿಸಿಕೊಂಡಿರುವ ಮಕ್ಕಳು, ಶಾಲೆಯಿಂದ ಹೊರಗುಳಿದಿರುವ ಮಕ್ಕಳು, ಮಾನವ ಕಳ್ಳ ಸಾಗಣೆಯ ಸಂತ್ರಸ್ತರು, ವಲಸೆ ಬಂದ ಮಕ್ಕಳು, ಭಿಕ್ಷುಕರು, ಅನಾಥ ಮಕ್ಕಳಂತಹ ಸಂಕಷ್ಟಕ್ಕೀಡಾಗಿರುವ ಮಕ್ಕಳ ಸ್ಥಿತಿಗತಿಯ ಕುರಿತು ಚರ್ಚಿಸಿ, ಅವರ ಯೋಗಕ್ಷೇಮಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದು.

vii. ಮಕ್ಕಳ ಹಕ್ಕುಗಳನ್ನು ಪ್ರೋತ್ಸಾಹಿಸಲು ಹಾಗೂ ಮಕ್ಕಳ ರಕ್ಷಣೆಯನ್ನು ಖಾತ್ರಿಪಡಿಸಲು ವಿಶೇಷ ಅಭಿಯಾನಗಳು ಹಾಗೂ ಅರಿವು ಮೂಡಿಸುವ ಅಭಿಯಾನಗಳನ್ನು ಆಯೋಜಿಸುವುದು.

viii. ಡಿಸಿಪಿಯುಗಳು, ಸಿಡಬ್ಲ್ಯೂಸಿಗಳು, ಜೆಜೆಬಿಗಳು ಹಾಗೂ ಎಸ್‌ಜೆಪಿಗಳಿಗೆ ಮಕ್ಕಳ ನ್ಯಾಯ ಕಾಯ್ದೆ/ ನಿಯಮಾವಳಿಗಳಡಿ ಅವರ ಕರ್ತವ್ಯಗಳನ್ನು ಕೈಗೊಳ್ಳಲು ಬೆಂಬಲವನ್ನು ಖಾತ್ರಿಪಡಿಸುವುದು.

ix. ಮಕ್ಕಳ ನ್ಯಾಯ ಹಾಗೂ ಮಕ್ಕಳ ಸಂರಕ್ಷಣೆಯ ಕ್ಷೇತ್ರದಲ್ಲಿ ಸ್ವಯಂಸೇವೆಯನ್ನು ಉತ್ತೇಜಿಸುವುದು.

x. ಆಪ್ತಸಮಾಲೋಚನೆ, ಕೌಶಲ್ಯ ತರಬೇತಿ ದಾಖಲಾತಿ, ಕರಕುಶಲಕರ್ಮಿಗಳ ದಾಖಲಾತಿ, ಕ್ರೀಡಾ ಕ್ಲಬ್‌ಗಳು/ ಶಿಬಿರಗಳು, ಇತ್ಯಾದಿಗಳಂತಹ ಮಕ್ಕಳ ಪೋಷಣೆ, ಪುನರ್ವಸತಿ ಹಾಗೂ ಸಾಮಾಜಿಕ ಮರುಏಕೀಕರಣದ ಒಮ್ಮುಖ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದು.

xi. ಮಕ್ಕಳು ಸಂಕಷ್ಟಕ್ಕೀಡಾಗುವ ಸಂಭವವಿರುವ ಪ್ರಮುಖ ಸ್ಥಳಗಳ ಕುರಿತು ಡಿಸಿಪಿಯು ಮೂಲಕ ಜಿಲ್ಲಾ ದಂಡಾಧಿಕಾರಿಗಳಿಗೆ ವರದಿ ಮಾಡುವುದು ಹಾಗೂ ಅದನ್ನು ಬಗೆಹರಿಸಲು ಕಾರ್ಯತಂತ್ರ ರೂಪಿಸುವುದು.

xii. ಶಾಲೆಗಳಲ್ಲಿ ಮಕ್ಕಳನ್ನು ಒಳಗೊಂಡಂತೆ ಗ್ರಾಮಗಳಲ್ಲಿ ಬಾಲ (ಮಕ್ಕಳ) ಪಂಚಾಯಿತಿಗಳನ್ನು ಆಯೋಜಿಸುವುದು ಹಾಗೂ ಮಕ್ಕಳ ರಾಯಭಾರಿಗಳನ್ನು ನೇಮಕ ಮಾಡುವುದು; ಹಾಗೂ ಸೂಕ್ತ ಕ್ರಮಕ್ಕಾಗಿ ಗ್ರಾಮ ಪಂಚಾಯಿತಿಗಳ ಮುಂದೆ ವಿವಿಧ ವಿಷಯಗಳ ಕುರಿತು ಮಕ್ಕಳಿಂದ ಮಾಹಿತಿ ಸಂಗ್ರಹಿಸಿ ಮಂಡಿಸುವುದು.

## ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗೆ ಹಣಕಾಸಿನ ಬೆಂಬಲ:

ಮಕ್ಕಳ ಕಲ್ಯಾಣ ಹಾಗೂ ರಕ್ಷಣೆಗಾಗಿ ಏಕಕಾಲಿಕ ಪರಿಸರ ವ್ಯವಸ್ಥೆಯನ್ನು ಖಾತ್ರಿಪಡಿಸಲು ಪಿಆರ್‌ಐಗಳು ಹಾಗೂ ಯುಎಲ್‌ಬಿಗಳು ಮಕ್ಕಳ ಕಲ್ಯಾಣ ಹಾಗೂ ರಕ್ಷಣೆಯ ಕಾರ್ಯನಿರ್ವಹಣೆಗೆ ಬೆಂಬಲ ನೀಡುವುದು ಹಾಗೂ ಬಲತುಂಬುವ ಕೆಲಸವನ್ನು ಮಾಡುವುದನ್ನು ಅಪೇಕ್ಷಿಸಲಾಗಿದೆ. ಆ ಪ್ರಕಾರವಾಗಿ, ಈ ಕೆಲಸಗಳ ನಿರ್ವಹಣೆಗಾಗಿ ತನ್ನ ಸ್ವಂತ ಆದಾಯದ ಮೂಲಗಳನ್ನು ಕ್ರೋಢೀಕರಿಸುವ ವ್ಯವಸ್ಥೆ ಮಾಡಬೇಕು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಪಟ್ಟ ಚಟುವಟಿಕೆಗಳಿಗಾಗಿ ಹಂಚಿಕೆ ಮಾಡಿರುವ ***ಪಂಚಾಯಿತಿ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುವ ಸಂಯುಕ್ತ ಅನುದಾನದ ಶೇ.5ರಷ್ಟು ಮೊತ್ತವನ್ನು ಬಳಸಿಕೊಳ್ಳಬೇಕು.***

## 2.13 ಮಿಷನ್ ವಾತ್ಸಲ್ಯ ಪೋರ್ಟಲ್– Mission Vatsalya Portal:

ತಪ್ಪಿಸಿಕೊಂಡಿರುವ ಮಕ್ಕಳು, ಅನಾಥ ಮಕ್ಕಳು, ತ್ಯಜಿಸಿರುವ ಮಕ್ಕಳು ಹಾಗೂ ಒಪ್ಪಿಸಲ್ಪಟ್ಟ ಮಗು ಒಳಗೊಂಡಂತೆ, ಸಂಕಷ್ಟದ ಸನ್ನಿವೇಶದಲ್ಲಿರುವ ಮಕ್ಕಳಿಗೆ ಸಂಬಂಧಪಟ್ಟ ವಿವಿಧ ಎಂಐಎಸ್‌ಗಾಗಿ ಸಂಘಟಿತ ಡಿಜಿಟಲ್ ವೇದಿಕೆಯನ್ನು ಮಿಷನ್ ವಾತ್ಸಲ್ಯ ಒದಗಿಸುತ್ತದೆ. ಈ ಸಂಕಷ್ಟದಲ್ಲಿರುವ ಮಕ್ಕಳಿಗೆ, ಪೋಷಣೆ ಹಾಗೂ ಅಭಿವೃದ್ಧಿ ಲಭಿಸುವುದನ್ನು ಖಾತ್ರಿಪಡಿಸಲು ಸರ್ಕಾರಿ ಸಂಸ್ಥೆಗಳು/ ಸೇವೆಗಳೊಂದಿಗೆ ಮ್ಯಾಪ್ ಮಾಡಬೇಕು. ಸಿಪಿಎಸ್ ಹಾಗೂ ಮಕ್ಕಳ ನ್ಯಾಯ ಕಾಯ್ದೆಯಡಿ ಇರುವ ನಾಲ್ಕು ವಿವಿಧ ಪೋರ್ಟಲ್‌ಗಳು: ತಪ್ಪಿಸಿಕೊಂಡ/ ಪತ್ತೆಯಾದ ಮಕ್ಕಳಿಗಾಗಿ TrackChild; ದತ್ತು ಮಕ್ಕಳಿಗಾಗಿ CARINGS; ಯೋಜನೆ ನಿಗಾವಣೆಗಾಗಿ ICPS ಪೋರ್ಟಲ್; ಹಾಗೂ Khoya-Paya, ತಪ್ಪಿಸಿಕೊಂಡಿರುವ ಹಾಗೂ ಪತ್ತೆಯಾದ ಮಕ್ಕಳ ನಾಗರಿಕ ಕೇಂದ್ರಿತ ಅಪ್ಲಿಕೇಷನ್ ಅನ್ನು ಎನ್‌ಐಸಿಯ ಪೋರ್ಟಲ್‌ನೊಂದಿಗೆ ಒಂದೇ ಪೋರ್ಟಲ್ ಆಗಿ ಏಕೀಕರಣಗೊಳಿಸುವುದು. (ಸಂಯೋಜಿಸುವುದು).

## ಮಿಷನ್ ವಾತ್ಸಲ್ಯ ಪೋರ್ಟಲ್‌ನಿಂದ ಲಭಿಸುವ ಕೆಲವು ಪ್ರಮುಖ ಲಾಭಗಳು ಈ ಕೆಳಗಿನಂತಿವೆ:

i. ವಿವಿಧ ಎಂಐಎಸ್–MIS ಡ್ಯಾಷ್‌ಬೋರ್ಡ್‌ಗಳ ಮೂಲಕ ಉತ್ತಮ ನಿಗಾವಣೆ.

ii. ಬೇರುಮಟ್ಟದಲ್ಲಿ ಕೆಲಸ ಡೂಪ್ಲಿಕೇಟ್ ಆಗುವುದನ್ನು ತಪ್ಪಿಸಬಹುದು.

iii. ಎಲ್ಲಾ ಭಾಗೀದಾರರಿಗೂ ಒಂದೇ ವೇದಿಕೆ.

iv. ಉತ್ತಮ ನಿರ್ಧಾರ/ ನೀತಿ ರೂಪಿಸುವಿಕೆ.

v. ಸಂಪನ್ಮೂಲಗಳ ಗರಿಷ್ಠ ಬಳಕೆ.

vi. ಮಕ್ಕಳ ರಕ್ಷಣಾ ಸಂಪನ್ಮೂಲ ಕೈಪಿಡಿ ಲಭ್ಯತೆ.

vii. ನಾಗರಿಕರ ಉತ್ತಮ ಭಾಗವಹಿಸುವಿಕೆ.

viii. ವಿಶ್ಲೇಷಣಾ ವರದಿಗಳ ಲಭ್ಯತೆ.

ix. ಸಾಕ್ಷ್ಯಾಧಾರಿತ ಕಾರ್ಯಕ್ರಮ, ಯೋಜನೆ ರೂಪಿಸುವಿಕೆ ಹಾಗೂ ಅನುಷ್ಠಾನ.

## 2.14 ಚೈಲ್ಡ್ ಲೈನ್ (ಮಕ್ಕಳ ಸಹಾಯವಾಣಿ) - Child Helpline:

ರಾಜ್ಯಗಳು ಹಾಗೂ ಜಿಲ್ಲೆಗಳೊಂದಿಗೆ ಪಾಲುದಾರಿಕೆಯಲ್ಲಿ ಮಿಷನ್ ವಾತ್ಸಲ್ಯ, ಮಕ್ಕಳ ನ್ಯಾಯ ಕಾಯ್ದೆ, 2015ರಲ್ಲಿ ವ್ಯಾಖ್ಯಾನಿಸಿರುವಂತೆ ಮಕ್ಕಳಿಗಾಗಿ 24x7 ಗಂಟೆಗಳ ಸಹಾಯವಾಣಿಯನ್ನು ಆರಂಭಿಸಿರುತ್ತದೆ. ಮಿಷನ್ ವಾತ್ಸಲ್ಯದಡಿಯ ಮಕ್ಕಳ ಸಹಾಯವಾಣಿಯು ರಾಜ್ಯ ಹಾಗೂ ಜಿಲ್ಲಾ ಕಾರ್ಯನಿರ್ವಾಹಕರ ಸಂಯೋಜನೆಯಡಿ ನಡೆಯಬೇಕು ಹಾಗೂ ಎಂಹೆಚ್ಎ–MHA, ನ ತುರ್ತು ಪ್ರತಿಕ್ರಿಯಾ ಬೆಂಬಲ ವ್ಯವಸ್ಥೆ ಸಹಾಯವಾಣಿ 112 (ಇಆರ್ಎಸ್ಎಸ್–112) ನೊಂದಿಗೆ ಸಂಯೋಜಿಸಬೇಕು.

***ಗಮನಿಸಿ:*** **ಚೈಲ್ಡ್ ಲೈನ್‌ನ ಅನುಷ್ಠಾನದ ಕುರಿತು ವಿವರವಾದ ಪ್ರಮಾಣಿತ ಗುಣಮಟ್ಟದ ಕ್ರಮಬದ್ಧ ಕಾರ್ಯಾವಿಧಾನಗಳನ್ನು (ಎಸ್‌ಓಪಿಗಳು) ಪ್ರತ್ಯೇಕವಾಗಿ ನೀಡಲಾಗುವುದು.**

## 2.15 ಮಕ್ಕಳ ಯೋಜನೆಗಾಗಿ ಪಿಎಂ ಕೇರ್ಸ್ ಅಡಿ ಬರುವ ಮಕ್ಕಳು – Children under PM CARES for Children Scheme:

ಮಿಷನ್ ವಾತ್ಸಲ್ಯ ಅಭಿಯಾನದ ಯೋಜನೆಯಡಿ ಮಕ್ಕಳಿಗೆ (ಪೋಷಕರ ಬದ್ಧತೆಯೊಂದಿಗೆ) ಪ್ರತಿ ಮಗುವಿಗೆ ರೂ.4,000/–ದಂತೆ ಸಾಂಸ್ಥಿಕೇತರ ಪೋಷಣೆಗೆ ಹಣಕಾಸಿನ ಬೆಂಬಲ ಒದಗಿಸಬೇಕು. ಸಾಂಸ್ಥಿಕ ಪೋಷಣೆಯಲ್ಲಿರುವ ಮಕ್ಕಳಿಗೆ, ಅನುಪಾಲನಾ ಸಂಸ್ಥೆಗಳಿಗೆ ಮಾಸಿಕ ರೂ.3,000 ನಿರ್ವಹಣಾ ಹಣಕಾಸಿನ ನೆರವನ್ನು ಒದಗಿಸುವುದು.

## 2.16 ಮೌಲ್ಯಮಾಪನ –Evaluation:

ಮಿಷನ್ ವಾತ್ಸಲ್ಯ ಒಂದು ಮುಂದುವರೆಯುವ ಯೋಜನೆಯಾಗಿದ್ದು, ಅಭಿಯಾನದ ಪರಿಣಾಮಕಾರಿತ್ವವನ್ನು ಮೌಲ್ಯಮಾನ ಮಾಡಲು ಹಾಗೂ ತಿದ್ದುಪಡಿಗಳನ್ನು ಸಲಹೆ ನೀಡಲು 15ನೇ ಹಣಕಾಸು ಆಯೋಗದ ಅಂತ್ಯದೊಳಗೆ ಯೋಜನೆಯ ಮೂರನೇ ಪಾರ್ಟಿ ಮೌಲ್ಯಮಾಪನವನ್ನು ಕೈಗೊಳ್ಳಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸ್ವತಂತ್ರ ಮೂರನೇ ಪಾರ್ಟಿ ವತಿಯಿಂದ ಮೌಲ್ಯಮಾಪನವನ್ನು ನಡೆಸುತ್ತದೆ.

# 3. ಸಾಂಸ್ಥಿಕ ಸೇವೆಗಳು – INSTITUTIONAL SERVICES

## 3.1 ಮಕ್ಕಳ ಪೋಷಣಾ ಸಂಸ್ಥೆಗಳು (ಸಿಸಿಐಗಳು – Child Care Institutions (CCIs):

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರಡಿ ಮಕ್ಕಳ ಪೋಷಣೆ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಸ್ವತಃ ಅಥವಾ ಸ್ವಯಂಸೇವಾ ಸಂಸ್ಥೆಗಳ ಸಂಯೋಜನೆಯೊಂದಿಗೆ ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಪೋಷಣಾ ಸಂಸ್ಥೆಗಳನ್ನು ಸ್ಥಾಪಿಸುವುದು ಅಥವಾ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ (ಸಿಎನ್‌ಸಿಪಿ–CNCP) ಹಾಗೂ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ (ಸಿಸಿಎಲ್–CCL) ಸ್ವಾಗತ ಹಾಗೂ ಗೃಹ ಆಧಾರಿತ ಪೋಷಣೆಗಾಗಿ ಜಿಲ್ಲೆಗಳ ಒಂದು ಗುಂಪಿನಲ್ಲಿ ಮಕ್ಕಳ ಪೋಷಣೆ ಸಂಸ್ಥೆಯನ್ನು ಸ್ಥಾಪಿಸಲು ಅಧಿಕಾರ ಒದಗಿಸಿದೆ. ಈ ಸಿಸಿಐಗಳು ಇಂತಹ ಮಕ್ಕಳಿಗೆ ಮನೆಯಿಂದ ಆಚೆಗೆ ಅವರ ಮನೆಯ ರೀತಿಯ ವಾತಾವರಣವನ್ನು ಕಲ್ಪಿಸಬೇಕು ಹಾಗೂ ಅವರ ಒಟ್ಟಾರೆ ಅಭಿವೃದ್ಧಿಗಾಗಿ ಸಾಂಸ್ಥಿಕೇತರ ಪೋಷಣೆ ಮೂಲಕ ಮಕ್ಕಳನ್ನು ಕುಟುಂಬದೊಂದಿಗೆ ಪುನರ್ ಸಂಯೋಜಿಸುವವರೆಗೂ ಸಮಗ್ರ ಮಕ್ಕಳ ಪೋಷಣೆ ಸೌಲಭ್ಯಗಳನ್ನು ಒದಗಿಸಬೇಕು. ಮಕ್ಕಳ ಸಾಮರ್ಥ್ಯ ಹಾಗೂ ಕೌಶಲ್ಯಗಳು ವೃದ್ಧಿಯಾಗುವವರೆಗೂ ಹಾಗೂ ಅವರ ಕುಟುಂಬಸ್ಥರೊಂದಿಗೆ ಮರುಸಂಯೋಜಿಸುವವರೆಗೂ ಹಾಗೂ ಮುಖ್ಯವಾಹಿನಿ ಸಮಾಜದಲ್ಲಿ ಪುನರ್ವಸತಿಗೊಳಿಸುವುದು ಸಿಸಿಐಗಳ ಗುರಿಯಾಗಿರಬೇಕು. ಜಿಲ್ಲೆಗಳಲ್ಲಿ ಈ ಕೆಳಕಂಡ ಮಕ್ಕಳ ಪೋಷಣೆ ಸಂಸ್ಥೆಗಳಿಗೆ ಅಭಿಯಾನದಡಿ ಬೆಂಬಲ ಒದಗಿಸಬೇಕು:

### 1) ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ (ಸಿಎನ್‌ಸಿಪಿ – CNCP) ಮಕ್ಕಳ ಪೋಷಣಾ ಸಂಸ್ಥೆಗಳು:

i. ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಪೋಷಣೆ, ಚಿಕಿತ್ಸೆ, ಶಿಕ್ಷಣ, ತರಬೇತಿ, ಅಭಿವೃದ್ಧಿ ಹಾಗೂ ಪುನರ್ವಸತಿಗಾಗಿ ಮಕ್ಕಳ ಪೋಷಣೆ ಮತ್ತು ರಕ್ಷಣಾ ಕೇಂದ್ರಗಳನ್ನು ಸ್ಥಾಪಿಸಿ/ಬೆಂಬಲ ನೀಡಬೇಕು. ವಯಸ್ಸು, ಲಿಂಗ/ತ್ರಿಲಿಂಗ ಅಥವಾ ವಿಶೇಷ ಅಗತ್ಯಗಳಿರುವ ಮಕ್ಕಳನ್ನು ಆಧರಿಸಿ ರಾಜ್ಯ/ಜಿಲ್ಲಾಡಳಿತಗಳು ಪ್ರತ್ಯೇಕ ಪಾಲನಾ ಕೇಂದ್ರಗಳನ್ನು ಸ್ಥಾಪಿಸಬಹುದು/ ಬೆಂಬಲಿಸಬಹುದು.

**ವಿಶೇಷ ಅಗತ್ಯಗಳಿರುವ ಮಕ್ಕಳಿಗಾಗಿ ವಿಶೇಷ ಘಟಕ:** ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು, ದೈಹಿಕ/ ಮಾನಸಿಕ ದುರ್ಬಲತೆಗಳಿಂದಾಗಿ ಶಾಲೆಗೆ ಹೋಗುವುದು ಸಾಧ್ಯವಾಗದಿರುವಂತಹ ಸಿಸಿಐಗಳಲ್ಲಿರುವ ವಿಶೇಷ ಅಗತ್ಯಗಳಿರುವ ಮಕ್ಕಳ ಕಡೆ ಗಮನ ನೀಡಬೇಕು. ಸಿಸಿಐಗಳಲ್ಲಿ ಅಗತ್ಯಗಳ ಪ್ರಕಾರ, ವೃತ್ತಿಪರ ಚಿಕಿತ್ಸೆ, ಶ್ರವಣ ಚಿಕಿತ್ಸೆ, ಹಾಗೂ ಇತರೆ ಪರಿಹಾರ ತರಗತಿಗಳಿಗಾಗಿ ವಿಶೇಷ ಬೋಧಕರು/ ಚಿಕಿತ್ಸಕರು ಹಾಗೂ ಶುಶ್ರೂಷಕರ ಸೇವೆಗಳು ಒಳಗೊಂಡಂತೆ ಅಗತ್ಯ ಸೇವೆಗಳನ್ನು ಒದಗಿಸಲು ವಿಶೇಷ ನಿಬಂಧನೆಗಳನ್ನು ರಚಿಸಬೇಕು. ಇಂತಹ ಗೃಹಗಳಿಗಾಗಿ ರಾಜ್ಯಗಳಲ್ಲಿ ಸಂಪನ್ಮೂಲ ಸಂಸ್ಥೆಗಳ ನೆರವಿನೊಂದಿಗೆ ಸನ್ನೆ ಭಾಷೆ, ಬ್ರೈಲ್, ಇತ್ಯಾದಿಗಳಲ್ಲಿ ತರಬೇತಿ ಹೊಂದಿರುವ ವಿಶೇಷ ಘಟಕ ಸಿಬ್ಬಂದಿಗಳ ಸಾಮರ್ಥ್ಯ ಅಭಿವೃದ್ಧಿಯನ್ನು ಕೈಗೊಳ್ಳಬೇಕು.

ii. ರಾಜ್ಯ ಸರ್ಕಾರದಿಂದ ನೋಂದಾಯಿತವಾಗಿರುವ ಮುಕ್ತ ತಂಗುದಾಣಗಳಿಗೆ, (Open Shelter) ಓಡಿಬಂದ ಮಕ್ಕಳು, ತಪ್ಪಿಸಿಕೊಂಡಿರುವ ಮಕ್ಕಳು, ಮಾನವ ಕಳ್ಳಸಾಗಣೆಗೆ ಒಳಗಾಗಿರುವ ಮಕ್ಕಳು, ದುಡಿಯುವ ಮಕ್ಕಳು, ಬೀದಿ ಮಕ್ಕಳು, ಭಿಕ್ಷುಕ ಮಕ್ಕಳು, ಹಾಗೂ ಮಾದಕ ವ್ಯಸನಿ ಮಕ್ಕಳು, ನೈಸರ್ಗಿಕ ವಿಕೋಪಗಳಿಂದಾಗಿ ತೊಂದರೆ ಎದುರಿಸುತ್ತಿರುವ ಮಕ್ಕಳು, ಅನಧಿಕೃತ ಪ್ರದೇಶಗಳು/ ಕೊಳಗೇರಿಗಳಲ್ಲಿ ವಾಸಿಸುತ್ತಿರುವ ಮಕ್ಕಳು, ವಲಸಿಗ ಜನಸಂಖ್ಯೆಯ ಮಕ್ಕಳು, ಸಾಮಾಜಿಕವಾಗಿ ಹಿಂದುಳಿದ ಗುಂಪುಗಳಿಗೆ ಸೇರಿದ ಮಕ್ಕಳು, ಹಾಗೂ ಇತರೆ ದುರ್ಬಲ ವರ್ಗಗಳ ಗುಂಪುಗಳ ಮಕ್ಕಳಿಗೆ ಜಿಲ್ಲೆಯ ಅಗತ್ಯ ಅಂದಾಜಿಸುವಿಕೆಗೆ (Need Assessment) ಸಂಬಂಧಪಟ್ಟಂತೆ ಅಲ್ಪಾವಧಿ ಆಧಾರಿತವಾಗಿ ಅಗತ್ಯ

ಬೆಂಬಲ ಒದಗಿಸಬೇಕು. ಈ ತಂಗುದಾಣಗಳನ್ನು, ಸಂಕಷ್ಟದ ಸನ್ನಿವೇಶಗಳಲ್ಲಿರುವ ಮಕ್ಕಳಿಗೆ ಶಿಕ್ಷಣ, ಆಪ್ತಸಮಾಲೋಚನೆ ಹಾಗೂ ಜೀವನಕೌಶಲ್ಯಗಳನ್ನು ಒದಗಿಸಲು ಬಳಸಿಕೊಳ್ಳಲಾಗುವುದು, ಆ ಮೂಲಕ ಮಕ್ಕಳು ಬೀದಿಗಳಲ್ಲಿಯ ಜೀವನದಿಂದ ದೂರ ಉಳಿಸುವ ಪ್ರಯತ್ನ ಮಾಡಬೇಕು. ಈ ಮುಕ್ತ ತಂಗುದಾಣಗಳು ಮಕ್ಕಳಿಗೆ ಖಾಯಂ ಮನೆ ಸೌಲಭ್ಯಗಳನ್ನು ಒದಗಿಸುವುದಕ್ಕಲ್ಲ, ಬದಲಿಗೆ ಹಾಲಿ ಸಾಂಸ್ಥಿಕ ಪೋಷಣಾ ಸೌಲಭ್ಯಗಳಿಗೆ ಪೂರಕವಾಗಿರುತ್ತದೆ. **ಮುಕ್ತ ತಂಗುದಾಣಗಳು** ಈ ಕೆಳಗಿನವನ್ನು ಒಳಗೊಂಡಿರುತ್ತವೆ:

a) 25 ಮಕ್ಕಳಿಗೆ ಆಶ್ರಯ ನೀಡುವ ಘಟಕ ಕನಿಷ್ಠ 2,000 ಚದರಡಿ ಕಾರ್ಪೆಟ್ ಪ್ರದೇಶವನ್ನು ಒಳಗೊಂಡಿರಬೇಕು. ಅದರಲ್ಲಿ ಒಂದು ಅಡುಗೆ ಮನೆ, ಎರಡು ಶೌಚಾಲಯಗಳು ಹಾಗೂ ಎರಡು ಸ್ನಾನದ ಗೃಹಗಳಿರಬೇಕು.

b) ಈ ಮುಕ್ತ ತಂಗುದಾಣಗಳನ್ನು ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳು, ಮುಕ್ತ ಆಶ್ರಯಗಳು ಅಥವಾ ಸಂಪರ್ಕ ಸ್ಥಳಗಳನ್ನು ಸ್ಥಾಪಿಸಲು ಸೂಕ್ತ ಸ್ಥಳಾವಕಾಶಕ್ಕಾಗಿ ಮುನಿಸಿಪಲ್ ನಿಗಮಗಳು, ಜಿಲ್ಲಾ ಪಂಚಾಯಿತಿಗಳು, ಕೊಳಗೇರಿ ಮಂಡಳಿಗಳು, ರೈಲು ಹಾಗೂ ಸಾರಿಗೆ ಪ್ರಾಧಿಕಾರಗಳನ್ನು ಸಂಪರ್ಕಿಸಬಹುದು.

c) ವಸತಿ ಸೌಕರ್ಯಕ್ಕಾಗಿ ಸರ್ಕಾರೇತರ ಸಂಸ್ಥೆಗಳು ಡಿಸಿಪಿಯು ನೆರವನ್ನು ಪಡೆದುಕೊಳ್ಳಬಹುದು.

ಇಂತಹ ಮುಕ್ತ ತಂಗುದಾಣಗಳನ್ನು ಸ್ಥಾಪಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರ/ ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳ ಮೂಲಕ ಹಣಕಾಸಿನ ಬೆಂಬಲವನ್ನು ಒದಗಿಸಬಹುದು. ಒಂದು ವೇಳೆ ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶಗಳ ಆಡಳಿತಕ್ಕೆ ಈ ಮುಕ್ತ ತಂಗುದಾಣಗಳನ್ನು ನಡೆಸಲು ಸೂಕ್ತ ಸ್ವಯಂಸೇವಾ ಸಂಸ್ಥೆಗಳನ್ನು ಗುರುತಿಸುವುದು ಸಾಧ್ಯವಾಗದಿದ್ದರೆ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸರ್ಕಾರವೇ ಲಭ್ಯವಿರುವ ನಿಧಿಯಡಿ ಈ ಕೇಂದ್ರಗಳನ್ನು ನಡೆಸಬಹುದು. ಮುಕ್ತ ತಂಗುದಾಣವನ್ನು ರಚಿಸಲು ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ – IV, ಭಾಗ–ಡಿ ರಲ್ಲಿ ಒದಗಿಸಲಾಗಿದೆ.

iii. **ರಾಜ್ಯ ಸರ್ಕಾರದಿಂದ ಗುರುತಿಸಲ್ಪಟ್ಟಿರುವ ವಿಶೇಷ ದತ್ತು ಕೇಂದ್ರಗಳಿಗೆ (ಎಸ್ಎಎ – SAA),** ಜಿಲ್ಲೆಯಲ್ಲಿರುವ ಅನಾಥ ಮಕ್ಕಳು, ಪರಿತ್ಯಜಿಸಲ್ಪಟ್ಟಿರುವ ಮಕ್ಕಳು ಹಾಗೂ ಒಪ್ಪಿಸಲ್ಪಟ್ಟಿರುವ ಮಕ್ಕಳ (Need Assessment) ಅಂದಾಜಿಸುವಿಕೆ ಅಗತ್ಯವನ್ನು ಆಧರಿಸಿ ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ನೋಡಿಕೊಳ್ಳಲು ಅಗತ್ಯ ಬೆಂಬಲವನ್ನು ಒದಗಿಸಬೇಕು. ದತ್ತು ಪಡೆಯಲು ಕಾನೂನುಬದ್ಧವಾಗಿ ಮುಕ್ತವಾಗಿರುವ ಮಕ್ಕಳ ದತ್ತುಗೆ ಎಸ್ಎಎ ಅನುಕೂಲ ಒದಗಿಸಬೇಕು. ಜೊತೆಗೆ, ವಿವಿಧ ಕಾರಣಗಳಿಗೆ ಬಂಧಿತ ಪೋಷಕರ ಮಕ್ಕಳ ರಕ್ಷಣೆ ಹಾಗೂ ಪೋಷಣೆ ಒದಗಿಸಲು ಜೈಲ್ ಅಥವಾ ಆ ವ್ಯಾಪ್ತಿಯಲ್ಲಿ ಎಸ್ಎಎ ಕ್ರಮ ಕೈಗೊಳ್ಳಬೇಕು. ಎಸ್ಎಎ ಸ್ಥಾಪಿಸಲು ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ – IV, ಭಾಗ–ಸಿ ರಲ್ಲಿ ಒದಗಿಸಲಾಗಿದೆ.

ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಂಸ್ಥಿಕ ಪೋಷಣೆಯನ್ನು ಒದಗಿಸಿರುವ ರಾಜ್ಯ ಹಾಗೂ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ವಿಶೇಷ ದತ್ತು ಕೇಂದ್ರಗಳಿಗೆ ಮಿಷನ್ ವಾತ್ಸಲ್ಯವು ಯೋಜನೆಯು ಬೆಂಬಲ ಒದಗಿಸುತ್ತದೆ. ಇದಕ್ಕಾಗಿ ಸಂಬಂಧಪಟ್ಟ ಎಸ್ಎಎ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರ ಸೂಕ್ತ ನಿಬಂಧನೆಗಳಡಿ ನೋಂದಣಿಯಾಗಿರಬೇಕು ಹಾಗೂ ಕೇಂದ್ರವು ದತ್ತು ಸಂಪನ್ಮೂಲ ಪ್ರಾಧಿಕಾರ (ಸಿಎಆರ್ಎ) ಹೊರಡಿಸಿರುವ ದತ್ತು ನಿಬಂಧನೆಗಳನ್ನು ಅನುಸರಿಸಬೇಕು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಒಟ್ಟಾರೆ ಮೇಲ್ವಿಚಾರಣೆಯ ಮೇಲೆ ಕಾರ್ಯನಿರ್ವಹಿಸಬೇಕು ಹಾಗೂ ದತ್ತು ಕಾರ್ಯಕ್ರಮದ ಅನುಷ್ಠಾನದಲ್ಲಿ ಜಿಲ್ಲಾ ದಂಡಾಧಿಕಾರಿಗಳಿಗೆ ನೆರವಾಗಬೇಕು.

**ಎಸ್ಎಎ – SAA ಗಳ ನಿರ್ಧಿಷ್ಟವಾದ ಪಾತ್ರಗಳು ಹಾಗೂ ಜವಾಬ್ದಾರಿಗಳಲ್ಲಿ ಇವುಗಳು ಒಳಗೊಂಡಿರಬೇಕು:**

## ಮಕ್ಕಳ ಸಂಬಂಧಿತ ಕಾರ್ಯನಿರ್ವಹಣೆಗಳು – Child Related Functions:

a) ಅನಾಥ, ಪರಿತ್ಯಜಿಸಲ್ಪಟ್ಟಿರುವ ಹಾಗೂ ಒಪ್ಪಿಸಲ್ಪಟ್ಟಿರುವ ಮಕ್ಕಳ ದಾಖಲಾತಿ ಹಾಗೂ ನೋಂದಣಿ.

b) ಸಿಡಬ್ಲ್ಯೂಸಿಗೆ ಮಗು ಕೇಂದ್ರಕ್ಕೆ ದಾಖಲಾಗಿರುವ/ಬಂದಿರುವ ಬಗ್ಗೆ ವರದಿ.

c) ಹತ್ತಿರದ ಆಸ್ಪತ್ರೆಯಲ್ಲಿ ಮಗುವಿನ ತತ್‌ಕ್ಷಣದ ವೈದ್ಯಕೀಯ ತಪಾಸಣೆ.

d) ಸಚಿವಾಲಯ ನಿರ್ವಹಿಸುವ ಪೋರ್ಟಲ್‌ನಲ್ಲಿ ಎಲ್ಲಾ ಮಕ್ಕಳ ವಿವರಗಳನ್ನು ಅಪ್‌ಲೋಡ್ ಮಾಡುವುದು.

e) ಜಿಲ್ಲಾ ಮಕ್ಕಳ ರಕ್ಷಣಾ ಘಟಕದ (ಡಿಸಿಪಿಯು) ಸಂಯೋಜನೆಯೊಂದಿಗೆ ಒಂದು ತಿಂಗಳೊಳಗೆ ಪ್ರತಿ ಮಗುವಿಗೆ **ವೈಯಕ್ತಿಕ ಪೋಷಣಾ ಯೋಜನೆಯನ್ನು** ಸಿದ್ಧಪಡಿಸುವುದು ಹಾಗೂ ಡಿಸಿಪಿಯು ಒಪ್ಪಿಗೆ ಸೂಚಿಸಿದ ನಂತರ, ಅದನ್ನು 15 ದಿನಗಳೊಳಗೆ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಅನುಮೋದನೆಗಾಗಿ ಕಳುಹಿಸಿಕೊಡುವುದು. ಎಸ್ಎಎ ಯು ಮಗುವಿನ ವೈಯಕ್ತಿಕ ಮಕ್ಕಳ ಪೋಷಣಾ ಯೋಜನೆಗೆ ಸಿಡಬ್ಲ್ಯೂಸಿ ಯಿಂದ ಅನುಮೋದನೆ ನೀಡಿದ ನಂತರ ಆರು ತಿಂಗಳೊಳಗೆ ಅನುಷ್ಠಾನದ ವರದಿಯನ್ನು ಡಿಸಿಪಿಯುಗೆ ಸಲ್ಲಿಸುವುದು.

f) ಪ್ರತಿ ಆರು ತಿಂಗಳಿಗೊಮ್ಮೆ ವೈಯಕ್ತಿಕ ಪೋಷಣಾ ಯೋಜನೆಯನ್ನು ಪುನರ್‌ಮನನ ಮಾಡುವುದು ಹಾಗೂ ಯಾವ ಮಗುವೂ ಸಹ ಒಂದು ವರ್ಷದ ಅವಧಿಗಿಂತ ಹೆಚ್ಚಿಗೆ ಎಸ್ಎಎ ಪೋಷಣೆಯಡಿ ಇರದಿರುವಂತೆ ನೋಡಿಕೊಳ್ಳುವುದು.

g) ಮಕ್ಕಳ ಅಧ್ಯಯನ ವರದಿ ಹಾಗೂ ದೈಹಿಕ ತಪಾಸಣಾ ವರದಿಯನ್ನು ಸಿದ್ಧಪಡಿಸುವುದು.

h) ಅಗತ್ಯವಿರುವಾಗ ವಿಚಾರಣೆಗಾಗಿ ಸಿಡಬ್ಲ್ಯೂಸಿಗೆ ಸಹಾಯ ಮಾಡುವುದು ಹಾಗೂ ಸಿಡಬ್ಲ್ಯೂಸಿ ವತಿಯಿಂದ ನಿಗದಿಪಡಿಸುವ ಸಮಯದೊಳಗೆ ಕಾನೂನು ಮುಕ್ತ ದತ್ತು ಪ್ರಮಾಣಪತ್ರವನ್ನು ಪಡೆಯಲು ಸಹಕರಿಸುವುದು.

i) ಸಂಭವನೀಯ ದತ್ತು ಪೋಷಕರೊಂದಿಗೆ (PAP- Prospective Adoptive Parents) ಮಗುವನ್ನು ಸರಿಹೊಂದಿಸುವುದು.

j) ಮಕ್ಕಳಿಗಾಗಿ ದತ್ತು ಪೂರ್ವ ಹಾಗೂ ನಂತರದ ಆಪ್ತಸಮಾಲೋಚನೆ.

k) ಸಂಬಂಧಪಟ್ಟ ಎಸ್ಎಎ ಹಾಗೂ ರಕ್ಷಣಾ ಅಧಿಕಾರಿ ಈ ಇಬ್ಬರು ಸದಸ್ಯರಿರುವ ಡಿಸಿಪಿಓ ಅಧ್ಯಕ್ಷತೆಯಡಿ ಇರುವ ಜಿಲ್ಲಾ ಪ್ಲೇಸ್‌ಮೆಂಟ್ ಅಧಿಕಾರಿಯ ನೆರವಿನೊಂದಿಗೆ ಮಗುವನ್ನು ದತ್ತು ಹೋಗಲು ಅಥವಾ ದತ್ತು ಪೂರ್ವ ಫಾಸ್ಟರ್ ಕೇರ್‌ನಲ್ಲಿರಿಸಲು ನೆರವಾಗುವುದು – ಸಾಂಸ್ಥಿಕೇತರ ಸಂಸ್ಥೆಗಳ ಸೇವೆಗಳು.

l) ದತ್ತು ಆದೇಶವನ್ನು ಅಂತಿಮಗೊಳಿಸುವುದು ಹಾಗೂ ಮಗುವನ್ನು ಪ್ಲೇಸ್‌ಮೆಂಟ್ ಮಾಡಲು ಜಿಲ್ಲಾ ದಂಡಾಧಿಕಾರಿಗೆ ನೆರವಾಗುವುದು.

m) ಮಗುವಿನ ಜನನ ಪ್ರಮಾಣಪತ್ರವನ್ನು ಪಡೆಯುವುದು.

n) ದತ್ತು ನಂತರದ ಅನುಸರಣೆ ಮಾಡುವುದು.

o) ಸ್ವಾಭಾವಿಕ ಪೋಷಕರ ಪೂರಕ ದಾಖಲಾತಿಗಳು, ಅವರ ವೈದ್ಯಕೀಯ/ ಪ್ರಕರಣ ಚರಿತ್ರೆಗಳನ್ನು ಸಂಗ್ರಹಿಸುವುದು, ಮಗುವಿನ ಪ್ರಕರಣ ಕಡತಗಳು, ನಿಜವಾದ ಪೋಷಕರು ಹಾಗೂ ದತ್ತು ಪೋಷಕರ ವಿವರಗಳನ್ನು ಸಂಗ್ರಹಿಸುವುದು.

p) ನವಜಾತ ಶಿಶುಗಳು, ಶಿಶುಗಳು ಹಾಗೂ ಎಳೆಯ ಮಕ್ಕಳಿಗಾಗಿ ಪೋಷಣೆ, ನೈರ್ಮಲ್ಯ ಆವರಣಗಳು, ಹಾಗೂ ಸಮರ್ಪಕ ಮಾನದಂಡವನ್ನು ನಿರ್ವಹಿಸುವುದು.

q) ಎಸ್ಎಎದಲ್ಲಿ ದಾಖಲಿಸಲಾದ ಪ್ರತಿ ಮಗುವಿಗೆ ಪುನರ್ವಸತಿ ಯೋಜನೆಯನ್ನು ಸೂಚಿಸುವುದಕ್ಕಾಗಿ ಡಿಸಿಪಿಯು ಹಾಗೂ ಎಸ್ಎಆರ್ಎ ಮೂಲಕ ಜಿಲ್ಲಾ ದಂಡಾಧಿಕಾರಿಗಳಿಗೆ ವರದಿ ಸಲ್ಲಿಸುವುದು.

## ಸಂಭವನೀಯ (ಭಾವಿ) ದತ್ತು ಪೋಷಕರಿಗೆ (ಪಿಎಪಿಗಳು – PAP) ಸಂಬಧಿಸಿದಂತೆ ಕಾರ್ಯನಿರ್ವಹಣೆಗಳು:

## Prospective Adoptive Parents (PAPs) Related Functions:

a) ನಿಯೋಜಿತ ಪೋರ್ಟಲ್‌ನಲ್ಲಿ ಸಂಭವನೀಯ (ಭಾವಿ) ದತ್ತು ಪೋಷಕರ ನೊಂದಣಿಗೆ ಅನುವಾಗುವುದು.

b) ಮಗುವನ್ನು ಒಪ್ಪಿಸುವ ನಿಜವಾದ ಪೋಷಕರು/ ವಿವಾಹವಾಗಿಲ್ಲದ ತಾಯಿಗೆ ಆಪ್ತಸಮಾಲೋಚನೆ ಒದಗಿಸುವುದು ಹಾಗೂ ಮಗುವನ್ನು ಪರಿತ್ಯಜಿಸುವುದನ್ನು ತಡೆಗಟ್ಟಲು ಹಾಗೂ ಮಗುವಿನ ಪುನರ್ವಸತಿಗಾಗಿ ಆಪ್ತಸಮಾಲೋಚನೆ ಒದಗಿಸುವುದು.

c) ಗೃಹ ಅಧ್ಯಯನ ವರದಿಯನ್ನು ಕೈಗೊಳ್ಳುವುದು.

d) ಪಿಎಪಿಗಳೊಂದಿಗೆ ಮಗುವನ್ನು ಹೋಲಿಕೆ ಮಾಡುವುದು.

e) ದತ್ತುಪೂರ್ವ ಫಾಸ್ಟರ್ ಕೇರ್‌ನಲ್ಲಿ ಮಗುವಿನ ಪ್ಲೇಸ್‌ಮೆಂಟ್‌ಗಾಗಿ ಅನುಕೂಲ ಮಾಡಿಕೊಡುವುದು

f) ಎಲ್ಲಾ ಪಿಎಪಿಗಳಿಗೂ ದತ್ತು ಪೂರ್ವ ಹಾಗೂ ನಂತರದ ಆಪ್ತಸಮಾಲೋಚನೆ

g) ಮಗುವನ್ನು ದತ್ತು ಪಡೆಯುವುದು ಅಥವಾ ಪ್ಲೇಸ್‌ಮೆಂಟ್‌ಗಾಗಿ ನ್ಯಾಯಾಲಯದ (ಜಿಲ್ಲಾಧಿಕಾರಿಗಳ) ವಿಧಾನಗಳನ್ನು ನೋಡಿಕೊಳ್ಳುವುದು, ಹಾಗೂ

h) ದತ್ತು ನಂತರದ ಪ್ರಕ್ರಿಯೆ ಮತ್ತು ಅನುಸರಣೆಯನ್ನು ಕೈಗೊಳ್ಳುವುದು

## ತೊಟ್ಟಿಲು ಮಗುವಿನ ಸ್ವಾಗತ ಕೇಂದ್ರ – Cradle Baby Reception Centre:

ದೇಶದ ಅನೇಕ ಜಿಲ್ಲೆಗಳಲ್ಲಿ ಬಿಕ್ಕಟ್ಟಿನಲ್ಲಿರುವ ಮಕ್ಕಳಿಗೆ ತಾತ್ಕಾಲಿಕ ಸೂರಿನ ಸೌಲಭ್ಯಗಳು ಇಲ್ಲದಿರುವುದನ್ನು ಗಮನಿಸಿ, ವಿಶೇಷವಾಗಿ ಪರಿತ್ಯಜಿಸಲ್ಪಟ್ಟಿರುವ ಹಾಗೂ ಮಾನವ ಕಳ್ಳ ಸಾಗಣೆಗೆ ತುತ್ತಾಗುವ ಸಂಭವವಿರುವ ಮಕ್ಕಳ ರಕ್ಷಣೆಗೆ, ಅಭಿಯಾನವು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದಾದರೂ ಎಸ್‌ಎಎ (ದತ್ತು ಕೇಂದ್ರದಲ್ಲಿ) ದಲ್ಲಿ (ಆದ್ಯತೆಯ ಮೇರೆಗೆ–ಸರ್ಕಾರವೇ ನಡೆಸುವ, ಹೊಣೆಗಾರಿಕೆ ಇರುವ) ತೊಟ್ಟಿಲ ಮಗು ಸ್ವಾಗತ ಕೇಂದ್ರಗಳನ್ನು ರಚಿಸಲು ಅಪೇಕ್ಷಿಸುತ್ತದೆ. ಈ ಸ್ವಾಗತ ಕೇಂದ್ರವನ್ನು ಎಸ್‌ಎಎ ತನ್ನ ಆವರಣದಿಂದಲೇ ನಡೆಸಬೇಕು ಹಾಗೂ ಶಿಶುಗಳಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು. ಈ ಸ್ವಾಗತ ಕೇಂದ್ರಗಳ ಪ್ರಾಥಮಿಕ ಉದ್ದೇಶವೇನೆಂದರೆ ಪರಿತ್ಯಜಿಸಲ್ಪಟ್ಟಿರುವ ಮಕ್ಕಳ ರಕ್ಷಣೆ ಹಾಗೂ ಮಗುವನ್ನು ದತ್ತುಗೆ ನೀಡುವವರೆಗೂ ಪೋಷಣೆ ಹಾಗೂ ವಾತ್ಸಲ್ಯದಿಂದ ನೋಡಿಕೊಳ್ಳುವುದು.

ಪ್ರತಿ ಎಸ್‌ಎಎ ಇಂತಹ ಮಕ್ಕಳನ್ನು ಪಡೆಯಲು ಪ್ರವೇಶದ್ವಾರದ ಬಳಿ ಅಲಾರ್ಮ್ ಬೆಲ್ ಇರುವ ಒಂದು ತೊಟ್ಟಿಲನ್ನು ಅಳವಡಿಸಬೇಕು. ಈ ತೊಟ್ಟಿಲ ಮಗು ಸ್ವಾಗತ ಕೇಂದ್ರಗಳನ್ನು, ಪರಿತ್ಯಜಿಸಲ್ಪಟ್ಟ ಮಕ್ಕಳನ್ನು ಪಡೆದುಕೊಳ್ಳಲು ಡಿಸಿಪಿಯು ಕಚೇರಿ ಅಥವಾ ಇತರೆ ನಿಗಧಿತ ಸ್ಥಳಗಳಲ್ಲಿ, ಪ್ರಾಥಮಿಕ ಆರೋಗ್ಯ ಸೇವಾ ಕೇಂದ್ರಗಳು (ಪಿಹೆಚ್‌ಸಿಗಳು), ಆಸ್ಪತ್ರೆಗಳು/ ನರ್ಸಿಂಗ್ ಹೋಮ್‌ಗಳು, ಬಸ್ ಹಾಗೂ ರೈಲು ನಿಲ್ದಾಣಗಳೊಂದಿಗೆ ಸಂಪರ್ಕ ಕಲ್ಪಿಸುವುದು. ತೊಟ್ಟಿಲ ಮಗು ಸ್ವಾಗತ ಕೇಂದ್ರದಿಂದ ಪಡೆಯುವ ಪ್ರತಿ ಮಗುವಿಗೂ, ಸ್ವಾಗತ ಕೇಂದ್ರದಿಂದ ವೈಯಕ್ತಿಕ ಪೋಷಣಾ ಯೋಜನೆಯನ್ನು ಸೃಷ್ಟಿಸುವ ಪ್ರಕ್ರಿಯೆಯನ್ನು ಸ್ವಾಗತ ಕೇಂದ್ರ ಕೈಗೊಳ್ಳಬೇಕು, ಅದನ್ನು ನಂತರದಲ್ಲಿ ಮಗುವನ್ನು ಸಿಡಬ್ಲ್ಯೂಸಿ ಅನುಮೋದನೆಯ ನಂತರ, ವರ್ಗಾಯಿಸಲ್ಪಡುವ ಎಸ್‌ಎಎ ಮತ್ತಷ್ಟು ಅಭಿವೃದ್ಧಿಪಡಿಸಿ, ಸಿದ್ದಪಡಿಸಬೇಕು.

**ತೊಟ್ಟಿಲ ಮಗು ಸ್ವಾಗತ ಕೇಂದ್ರದಿಂದ ಮಗುವೊಂದನ್ನು ಪಡೆದುಕೊಂಡಾಗ, ಆ ಮಗುವಿನ ಪುನರ್ವಸತಿಗಾಗಿ ಈ ಕೆಳಕಂಡ ವ್ಯವಸ್ಥೆಗಳನ್ನು ಮಾಡಬೇಕು:**

a) ವೈದ್ಯಕೀಯ ಅಧಿಕಾರಿಯ ಸಲಹೆಯ ಪ್ರಕಾರ ಸರಿಯಾದ ವೈದ್ಯಕೀಯ ಚಿಕಿತ್ಸೆ ಹಾಗೂ ಆಹಾರವನ್ನು ಒದಗಿಸಬೇಕು;

b) ಮಕ್ಕಳ ಕಲ್ಯಾಣ ಸಮಿತಿಗೆ ಮಗುವಿನ ಬಂದಿರುವ/ದಾಖಲಾಗಿರುವ/ಆಗಮನದ ಕುರಿತು ವರದಿ ಸಲ್ಲಿಸಬೇಕು.

c) ಮಗುವಿನ ಎಲ್ಲಾ ಮೂಲಭೂತ ಅಗತ್ಯತೆಗಳನ್ನು ಪೂರೈಸಬೇಕು.

d) ಮಗುವಿಗೆ ಪೋಷಣೆ ಹಾಗೂ ರಕ್ಷಣೆಯನ್ನು ಒದಗಿಸಬೇಕು.

e) ಸಕ್ಷಮ ಪ್ರಾಧಿಕಾರದಲ್ಲಿ ಮಗುವಿನ ಜನನವನ್ನು ನೋಂದಾಯಿಸಬೇಕು; ಹಾಗೂ

f) ದತ್ತು ಮೂಲಕ ಮಗುವನ್ನು ಕುಟುಂಬಕ್ಕೆ ವಹಿಸುವ ಸಂಭವದ ಕುರಿತು ಪರಿಶೋಧನೆ ಮಾಡಬೇಕು.

ಡಿಸಿಪಿಯು ತೊಟ್ಟಿಲು ಕೇಂದ್ರಗಳಿಗಾಗಿ ತೊಟ್ಟಿಲುಗಳನ್ನು ಖರೀದಿಸಲು ಸಹಕರಿಸಬೇಕು. ಜಿಎಫ್ಆರ್ 2017ರ ಖರೀದಿ ಮಾರ್ಗಸೂಚಿಗಳು/ ನಿಯಮಾವಳಿಗಳ ಪ್ರಕಾರ ಎಸ್ಎಎಗಳಲ್ಲಿ ತೊಟ್ಟಿಲು ಸ್ಥಳಕ್ಕಾಗಿ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ತೊಟ್ಟಿಲುಗಳ ಖರೀದಿಯನ್ನು ಮಾಡಬೇಕು.

## 2) ಕಾನೂನಿನೊಂದಿಗೆ ಸಂಘರ್ಷವಿರುವ ಮಕ್ಕಳಿಗಾಗಿ ಅನುಪಾಲನಾ ಕೇಂದ್ರಗಳು (ಸಿಸಿಎಲ್): Child Care Institutions for Children in Conflict with Law (CCL):

i. **ವೀಕ್ಷಣಾ ಗೃಹಗಳು – Observation Homes**: ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಯಾವುದೇ ಆರೋಪವನ್ನು ಎದುರಿಸುತ್ತಿರುವ ಮಗುವಿಗಾದರೂ ಸಹ ತಾತ್ಕಾಲಿಕವಾಗಿ ಸ್ವಾಗತ, ಪೋಷಣೆ ಹಾಗೂ ಪುನರ್ವಸತಿಯನ್ನು ಒದಗಿಸಲು ಪರಿವೀಕ್ಷಣಾ (ವೀಕ್ಷಣಾಲಯ) ಗೃಹಗಳಿಗೆ ಅಗತ್ಯ ಬೆಂಬಲವನ್ನು ಒದಗಿಸವುದು.

ii. **ವಿಶೇಷ ಗೃಹಗಳು – Special Homes**: ಅಪರಾಧವನ್ನು ಎಸಗಿರುವ ಹಾಗೂ ಅದರಿಂದಾಗಿ ಮಕ್ಕಳ ನ್ಯಾಯ ಮಂಡಳಿಯಲ್ಲಿ ಇರಿಸಿರುವಂತಹ ಯಾವುದೇ ಮಕ್ಕಳಿಗೆ ದೀರ್ಘಾವಧಿ ಪುನರ್ವಸತಿ ಹಾಗೂ ರಕ್ಷಣೆಯನ್ನು ಒದಗಿಸಲು ವಿಶೇಷ ಗೃಹಗಳನ್ನು ಸ್ಥಾಪಿಸುವುದು. ಪ್ರತಿ ಜಿಲ್ಲೆ ಅಥವಾ ಜಿಲ್ಲೆಗಳ ಗುಂಪಿನಲ್ಲಿ ವಿಶೇಷ ಗೃಹಗಳ ಸ್ಥಾಪನೆಯ ಪ್ರಕ್ರಿಯೆಗೆ ಅನುಕೂಲ ಒದಗಿಸಲು ಹಾಗೂ ವೇಗಗೊಳಿಸಲು ಈ ಯೋಜನೆಯು ರಾಜ್ಯ ಸರ್ಕಾರಗಳೂ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಅಗತ್ಯ ಹಣಕಾಸಿನ ಬೆಂಬಲವನ್ನು ಒದಗಿಸುತ್ತದೆ.

iii. **ಸುರಕ್ಷಿತ ಸ್ಥಳಗಳು – Place of Safety**: 16 ರಿಂದ 18 ವರ್ಷಗಳ ವಯಸ್ಸಿನ ಮಕ್ಕಳು ಹಾಗೂ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಹೀನ ಅಪರಾಧವನ್ನು ಎಸಗಿರುವ ಕಾರಣದಿಂದಾಗಿ ಮಗು ತಪ್ಪು ಮಾಡಿರುವ ಬಗ್ಗೆ ಸಾಬೀತಾಗಿರುವ ಅಥವಾ ಆರೋಪಿಗಾಗಿ ಸುರಕ್ಷಿತ ಸ್ಥಳವನ್ನು ಸ್ಥಾಪಿಸುವುದು. ಮಕ್ಕಳ ನ್ಯಾಯ ಕಾಯ್ದೆ, 2015ರ ಪ್ರಕಾರ, ರಾಜ್ಯ ಸರ್ಕಾರಗಳು, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳನ್ನು ರಾಜ್ಯ ಸರ್ಕಾರದಿಂದ ಅರ್ಹ ಎಂದು ಘೋಷಿಸಲ್ಪಟ್ಟಿರುವ ಮಂಡಳಿ ಉಲ್ಲೇಖಿಸಿರುವ **'ಸುರಕ್ಷಿತ ಸ್ಥಳದಲ್ಲಿ'** ಇರಿಸಬೇಕು ಹಾಗೂ ಸೂಕ್ತವೆನಿಸುವಂತಹ ವ್ಯಕ್ತಿಗಳ ಸುಪರ್ದಿಯಲ್ಲಿ, ಸ್ಥಳದಲ್ಲಿ ಹಾಗೂ ಸನ್ನಿವೇಶಗಳಲ್ಲಿ ಅಂತಹ ಮಕ್ಕಳನ್ನು ಇರಿಸಲು ಕ್ರಮ ಕೈಗೊಳ್ಳಬೇಕು. ರಾಜ್ಯ ಸರ್ಕಾರವು, ನಿಯಮಾವಳಿಗಳ ಪ್ರಕಾರ, **'ಸುರಕ್ಷಿತ ಸ್ಥಳ'** ಎಂದು ಗುರುತಿಸಲ್ಪಡುವ ವಿವಿಧ ಸ್ಥಳಗಳು ಹಾಗೂ ಸೌಲಭ್ಯಗಳನ್ನು ಹಾಗೂ ಸೇವೆಗಳನ್ನು ನಿಗಧಿಪಡಿಸಬಹುದು. ಮಕ್ಕಳ ಪೋಷಣೆ ಮತ್ತು ರಕ್ಷಣಾ ಸಂಸ್ಥೆಗಳ ರಚನೆಗಾಗಿ ನೀಡುವ ಹಣಕಾಸಿನ ಬೆಂಬಲದ ವಿವರಗಳನ್ನು ಅನುಬಂಧ – IV, ಭಾಗ–ಬಿ ರಲ್ಲಿ ನೀಡಲಾಗಿದೆ.

3. **ವಾತ್ಸಲ್ಯ ಸದನ – Vatsalya Sadan:** ***ವಾತ್ಸಲ್ಯ ಸದನವು ಸಿಸಿಐಗಳ (ಮಕ್ಕಳ ಪೋಷಣೆ ಮತ್ತು ರಕ್ಷಣಾ ಸಂಸ್ಥೆಗಳು (ಬಾಲಕಿಯರ/ಬಾಲಕರ ಬಾಲಮಂದಿರ), ಪರಿವೀಕ್ಷಣಾ ಗೃಹ, ವಿಶೇಷ ಗೃಹ, ಸುರಕ್ಷಿತ ಸ್ಥಳ) ಸಂಘಟಿತ ಗೃಹ ಸಂಕೀರ್ಣವಾಗಿರುತ್ತದೆ.*** ಮಕ್ಕಳ ನ್ಯಾಯ ಮಂಡಳಿ ಹಾಗೂ ಸಿಡಬ್ಲ್ಯೂಸಿಗಳ ಜೊತೆಗೆ ಮಕ್ಕಳ ನ್ಯಾಯ ಕಾಯ್ದೆಯ ಅನುಷ್ಠಾನಕ್ಕಾಗಿ ಒಂದೇ ಆವರಣದಲ್ಲಿರುವುದನ್ನು ಖಾತ್ರಿಪಡಿಸಬೇಕು. ರಾಜ್ಯಗಳು, ಭೂಮಿಯ ಅಗತ್ಯ ಹಾಗೂ ಲಭ್ಯತೆಯನ್ನು ಆಧರಿಸಿ ಇಂತಹ ಮಾದರಿ ಸಂಕೀರ್ಣಗಳ ರಚನೆಯನ್ನು ಪರಿಗಣಿಸಬೇಕು. ಪ್ರತಿ ಗೃಹದಲ್ಲಿ 50 ಹಾಗೂ 25 ಮಕ್ಕಳ ಘಟಕಕ್ಕೆ ವಾತ್ಸಲ್ಯ ಸದನವನ್ನು (ಸಂಘಟಿತ ಗೃಹ ಸಂಕೀರ್ಣ) ಪ್ರಸ್ತಾಪಿಸಬಹುದು. ಕಾಲಕಾಲಕ್ಕೆ ರಾಜ್ಯ ಸರ್ಕಾರಗಳು ಅಗತ್ಯವನ್ನು ಆಧರಿಸಿ ಸಂಘಟಿತ ಗೃಹ ಸಂಕೀರ್ಣದ ಪ್ರಸ್ತಾವನೆಗಳನ್ನು ಸಲ್ಲಿಸಿವೆ. ಆದ್ದರಿಂದ, ಈ ಅಗತ್ಯವನ್ನು ಸಂಬೋಧಿಸಲು, ಮಿಷನ್ ವಾತ್ಸಲ್ಯ ಅಭಿಯಾನದ ಯೋಜನೆಯಡಿ ವಾತ್ಸಲ್ಯ ಸದನದ ನಿರ್ಮಾಣಕ್ಕೆ ಅವಕಾಶವನ್ನು ಒದಗಿಸಲಾಗಿದೆ. ವಾತ್ಸಲ್ಯ ಸದನವನ್ನು ಹೊಂದುವ ಲಾಭಗಳು ತಡೆಗಳನ್ನು ಕಡಿಮೆಗೊಳಿಸಲು/ ತಪ್ಪಿಸುವುದು, ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರಯಾಣಿಸುವ ಸಮಯವನ್ನು ಕಡಿಮೆಗೊಳಿಸುತ್ತದೆ ಹಾಗೂ ಭದ್ರತೆಯನ್ನು ಖಾತ್ರಿಪಡಿಸುತ್ತದೆ.

ರಾಜ್ಯಗಳು, ಸಂಬಂಧ ಪಟ್ಟ ರಾಜ್ಯದ ಪ್ರಕಾರ ನಿರ್ದಿಷ್ಟ ಬಣ್ಣ ಹಾಗೂ ವಿನ್ಯಾಸವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಗ್ರ್ಯಾಂಟ್–ಇನ್–ಏಡ್' ಜೊತೆಗೆ ಹೆಚ್ಚುವರಿ ಆಯವ್ಯಯವನ್ನು ಹಂಚಿಕೆ ಮಾಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿರುತ್ತದೆ. ಸಾಧ್ಯವಾದಷ್ಟೂ, ಈ ಸಂಘಟಿತ ಗೃಹಗಳು ಅಂದಾಜು 1200 ಚದರಡಿ ಅಳತೆ ಆಟದ ಮೈದಾನವನ್ನು ಹೊಂದಿರಬೇಕು. ರಾಜ್ಯಗಳು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಮಾದರಿ ನಿಯಮಾವಳಿಗಳು, 2016, ನಿಯಮ 29ರ ಪ್ರಕಾರ ಆಟದ ಮೈದಾನದ ನಿಬಂಧನೆಯನ್ನು ಪರಿಚಯಿಸಬಹುದು.

ಸಂಘಟಿತ ಗೃಹ ಸಂಕೀರ್ಣಗಳ ದರ ನಿಯಮಾವಳಿಗಳು ಹಾಗೂ ಚದರಡಿ ಅಗತ್ಯತೆಗಳು, ವಿವಿಧ ರೀತಿಯ ಗೃಹಗಳು, ಜೆಜೆಬಿಗಳು ಹಾಗೂ ಸಿಡಬ್ಲ್ಯೂಸಿಗಳ ಅನುಮೋದಿತ ಪ್ರದೇಶ ಅಳತೆಯನ್ನು ಆಧರಿಸಿರುತ್ತದೆ ಹಾಗೂ ಅದಕ್ಕೆ ಪೂರಕವಾದ ದರ ನಿಯಮಾವಳಿಗಳನ್ನು ಆಧರಿಸಿರುತ್ತದೆ. ಸಂಕೀರ್ಣವನ್ನು ವಿಶೇಷ ಅಗತ್ಯಗಳಿರುವ ಮಕ್ಕಳಿಗೆ ದೊರಕುವಂತೆ ಮಾಡುವ ಸಲುವಾಗಿ ಹಾಗೂ ಹಸಿರು ಪರಿಸರ ಹಾಗೂ ಇಂಧನ ಸಮರ್ಥ ಕಟ್ಟಡವನ್ನು ನಿರ್ಮಾಣ ಮಾಡುವ ಸಲುವಾಗಿ ವಿವರವಾದ ಅಂದಾಜನ್ನು ಅಭಿವೃದ್ಧಿಪಡಿಸಬಹುದು. ಭೌತಿಕ ಮೂಲಭೂತ ಸೌಕರ್ಯಗಳ ವಿವರಗಳು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಮಾದರಿ ನಿಯಮಾವಳಿಗಳು, 2016, ನಿಯಮ 29ರ ಪ್ರಕಾರ ಇರಬೇಕು. ರಾಜ್ಯಗಳು ತಮ್ಮ ಅಗತ್ಯ–ಆಧಾರಿತ ಪ್ರಸ್ತಾವನೆಗಳನ್ನು, ಷರತ್ತುಗಳನ್ನು ಪೂರೈಸುವ ಭೂಮಿಯ ಲಭ್ಯತೆ ಹಾಗೂ ವಿವರವಾದ ಅಂದಾಜಿನ ವಿವರಗಳನ್ನು ಲೋಕೋಪಯೋಗಿ ಇಲಾಖೆ/ ಕೇಂದ್ರ ಲೋಕೋಪಯೋಗಿ ಸಚಿವಾಲಯಕ್ಕೆ ಸಲ್ಲಿಸಬಹುದು.

ಸಿಸಿಐಗಳ ಮೂಲಭೂತಸೌಕರ್ಯ ಹಾಗೂ ವಾತ್ಸಲ್ಯ ಸದನದ ಮೂಲಭೂತಸೌಕರ್ಯಗಳಿಗಾಗಿ ಹಣಕಾಸಿನ ನಿಯಮಾವಳಿಗಳ ವಿವರಗಳನ್ನು ಅನುಬಂಧ – IV, **ಭಾಗ–ಇ** ರಲ್ಲಿ ನೀಡಲಾಗಿದೆ.

### 3.1.1 ಸಿಸಿಐಗಳಿಗಾಗಿ ಸಾಮಾನ್ಯ ಷರತ್ತುಗಳು – General Conditions for CCIs:

ಅಭಿಯಾನವು ಈ ಕೆಳಕಂಡ ಷರತ್ತುಗಳ ಪ್ರಕಾರ, ದೇಶದಲ್ಲಿ ಅಸ್ತಿತ್ವದಲ್ಲಿರುವ ಮಕ್ಕಳ ಪೋಷಣೆ ಮತ್ತು ರಕ್ಷಣಾ ಕೇಂದ್ರಗಳ ನಿರ್ವಹಣೆಗೆ ಬೆಂಬಲ ನೀಡುವುದು ಅಥವಾ ಹೊಸ ಮಕ್ಕಳ ಪೋಷಣೆ ಮತ್ತು ರಕ್ಷಣಾ ಆರಂಭಕ್ಕೆ ಬೆಂಬಲ ಒದಗಿಸುವುದು:

i. ಸಿಸಿಐ ಅನ್ನು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರಡಿ ನೊಂದಣಿ ಮಾಡಬೇಕು.

ii. ಸಿಸಿಐ ಮಕ್ಕಳ ನ್ಯಾಯ ಕಾಯ್ದೆ ಹಾಗೂ ಅದರಡಿ ರಚಿಸಲ್ಪಡುವ ನಿಯಮಾವಳಿಗಳಡಿ ನಿಗಧಿಪಡಿಸಿರುವ ಮಾನದಂಡಗಳನ್ನು ಪಾಲಿಸಬೇಕು.

iii. ಸರ್ಕಾರೇತರ ಸಂಸ್ಥೆಗಳಿಂದ ನಡೆಯುವ ಸಿಸಿಐಗಳಿಗೆ ರಾಜ್ಯ ಸರ್ಕಾರದ ವತಿಯಿಂದ ದಾಖಲೆಪತ್ರಗಳ ಪರಿಶೀಲನೆ.

iv. ಸಿಸಿಐ ಸಿಬ್ಬಂದಿಗಳ ಕಡ್ಡಾಯ ಪೊಲೀಸ್ ಪರಿಶೀಲನೆ.

**v. ಆರು ವರ್ಷಗಳಿಗೆ ಮೇಲ್ಪಟ್ಟ ಬಾಲಕರು ಹಾಗೂ ಬಾಲಕಿಯರಿಗಾಗಿ ಪ್ರತ್ಯೇಕ ಸಿಸಿಐಗಳನ್ನು ನಡೆಸುವುದು.**

vi. ಜಿಲ್ಲಾ ದಂಡಾಧಿಕಾರಿಯ ಅಗತ್ಯ ಅಂದಾಜಿಸುವಿಕೆ ವರದಿಯನ್ನು ಆಧರಿಸಿ ಯಾವುದೇ ಸಿಸಿಐಗೆ ಬೆಂಬಲವನ್ನು ವಿಸ್ತರಿಸಬಹುದು.

vii. ಯಾವುದೇ ನಿರ್ಧಿಷ್ಟ ನಗರ ಅಥವಾ ಪಟ್ಟಣದಲ್ಲಿ ಸಂಸ್ಥೆಯ ಸ್ಥಳ ಹಾಗೂ ಗಾತ್ರ, ಮಕ್ಕಳ ನ್ಯಾಯ ಮಂಡಳಿಯಡಿ ಇರುವ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಪ್ರಕರಣಗಳ ಹೊರೆಯನ್ನು ಆಧರಿಸಿ ಹಾಗೂ ಮಕ್ಕಳ ಕಲ್ಯಾಣ ಸಮಿತಿಯಿಂದ ಉಲ್ಲೇಖಿಸಲ್ಪಟ್ಟಿರುವ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಪ್ರಕರಣಗಳ ಹೊರೆಯನ್ನು ಆಧರಿಸಿರಬೇಕು.

**viii. ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳು ಹಾಗೂ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗಾಗಿ ಇರುವ ಸಿಸಿಐಗಳು ಪ್ರತ್ಯೇಕ ಆವರಣಗಳಿಂದ ಕಾರ್ಯನಿರ್ವಹಿಸಬೇಕು.**

ix. ಕೇಂದ್ರಗಳು, ಮಕ್ಕಳು ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅನುಕೂಲವಾಗುವಂತೆ ಸೂಕ್ತ ತೆರೆದ ಸ್ಥಳವಿರುವ ನೈಸರ್ಗಿಕ ಪರಿಸರಗಳಿಂದ ಕೂಡಿರುವ ಸೌಹಾರ್ದಯುತ ಮಕ್ಕಳ ಸ್ನೇಹಿ ಪರಿಸರದಲ್ಲಿರಬೇಕು. ಪ್ರತಿ ಕೇಂದ್ರವೂ ಸಹ ವಿವಿಧ ರೀತಿಯ ಸಾರಿಗೆ ವ್ಯವಸ್ಥೆಯ ಸಂಪರ್ಕವನ್ನು ಹೊಂದಿರಬೇಕು ಹಾಗೂ ಶಾಲೆಗಳು ಹಾಗೂ ತಾಂತ್ರಿಕ ಮತ್ತು ಇತರೆ ವೃತ್ತಿಪರ ತರಬೇತಿ ಸಂಸ್ಥೆಗಳಿಗೆ ಹತ್ತಿರದಲ್ಲಿರುವಂತಿರಬೇಕು. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು/ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಸುಲಭವಾಗಿ ಈ ಸೇವೆಗಳು ಲಭ್ಯವಾಗುವಂತಹ ಸ್ಥಳದಲ್ಲಿರಬೇಕು.

x. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಾಗಲೀ ಅಥವಾ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಾಗಲೀ, ಒಂದೇ ರೀತಿಯ ಸೌಲಭ್ಯಗಳು ಹಾಗೂ ಗುಣಮಟ್ಟದ ಸೇವೆಗಳನ್ನು ಒದಗಿಸಲು ಎಲ್ಲಾ ಸಿಸಿಐಗಳನ್ನು ಬೆಂಬಲಿಸಬೇಕು.

xi. ಸಿಸಿಗಳಲ್ಲಿ ವಯಸ್ಸಿಗೆ ಸೂಕ್ತವಾಗಿರುವಂತಹ ಶಿಕ್ಷಣ, ವೃತ್ತಿಪರ ತರಬೇತಿ, ರಾಷ್ಟ್ರೀಯ ಮುಕ್ತ ಶಾಲೆ ಕಾರ್ಯಕ್ರಮ (ಎನ್‌ಓಎಸ್‌ಪಿ–NOSP: National Open School Program), ಆರೋಗ್ಯ ಸೇವೆಗಳು, ಆಪ್ತಸಮಾಲೋಚನೆ ಇತ್ಯಾದಿಗಳನ್ನು ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಪರಿಚಯಿಸಬೇಕು;

xii. ಸಿಸಿಐಗಳಲ್ಲಿರುವ 14–18 ವರ್ಷ ವಯಸ್ಸಿನ ನಡುವಿನ ಮಕ್ಕಳಿಗೆ ನಿರ್ದಿಷ್ಟವಾದ ಅಲ್ಪಾವಧಿ ಅರ್ಹ ಸರ್ಟಿಫಿಕೇಟ್ ಕೋರ್ಸ್‌ಗಳು ಹಾಗೂ ಕೌಶಲ್ಯ ತರಬೇತಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಒದಗಿಸುವುದು.

xiii. ಸಿಸಿಐಗಳು, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಮಾದರಿ ನಿಯಮಾವಳಿಗಳು, 2016ರಲ್ಲಿ ಒದಗಿಸಿರುವ ಪ್ರಕಾರ ಕನಿಷ್ಟ ಗುಣಮಟ್ಟದ ಷರತ್ತುಗಳನ್ನು ಪೂರೈಸುವಂತಿರಬೇಕು.

### 3.1.2 ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆಗಳ ಸಾಮರ್ಥ್ಯ (ಸಿಸಿಐಗಳು) – Capacity of Child Care Institutions (CCIs):

ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆಗಳಲ್ಲಿ ಸಾಮಾನ್ಯವಾಗಿ 50 ಮಕ್ಕಳಿಗೆ ಸ್ಥಳಾವಕಾಶ ನೀಡುವಷ್ಟು ಬೆಂಬಲಿಸಬಹುದು; ಆದಾಗ್ಯೂ, ಈಶಾನ್ಯ ರಾಜ್ಯಗಳಲ್ಲಿ, ಹಿಮಾಲಯ ಪ್ರಾಂತ್ಯದ ರಾಜ್ಯಗಳು ಹಾಗೂ ಇತರೆ ರಾಜ್ಯಗಳಲ್ಲಿನ ಗುಡ್ಡಗಾಡು ಪ್ರದೇಶಗಳಲ್ಲಿರುವ ಸಿಸಿಐಗಳಲ್ಲಿ 25 ಮಕ್ಕಳನ್ನು ಇರಿಸಿಕೊಳ್ಳುವ ಸಾಮರ್ಥ್ಯಕ್ಕೆ, ಆಯಾ ರಾಜ್ಯಗಳಲ್ಲಿನ ಅಗತ್ಯಗಳಿಗೆ ತಕ್ಕಂತೆ ಬೆಂಬಲ ಒದಗಿಸಬಹುದು. ಎಲ್ಲಾ ಸಿಸಿಐಗಳೂ ಸಹ ಮೂಲಭೂತ ಸೌಕರ್ಯ, ಆರೈಕೆದಾರರು, ಸೇವಾದಾರರು ಅಥವಾ ಮತ್ಯಾವುದಾದರೂ ಅಂಶಕ್ಕೆ ಸಂಬಂಧಪಟ್ಟಂತೆ ಜೆಜೆ ಕಾಯ್ದೆ ಹಾಗೂ ನಿಯಮಾವಳಿಗಳಲ್ಲಿರುವಂತೆ ಒಂದೇ ರೀತಿಯ ಸೌಲಭ್ಯಗಳನ್ನು ಕಲ್ಪಿಸಬೇಕು. ಕಳೆದ 3 ವರ್ಷಗಳಲ್ಲಿ ಮಕ್ಕಳ ಪೋಷಣೆ ಮತ್ತು ರಕ್ಷಣಾ ಸಂಸ್ಥೆಗಳಲ್ಲಿರುವ ಒಟ್ಟು ಸರಾಸರಿ ಮಕ್ಕಳ ಸಂಖ್ಯೆಯನ್ನು ಆಧರಿಸಿ ಘಟಕಗಳ ಸಂಖ್ಯೆ ಬದಲಾಗಬಹುದು.

### 3.1.3 ಮಕ್ಕಳ ಪೋಷಣಾ ಮತ್ತು ರಕ್ಷಣಾ ಕೇಂದ್ರಗಳಲ್ಲಿನ ಸಿಬ್ಬಂದಿಗಳ ಪಾತ್ರಗಳು ಹಾಗೂ ಜವಾಬ್ದಾರಿಗಳು – Roles and Responsibilities of Staff in Child Care Instititions:

ಮಕ್ಕಳ ಪೋಷಣಾ ಮತ್ತು ರಕ್ಷಣಾ ಕೇಂದ್ರಗಳಲ್ಲಿರುವ ಸಿಬ್ಬಂದಿ/ಆರೈಕೆದಾರರ ನಿರ್ದಿಷ್ಟವಾದ ಪಾತ್ರಗಳು ಹಾಗೂ ಜವಾಬ್ದಾರಿಗಳು, ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ನಿಯಮಾವಳಿಗಳಡಿ ನಿಗಧಿಪಡಿಸಿರುವ ಕಾರ್ಯನಿರ್ವಹಣೆಗಳು ಹಾಗೂ ಕರ್ತವ್ಯಗಳು ಒಳಗೊಂಡಿರಬೇಕು. ಸಿಸಿಐಗಳಲ್ಲಿ ಸೇವೆ ಸಲ್ಲಿಸುವ ಸಿಬ್ಬಂದಿಗಳ ಸೂಚಕ ಅರ್ಹತೆ ಅನುಬಂಧ – **IV, ಭಾಗ–ಎ** ರಲ್ಲಿ ನೀಡಲಾಗಿದೆ.

### 3.2 ಸ್ವಚ್ಛತಾ ಕ್ರಿಯಾ ಯೋಜನೆ (ಎಸ್‌ಎಪಿ – SAP- Swachata Action Plan)

ಸಿಸಿಐಗಳಲ್ಲಿ ಎಸ್‌ಎಪಿಯ ಚಟುವಟಿಕೆಗಳನ್ನು ಕೈಗೊಳ್ಳಲು ಹಾಗೂ ಸೇವಾ ಹಂಚಿಕೆ ರಚನೆಗಳ ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳು ವಾರ್ಷಿಕ ಕ್ಯಾಲೆಂಡರ್‌ನ್ನು ಸಿದ್ಧಪಡಿಸಬೇಕು:

i. ಉಗುರುಗಳನ್ನು ಕತ್ತರಿಸುವುದು, ಕೈತೊಳೆಯುವುದು, ಕಪಾಟುಗಳನ್ನು ಸ್ವಚ್ಛಗೊಳಿಸುವುದು ಇತ್ಯಾದಿಯಂತಹ ಸಿಸಿಐಗಳಲ್ಲಿರುವ ಸಿಬ್ಬಂದಿ ಹಾಗೂ ಮಕ್ಕಳ ವೈಯಕ್ತಿಕ ನೈರ್ಮಲ್ಯ ಚಟುವಟಿಕೆಗಳು. ಮಕ್ಕಳು ಸೋಪು ಹಾಗೂ ನೀರು ಬಳಸಿ ನಿಯಮಿತವಾಗಿ ತಮ್ಮ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಲು ಪ್ರೋತ್ಸಾಹಿಸುವುದು.

ii. ಸಿಸಿಐಗಳು, ನಿರ್ದಿಷ್ಟವಾಗಿ ಆಗಾಗ ಸ್ಪರ್ಶಿಸಲ್ಪಡುವ ವಸ್ತುಗಳನ್ನು ಆಗಾಗ ಸ್ವಚ್ಛಗೊಳಿಸುವ ಹಾಗೂ ಸ್ಯಾನಿಟೈಜ್ ಮಾಡುವುದನ್ನು ಖಾತ್ರಿಪಡಿಸುವುದು.

iii. ಆವರಣದಲ್ಲಿ ಧೂಪ ಹಾಕುವುದು, ನಿಯಮಿತವಾದ ಸ್ವಚ್ಛ ಕುಡಿಯುವ ನೀರಿನ ಸರಬರಾಜು ಹಾಗೂ ನೀರು ಶೇಖರಣಾ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವುದು.

iv. ಸಿಸಿಐಗಳಲ್ಲಿರುವ ವಾಶ್‌ರೂಮುಗಳಲ್ಲಿ ಕೈಗಳನ್ನು ಸ್ವಚ್ಛಗೊಳಿಸಲು ಸ್ಯಾನಿಟೈಜರ್, ಸದಾಕಾಲ ಸೋಪು ಹಾಗೂ ಹರಿಯುವ ನೀರಿರುವುದನ್ನು ಖಾತ್ರಿಪಡಿಸುವುದು.

v. ಸಿಸಿಐಗಳಲ್ಲಿ ನೀರು, ಸ್ವಚ್ಛತೆ ಹಾಗೂ ನೈರ್ಮಲ್ಯ ಕುರಿತ ಹೊಸಗುರಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

vi. ಸಾಕಷ್ಟು ಸಂಖ್ಯೆಯಲ್ಲಿ ಶೌಚಾಲಯಗಳಿರಬೇಕು ಹಾಗೂ ಅವು ಎಲ್ಲರಿಗೂ ಸುಲಭವಾಗಿ ದೊರಕುವಂತೆ ಹಾಗೂ ಮಕ್ಕಳಸ್ನೇಹಿ ಆಗಿರಬೇಕು.

vii. ಸಿಸಿಐಗಳಲ್ಲಿ ಪೌಷ್ಟಿಕ ಅಂಶಗಳ ಸಸಿಗಳ ಕೈತೋಟ ಅಭಿವೃದ್ಧಿ

viii. ಸಿಸಿಐಗಳಲ್ಲಿ ಗಿಡ ನೆಡುವ ಅಭಿಯಾನಗಳು. (Plantation drives in the CCIs).

ix. ಸಿಸಿಐಗಳಲ್ಲಿನ ಮಕ್ಕಳು ಹಾಗೂ ಸಿಬ್ಬಂದಿಗಳಿಗೆ ಆರೋಗ್ಯ, ನೈರ್ಮಲ್ಯ ಹಾಗೂ ಸ್ವಚ್ಛತೆಯ ಕುರಿತು ಗುಂಪು ಚರ್ಚೆ

x. **'ಬೆಸ್ಟ್ ಔಟ್ ಆಫ್ ವೇಸ್ಟ್'** ಕುರಿತು ಮಕ್ಕಳೊಂದಿಗೆ ಕಲೆ ಮತ್ತು ಕರಕುಶಲ ಚಟುವಟಿಕೆ ಕಾರ್ಯಕ್ರಮ ಹಮ್ಮಿಕೊಳ್ಳುವುದು.

xi. ವೆಬ್‌ಸೈಟ್‌ಗಳಲ್ಲಿ ಹಾಗೂ ಎಲ್ಲಾ ಸಿಸಿಐಗಳಲ್ಲಿಯೂ ಗೋಡೆ ಬರಹದ ಮೂಲಕ ಸ್ವಚ್ಛತೆ ಕುರಿತು ಸಂದೇಶ ಪ್ರದರ್ಶನ.

xii. ಮರು ಬಳಕೆಯನ್ನು ನಿಷೇಧಿಸಿರುವ ಪ್ಲಾಸ್ಟಿಕ್ ಆಧಾರಿತ ವಸ್ತುಗಳನ್ನು ಮತ್ತೆ ಪುನಃ (ಎಸ್‌ಯುಪಿ– SUP-Single Use Plastic) ಮರು ಬಳಕೆಯಾಗದಂತೆ ತಡೆಯುವುದು ಹಾಗೂ ಕಚೇರಿಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ತಡೆಯುವುದು.

xiii. ಮಕ್ಕಳ ಸಮಿತಿ ವತಿಯಿಂದ ಕೊಠಡಿಗಳು, ಶೌಚಾಲಯಗಳು, ಆಹಾರ, ಉಡುಗೆ ಇತ್ಯಾದಿಗಳ ಸ್ವಚ್ಛತೆಯ ಕುರಿತು ತಪಾಸಣೆ ನಡೆಸುವುದು.

xiv. ಅಡುಗೆ ಅನಿಲಕ್ಕಾಗಿ ಇಂಧನ ಉತ್ಪತ್ತಿಗೆ ತ್ಯಾಜ್ಯ ವಸ್ತುಗಳನ್ನು ಬಳಸುವುದು.

xv. ಆರೋಗ್ಯ ಮತ್ತು ಸ್ವಚ್ಛತೆಯ ಕುರಿತ ವಿಚಾರಗೋಷ್ಠಿ, ಕಾರ್ಯಾಗಾರ, ಚಿತ್ರ ಪ್ರದರ್ಶನ, ಪದ್ಯ ಬರೆಯುವ ಸ್ಪರ್ಧೆ ಆಯೋಜನೆ.

xvi. 15 ದಿನಗಳಿಗೊಮ್ಮೆ ಹಾಗೂ ಅಂತ್ಯದಲ್ಲಿ ಮಾಹಿತಿ ಹಂಚಿಕೆ ಹಾಗೂ ಸಿದ್ಧತೆಯ ಪರಿಷ್ಕರಣೆಗಾಗಿ ಕ್ಷೇತ್ರ ರಚನೆಗಳೊಂದಿಗೆ ವಿಸಿ/ ಸಭೆ ಆಯೋಜಿಸುವುದು.

xvii. ಅರಿವು ಮೂಡಿಸುವ ಸಲುವಾಗಿ ಸಾಮಾಜಿಕ ಮಾಧ್ಯಮದ ಬಳಕೆ (ಫೇಸ್‌ಬುಕ್, ಟ್ವಿಟ್ಟರ್, ಇನ್‌ಸ್ಟಾಗ್ರಾಂ, ಯೂಟ್ಯೂಬ್, ಇತ್ಯಾದಿ)

xviii. ಕಾಲಕಾಲಕ್ಕೆ ಹೊರಡಿಸುವ ಮತ್ಯಾವುದಾದರೂ ಪೂರಕ ಸೂಚನೆಗಳು.

# 4. ಸಾಂಸ್ಥಿಕೇತರ ಆರೈಕೆ ಸೇವೆಗಳು –

## NON-INSTITUTIONAL CARE SERVICES

ಮಕ್ಕಳ ನ್ಯಾಯ ಕಾಯ್ದೆಯಡಿ ಇರುವ ಮಕ್ಕಳ ಪೋಷಣೆ ಮತ್ತು ರಕ್ಷಣೆಯ ಮಾರ್ಗಸೂಚಿಯ ಆಶಯದ ಪ್ರಕಾರ ಒಂದು ಮಗುವನ್ನು ಕೊನೆಯ ಪ್ರಯತ್ನವಾಗಿ ಮಾತ್ರ ಸಾಂಸ್ಥಿಕ ಆರೈಕೆಗೆ ಒಪ್ಪಿಸಬೇಕು. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 ಹಾಗೂ ಅದರಡಿ ರೂಪಿಸಲಾಗಿರುವ ಮಾದರಿ ನಿಯಮಾವಳಿಗಳು, ಪ್ರಾಯೋಜಕತ್ವ, ಫಾಸ್ಟರ್ ಕೇರ್, ದತ್ತು ಹಾಗೂ ಅನುಪಾಲನಾ ಸೇವೆಗಾಗಿ ಕುಟುಂಬ ಮತ್ತು ಸಮುದಾಯ ಆಧಾರಿತ ಪರ್ಯಾಯಗಳಲ್ಲಿ ಅನುಪಾಲನೆ ಮೂಲಕ ಮಕ್ಕಳ ಪುನರ್ವಸತಿ ಹಾಗೂ ಮಕ್ಕಳನ್ನು ಅವರ ಮೂಲ ಕುಟುಂಬಕ್ಕೆ ಪುನರ್ ಸಂಯೋಜನೆಗಾಗಿ ಸಾಂಸ್ಥಿಕೇತರ ಆರೈಕೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ.

**ಈ ಅಭಿಯಾನವು ಸಾಂಸ್ಥಿಕೇತರ ಆರೈಕೆಯ ಈ ಕೆಳಕಂಡ ಮಾದರಿಗಳ ಮೂಲಕ ಮಕ್ಕಳನ್ನು ಬೆಂಬಲಿಸುತ್ತದೆ:**

i. **ಪ್ರಾಯೋಜಕತ್ವ (Sponsorship):** ವಿಸ್ತೃತ ಕುಟುಂಬಗಳು/ ಜೈವಿಕ ಸಂಬಂಧಿಗಳೊಂದಿಗೆ ಜೀವಿಸುತ್ತಿರುವ ಸಂಕಷ್ಟದಲ್ಲಿರುವ/ ದುರ್ಬಲ ವರ್ಗದ ಮಕ್ಕಳಿಗೆ, ಅವರ ಶಿಕ್ಷಣ, ಪೌಷ್ಟಿಕತೆ ಹಾಗೂ ಆರೋಗ್ಯ ಅಗತ್ಯಗಳಿಗಾಗಿ ಹಣಕಾಸಿನ ಬೆಂಬಲವನ್ನು ವಿಸ್ತರಿಸಲಾಗುತ್ತದೆ.

ii. **ಫಾಸ್ಟರ್ ಕೇರ್ (Foster Care):** ಮಗುವಿನ ಪೋಷಣೆ ಹಾಗೂ ರಕ್ಷಣೆಗಾಗಿ ಸಂಬಂಧವಲ್ಲದ ಕುಟುಂಬದವರು ಮಗುವಿನ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು. ಮಗುವಿನ ಪೋಷಣೆಗಾಗಿ ಹಣಕಾಸಿನ ಬೆಂಬಲವನ್ನು ಜೈವಿಕವಾಗಿ ಸಂಬಂಧವಿಲ್ಲದ ಫಾಸ್ಟರ್ ಪೋಷಕರಿಗೆ ಒದಗಿಸಲಾಗುವುದು.

iii. **ದತ್ತು (Adoption):** ಕಾನೂನುಬದ್ಧವಾಗಿ ದತ್ತು ಹೋಗಲು ಸಿದ್ಧವಾಗಿರುವ ಮಕ್ಕಳಿಗಾಗಿ ಸೂಕ್ತ ಕುಟುಂಬಗಳನ್ನು ಹುಡುಕುವುದು. ವಿಶೇಷ ದತ್ತು ಕೇಂದ್ರಗಳು (ಎಸ್‌ಎಎ) ದತ್ತು ಕಾರ್ಯಕ್ರಮಕ್ಕೆ ಅನುಕೂಲ ಒದಗಿಸುತ್ತವೆ.

iv. **ಅನುಪಾಲನಾ ಸೇವೆ (After Care):** 18 ವರ್ಷಗಳನ್ನು ಪೂರೈಸಿದ ನಂತರ ಮಕ್ಕಳ ಪೋಷಣಾ ಸಂಸ್ಥೆಯಿಂದ ಹೊರಗೆ ಹೋಗುವ ಮಕ್ಕಳಿಗೆ, ಅವರು ಸಮಾಜದ ಮುಖ್ಯವಾಹಿನಿಯೊಂದಿಗೆ ಮರು ಸೇರ್ಪಡೆಗೊಳ್ಳಲು ಅಗತ್ಯವಿರುವ ಹಣಕಾಸಿನ ಬೆಂಬಲವನ್ನು ಒದಗಿಸಬೇಕು. ಈ ರೀತಿಯ ಬೆಂಬಲವನ್ನು 18 ವರ್ಷಗಳಿಂದ 21 ವರ್ಷ ವಯಸ್ಸಿನ ನಡುವಿನ ಮಕ್ಕಳಿಗೆ ನೀಡಬಹುದು, ಆತ/ಆಕೆ ಸ್ವಾವಲಂಬಿಯಾಗುವವರೆಗೂ, ಅಂದರೆ 23 ವರ್ಷಗಳು ತುಂಬುವವರೆಗೂ ಈ ಹಣಕಾಸಿನ ಬೆಂಬಲವನ್ನು ಒದಗಿಸಬಹುದು.

ಪ್ರಾಯೋಜಕತ್ವ ಅಥವಾ ಫಾಸ್ಟರ್ ಕೇರ್ ಅಥವಾ ಅನುಪಾಲನಾ ಸೇವೆಗಾಗಿ ರಾಜ್ಯ ಸರ್ಕಾರದಿಂದ ಪ್ರತಿ ಮಗುವಿಗೆ ತಲಾ ರೂ.4,000/–ದಂತೆ ಮಾಸಿಕ ಅನುದಾನ ನೀಡಲಾಗುವುದು. ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ನಿಧಿಯಡಿ ಎಸ್‌ಸಿಪಿಎಸ್‌ಗೆ ಹೆಚ್ಚುವರಿ ಅನುದಾನವನ್ನು ನೀಡಲು ರಾಜ್ಯ ಸರ್ಕಾರಗಳನ್ನು ಪ್ರೋತ್ಸಾಹಿಸಲಾಗಿದೆ, ಹಾಗೂ ಪಂಚಾಯತ್‌ರಾಜ್ ಸಂಸ್ಥೆಗಳ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಬೆಂಬಲದೊಂದಿಗೆ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಸಕ್ರಿಯ ಹುಡುಕಾಟಕ್ಕಾಗಿ ಕ್ರಮಗಳನ್ನು ಕೈಗೊಳ್ಳುವುದು. ಪ್ರಾಯೋಜಕತ್ವ (ತಡೆಗಟ್ಟುವ ಸಲುವಾಗಿ ಮಾತ್ರ) ಹಾಗೂ ಫಾಸ್ಟರ್ ಕೇರ್ ನಿಧಿ ಪರಿಷ್ಕರಣೆ ಹಾಗೂ ಮಂಜೂರಾತಿಗಾಗಿ ಪ್ರತಿ ಜಿಲ್ಲೆಯಲ್ಲೂ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ (ಎಸ್‌ಎಫ್‌ಸಿಎಸಿ–SFCAC) ಇರಬೇಕು. ಸಾಂಸ್ಥಿಕೇತರ ಪೋಷಣೆಯು ಜೆಜೆ ಕಾಯ್ದೆ ಹಾಗೂ ಅದರಡಿಯ ನಿಯಮಾವಳಿಗಳಿಗೆ ಪೂರಕವಾಗಿರಬೇಕು.

### 4.1 ಪ್ರಾಯೋಜಕತ್ವ (Sponsorship):

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರ ಕಲಂ 2 (58)ರ ಪ್ರಕಾರ, ಪ್ರಾಯೋಜಕತ್ವವನ್ನು **"ಕುಟುಂಬಗಳಿಗೆ, ಮಗುವಿನ ವೈದ್ಯಕೀಯ, ಶೈಕ್ಷಣಿಕ ಹಾಗೂ ಅಭಿವೃದ್ಧಿಯ ಅಗತ್ಯಗಳನ್ನು ಪೂರೈಸಲು ಅಗತ್ಯವಿರುವ ಪೂರಕ ಬೆಂಬಲ, ಹಣಕಾಸು ಅಥವಾ ಇತರೆ ಸಹಕಾರ"** ಎಂದು ವ್ಯಾಖ್ಯಾನಿಸಲಾಗಿದೆ. ಪ್ರಾಯೋಜಕತ್ವ ಕಾರ್ಯಕ್ರಮದಡಿ, ಅಭಿಯಾನವು, ಮಗುವಿನ ಸಮರ್ಪಕ ಆರೈಕೆಗಾಗಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಜೈವಿಕ ಕುಟುಂಬಗಳು ಅಥವಾ ವಿಸ್ತೃತ ಕುಟುಂಬಗಳಿಗೆ ಪೂರಕವಾಗಿರುತ್ತದೆ. ಸಮುದಾಯದಲ್ಲಿ, ಸ್ಥಳಾಂತರಗೊಳ್ಳದೆ ತಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿಯೇ ಮಕ್ಕಳು ಬೆಳೆಯಲು ಅವಕಾಶ ಪಡೆಯುವುದನ್ನು ಖಾತ್ರಿಪಡಿಸಲು ಇದೊಂದು ಷರತ್ತುಬದ್ಧ ಸಹಾಯವಾಗಿದೆ.

#### 4.1.1 ಪ್ರಾಯೋಜಕತ್ವದ ವಿಧಗಳು

**ಪ್ರಾಯೋಜಕತ್ವದಡಿ ಒದಗಿಸುವ ಸಹಾಯಕ್ಕೆ ಅರ್ಹತಾ ಮಾನದಂಡ ಹಾಗೂ ಪ್ರಕ್ರಿಯೆ ಎರಡು ರೀತಿ ಇರುತ್ತವೆ:**

**ಎ – ಸರ್ಕಾರಿ ಅನುದಾನಿತ ಪ್ರಾಯೋಜಕತ್ವ**
**ಬಿ – ಖಾಸಗಿ ಅನುದಾನಿತ ಪ್ರಾಯೋಜಕತ್ವ**

**ಎ. ಸರ್ಕಾರಿ ಅನುದಾನಿತ ಪ್ರಾಯೋಜಕತ್ವ:**

ಈ ವಿಧದ ಪ್ರಾಯೋಜಕತ್ವದಲ್ಲಿ ಎರಡು ವರ್ಗಗಳಿರುತ್ತವೆ, ಅವುಗಳೆಂದರೆ ತಡೆಗಟ್ಟುವ ಹಾಗೂ ಪುನರ್ವಸತಿ ಕಲ್ಪಿಸುವ ಪ್ರಾಯೋಜಕತ್ವ

i. **ತಡೆಗಟ್ಟುವ:** ಸಂಕಷ್ಟಕ್ಕೆ ಈಡಾಗುವ ಸಂಭವವಿರುವ ಕುಟುಂಬಕ್ಕೆ, ಮಗು ಜೈವಿಕ ಕುಟುಂಬದಲ್ಲೇ (ವಿಸ್ತೃತ ಕುಟುಂಬ ಹಾಗೂ ರಕ್ತ ಸಂಬಂಧ ಒಳಗೊಂಡಂತೆ) ಮುಂದುವರೆಯಲು, ಆತ/ಆಕೆಯ ಶಿಕ್ಷಣವನ್ನು ಮುಂದುವರೆಸಲು ಪ್ರಾಯೋಜಕತ್ವ ಬೆಂಬಲ ಒದಗಿಸಲಾಗುವುದು. ಮಕ್ಕಳನ್ನು ನಿರ್ಗತಿಕರಾಗುವುದು, ಸಂಕಷ್ಟಕ್ಕೀಡಾಗುವುದು, ಓಡಿಹೋಗುವುದು, ಬಲವಂತದ ಬಾಲ್ಯವಿವಾಹ, ಬಾಲಕಾರ್ಮಿಕತೆ, ಇತ್ಯಾದಿಗಳಿಂದ ತಡೆಗಟ್ಟುವ ಪ್ರಯತ್ನ ಇದಾಗಿದೆ. ಸಾಮಾಜಿಕ ಕಾರ್ಯಕರ್ತರು, ಔಟ್‌ರೀಚ್ ಕಾರ್ಯಕರ್ತರು, ಸ್ವಯಂಸೇವಕರು ಹಾಗೂ ನಗರ ವಾರ್ಡ್ ಸಮಿತಿ/ ಗ್ರಾಮ ಪಂಚಾಯಿತಿಯ ಸಹಾಯದೊಂದಿಗೆ, ಡಿಸಿಪಿಯು, ಪ್ರಾಯೋಜತ್ವಕ್ಕಾಗಿ ಸಂಕಷ್ಟಕ್ಕೀಡಾಗುವ ಸಂಭವವಿರುವ ಕುಟುಂಬಗಳು ಅಥವಾ ಮಕ್ಕಳನ್ನು ಗುರುತಿಸಬೇಕು.

ii. **ಪುನರ್ವಸತಿ:** ಸಂಸ್ಥೆಗಳ ಒಳಗಿನ ಮಕ್ಕಳನ್ನೂ ಸಹ ಪ್ರಾಯೋಜಕತ್ವ ಸಹಾಯದೊಂದಿಗೆ ಕುಟುಂಬಗಳ ಜೊತೆಗೆ ಪುನರ್‌ಸ್ಥಾಪಿಸಬಹುದು. **ವೈಯಕ್ತಿಕ ಪೋಷಣಾ ಯೋಜನೆಯ ಆಧಾರದ ಮೇಲೆ,** ಪ್ರಾಯೋಜಕತ್ವ ನಿಧಿಯ ಮೂಲಕ ಪುನರ್ವಸತಿಗಾಗಿ ಸೂಕ್ತ ಪ್ರಕರಣವನ್ನು ಡಿಸಿಪಿಯುಗೆ ಶಿಫಾರಸ್ಸು ಮಾಡಲು ಸಂಸ್ಥೆ ಸಿಡಬ್ಲ್ಯೂಸಿ/ ಜೆಜೆಬಿಯನ್ನು ಕೋರಬಹುದು. ಇಂತಹ ಪುನರ್ವಸತಿಯು ನಿಕಟ ಕುಟುಂಬ, ವಿಸ್ತೃತ ಕುಟುಂಬ, ಮಗುವಿಗೆ ಗೊತ್ತಿರುವ ಕುಟುಂಬ, ನೆರೆಹೊರೆ/ ಸಮುದಾಯಕ್ಕೆ ಆದ್ಯತೆ ನೀಡಬಹುದು ಹಾಗೂ ನಂತರದಲ್ಲಿ ಸಂಬಂಧಿಕರಲ್ಲದ ಹಾಗೂ ಗೊತ್ತಿರದ ಫಾಸ್ಟರ್ ಕುಟುಂಬಗಳಿಗೆ ನೀಡಬಹುದು. ಈ ಪ್ರಕರಣಗಳನ್ನು ಪ್ರಾಯೋಜಕತ್ವ ನಿಧಿ ಮಂಜೂರಾತಿಗಾಗಿ ಡಿಸಿಪಿಯುಗೆ ಶಿಫಾರಸ್ಸು ಮಾಡುವ ಮುಂಚೆ ಸಿಡಬ್ಲ್ಯೂಸಿ/ ಜೆಜೆಬಿ ವತಿಯಿಂದ ಪರಿಷ್ಕರಿಸಲಾಗುತ್ತದೆ.

**ಬಿ. ಖಾಸಗಿ ಅನುದಾನಿತ ಪ್ರಾಯೋಜಕತ್ವ:**

ಖಾಸಗಿ ಅನುದಾನಿತ ಪ್ರಾಯೋಜಕತ್ವದಡಿ, ಆಸಕ್ತ ಪ್ರಾಯೋಜಕರು (ವ್ಯಕ್ತಿಗಳು, ಸಂಸ್ಥೆಗಳು/ಕಂಪನಿ/ ಬ್ಯಾಂಕ್‌ಗಳು/ ಕೈಗಾರಿಕಾ ಘಟಕಗಳು/ ಟ್ರಸ್ಟ್‌ಗಳು, ಇತ್ಯಾದಿ) ಈ ಕೆಳಕಂಡ ಉದ್ದೇಶಗಳಿಗೆ ಸಹಾಯ ಒದಗಿಸಬಹುದು:

i. **ವೈಯಕ್ತಿಕ ಪ್ರಾಯೋಜಕತ್ವ** – ಕುಟುಂಬ ಅಥವಾ ಸಂಸ್ಥೆಯ ಒಂದು ಅಥವಾ ಇಬ್ಬರು ಮಕ್ಕಳಿಗೆ ಹಣಕಾಸಿನ ಬೆಂಬಲದ ಮೂಲಕ ಸಹಾಯ.

ii. **ಗುಂಪು ಪ್ರಾಯೋಜಕತ್ವ** – ಸಂಸ್ಥೆಯಲ್ಲಿ ವಾಸಿಸುತ್ತಿರುವ ಒಂದಕ್ಕಿಂತ ಹೆಚ್ಚಿನ ಕುಟುಂಬಗಳ ಮಕ್ಕಳಿಗೆ (ಗರಿಷ್ಠ ಎಂಟು ಮಕ್ಕಳವರೆಗೆ) ಹಣಕಾಸಿನ ಬೆಂಬಲದ ಮೂಲಕ ಸಹಾಯ.

iii. **ಸಮುದಾಯ ಪ್ರಾಯೋಜಕತ್ವ** – ಸಮುದಾಯದ ಒಂದು ಅಥವಾ ಹೆಚ್ಚಿನ ಸಂಖ್ಯೆಯ ಕುಟುಂಬಗಳ ಎಂಟಕ್ಕಿಂತ ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಹಣಕಾಸಿನ ಬೆಂಬಲದ ಮೂಲಕ ಸಹಾಯ.

iv. **ಮಕ್ಕಳ ಪೋಷಣಾ ಸಂಸ್ಥೆಯ ಪ್ರಾಯೋಜಕತ್ವ** – ಮೂಲಸೌಕರ್ಯ ಬಲಪಡಿಸಲು, ಸೇವಾ ಗುಣಮಟ್ಟ ಸುಧಾರಣೆ, ಕೌಶಲ್ಯ ಅಭಿವೃದ್ಧಿ ಹಾಗೂ ವೃತ್ತಿಪರ ತರಬೇತಿ ಅವಕಾಶಗಳ ವಿಸ್ತರಣೆ, ಕೋಚಿಂಗ್ ತರಗತಿಗಳು, ವೈದ್ಯಕೀಯ ನೆರವು ಹಾಗೂ ಸೌಲಭ್ಯಗಳು, ಗ್ರಂಥಾಲಯ ಹಾಗೂ ಕಂಪ್ಯೂಟರ್ ಲ್ಯಾಬ್, ಇತ್ಯಾದಿಗಳಿಗಾಗಿ ಸಿಸಿಐಗೆ ಹಣಕಾಸಿನ ಬೆಂಬಲ.

ಜಿಲ್ಲಾ ದಂಡಾಧಿಕಾರಿಗಳು (ಜಿಲ್ಲಾಧಿಕಾರಿಗಳು) ಮಗು ಅಥವಾ ಮಕ್ಕಳ ಗುಂಪು ಅಥವಾ ಒಂದು ಸಂಸ್ಥೆಗೆ ಪ್ರಾಯೋಜಕತ್ವ ನೀಡಲು ವ್ಯಕ್ತಿಗಳು ಅಥವಾ ಸಾರ್ವಜನಿಕ/ ಖಾಸಗಿ ವಲಯದ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಕ್ರಮಗಳನ್ನು ಕೈಗೊಳ್ಳಬಹುದು. ಇಂತಹ ವ್ಯವಸ್ಥೆಗಳು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 ಹಾಗೂ ನಿಯಮಾವಳಿಗಳ ಪ್ರಕಾರ ಷರತ್ತುಗಳಿಗೆ ಬದ್ಧವಾಗಿರಬೇಕು. ಈ ರೀತಿ ಪಡೆಯುವ ಹಣವನ್ನು ಸಿಸಿಐನ ವಾರ್ಷಿಕ ಲೆಕ್ಕಪರಿಶೋಧನೆಯ ಜೊತೆಗೆ ಪ್ರತ್ಯೇಕವಾಗಿ ನಿರ್ವಹಿಸಬಹುದು, ಹಾಗೂ ವಿವರಗಳನ್ನು ಮಿಷನ್ ವಾತ್ಸಲ್ಯ ಪೋರ್ಟಲ್‌ನಲ್ಲಿ ಪ್ರಕಟಿಸಬೇಕು.

ರಾಜ್ಯ ಸರ್ಕಾರಗಳು ಜೆಜೆ ಕಾಯ್ದೆಯ, ಕಲಂ 105 ರಡಿಯ ಮಕ್ಕಳ ನ್ಯಾಯ ನಿಧಿ ಮೂಲಕ ಎಲ್ಲಾ ಖಾಸಗಿ ಪ್ರಾಯೋಜಕತ್ವ ನಿಧಿಗಳಿಗಾಗಿ ಅಗತ್ಯ ನಿಯಮಾವಳಿಗಳನ್ನು ಅನುಷ್ಠಾನಗೊಳಿಸಬಹುದು. ಖಾಸಗಿ ಪ್ರಾಯೋಜಕತ್ವದ ಹಣ ಸರ್ಕಾರ ನಿಗಧಿಪಡಿಸಿರುವ ನಿಯಮಕ್ಕಿಂತ ಕಡಿಮೆ ಇರುವಂತಿಲ್ಲ. ಪ್ರಾಯೋಜಕತ್ವದ ಅವಧಿ ಕನಿಷ್ಠ ಒಂದು ವರ್ಷ ಅಥವಾ ಮಗು 18 ವರ್ಷಗಳನ್ನು ಪೂರೈಸುವವರೆಗೂ ಇರುತ್ತದೆ.

### 4.1.2 ಪ್ರಾಯೋಜಕತ್ವದ ಮಾನದಂಡ

i. ತಾಯಿ ವಿಧವೆ ಅಥವಾ ವಿಚ್ಛೇದಿತೆ ಅಥವಾ ಕುಟುಂಬದಿಂದ ಪರಿತ್ಯಜಿಸಲ್ಪಟ್ಟಿದ್ದರೆ.

ii. ಮಕ್ಕಳು ಅನಾಥರಾಗಿದ್ದರೆ ಹಾಗೂ ವಿಸ್ತೃತ ಕುಟುಂಬದೊಡನೆ ಜೀವಿಸುತ್ತಿದ್ದರೆ.

iii. ಪೋಷಕರು ಜೀವಕ್ಕೆ ಬೆದರಿಕೆಯೊಡ್ಡುವ/ ಗಂಭೀರ ಸ್ವರೂಪದ ಖಾಯಿಲೆಯ ಸಂತ್ರಸ್ತರಾಗಿದ್ದರೆ.

iv. ಪೋಷಕರು ಅಶಕ್ತರಾಗಿದ್ದರೆ ಅಥವಾ ಮಕ್ಕಳನ್ನು ನೋಡಿಕೊಳ್ಳಲು ಆರ್ಥಿಕವಾಗಿ ಹಾಗೂ ದೈಹಿಕವಾಗಿ ಅಸಮರ್ಥರಾಗಿದ್ದರೆ.

v. ಜೆಜೆ ಕಾಯ್ದೆ, 2015ರ ಪ್ರಕಾರ ಮಕ್ಕಳು ಪೋಷಣೆ ಮತ್ತು ರಕ್ಷಣೆಯ ಅಗತ್ಯ ಹೊಂದಿದ್ದರೆ, ಅಂದರೆ ವಸತಿರಹಿತರು, ಯಾವುದಾದರೂ ನೈಸರ್ಗಿಕ ವಿಕೋಪಗಳ ಸಂತ್ರಸ್ತರು, ಬಾಲಕಾರ್ಮಿಕರು, ಬಾಲ್ಯವಿವಾಹದ ಸಂತ್ರಸ್ತರು, ಮಾನವ ಕಳ್ಳಸಾಗಣೆ ಸಂತ್ರಸ್ತರು, ಹೆಚ್‌ಐವಿ/ ಏಡ್ಸ್ ಪರಿಣಾಮ ಪೀಡಿತ ಮಗು, ವಿಶೇಷಚೇತನ ಮಗು, ತಪ್ಪಿಸಿಕೊಂಡಿರುವ ಅಥವಾ ಓಡಿಬಂದಿರುವ ಮಗು, ಬಾಲ ಭಿಕ್ಷುಕರು ಅಥವಾ ಬೀದಿಯಲ್ಲಿ ವಾಸಿಸುತ್ತಿದ್ದರೆ, ಬೆಂಬಲ ಹಾಗೂ ಪುನರ್ವಸತಿಯ ಅಗತ್ಯವಿರುವಂತಹ ಹಿಂಸೆಗೆ ಒಳಪಟ್ಟ ಅಥವಾ ನಿಂದನೆ ಅಥವಾ ಶೋಷಿತ ಮಕ್ಕಳು.

vi. ಪಿಎಂ ಕೇರ್ಸ್ ಫಾರ್ ಚಿಲ್ಡ್ರನ್ ಯೋಜನೆಯಡಿ ಬರುವಂತಹ ಮಕ್ಕಳು.

#### 4.1.3 ತಡೆಗಟ್ಟುವ ಪ್ರಾಯೋಜಕತ್ವಕ್ಕಾಗಿ ಆರ್ಥಿಕ ಮಾನದಂಡ

ತಡೆಗಟ್ಟುವ ಪ್ರಾಯೋಜಕತ್ವಕ್ಕಾಗಿ, ವಾಸಿಸುತ್ತಿರುವ ಬಡಾವಣೆ, ಸಾಮಾಜಿಕ ಕೊರತೆ ಹಾಗೂ ವೃತ್ತಿ ಈ ಅಂಶಗಳನ್ನು ಆಧರಿಸಿರುವ **"ಅಧಿಕೃತ ಮಾನದಂಡಗಳ"** ನ್ನು ಆಧರಿಸಿದ ಗಂಭೀರ ಸ್ವರೂಪದ ಕೊರತೆಗಳ ಸನ್ನಿವೇಶಗಳಲ್ಲಿರುವ, ಮಕ್ಕಳನ್ನು ಆಯ್ಕೆ ಮಾಡಬೇಕು. ಇಂತಹ ಮಕ್ಕಳ ಕುಟುಂಬಗಳ ಆದಾಯ

a. ಗ್ರಾಮೀಣ ಪ್ರದೇಶಗಳಾದರೆ **ವಾರ್ಷಿಕ ರೂ.72,000/–**ಕ್ಕಿಂತ ಹೆಚ್ಚಾಗಿರಬಾರದು

b. ಇತರೆ ಪ್ರದೇಶಗಳಾದರೆ **ವಾರ್ಷಿಕ ರೂ.96,000/–**ಕ್ಕಿಂತ ಹೆಚ್ಚಾಗಿರಬಾರದು.

#### 4.1.4 ಪ್ರಾಯೋಜಕತ್ವದ ಅವಧಿ

ಮಕ್ಕಳ ನ್ಯಾಯ ಮಂಡಳಿ, ಮಕ್ಕಳ ಕಲ್ಯಾಣ ಸಮಿತಿ, ಹಾಗೂ/ಅಥವಾ ಮಕ್ಕಳ ನ್ಯಾಯಾಲಯದ ವತಿಯಿಂದ ದಾಖಲಿಸಲಾಗುವ ಕಾರಣಗಳನ್ನು ಆಧರಿಸಿ ಪ್ರಾಯೋಜಕತ್ವದ ಅವಧಿ 18 ವರ್ಷಗಳವರೆಗೂ ವಿಸ್ತರಣೆ ಮಾಡಬಹುದು. ಪ್ರಾಯೋಜಕತ್ವ ಬೆಂಬಲದ ಅವಧಿ ಮಿಷನ್ ವಾತ್ಸಲ್ಯ ಮಿಷನ್ ಯೋಜನೆಯ ಅಂತ್ಯ ಅಥವಾ ಗುರಿ ತಲುಪುವವರೆಗೂ (co-terminus) ಇರಬಹುದು.

ಕುಟುಂಬವನ್ನು ಆರ್ಥಿಕವಾಗಿ ಸಬಲಗೊಳಿಸಲು ಹಾಗೂ ಮಗುವನ್ನು ತೃಪ್ತಿಕರವಾದ ರೀತಿಯಲ್ಲಿ ಪೋಷಿಸಲು ಸಮರ್ಥವಾಗುವವರೆಗೂ ಎಲ್ಲಾ ಪ್ರಯತ್ನಗಳನ್ನೂ ಕೈಗೊಳ್ಳುವುದು. ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ (ಎಸ್ಎಫ್‌ಸಿಎಸಿ) ಕಾಲಕಾಲಕ್ಕೆ ಎಲ್ಲಾ ಪ್ರಾಯೋಜಕತ್ವ ಪ್ರಕರಣಗಳ ಪರಿಷ್ಕರಣೆ ಮಾಡುವುದು.

**ಪ್ರಾಯೋಜಕತ್ವ ಕಾರ್ಯಕ್ರಮದಡಿ ನಿಧಿ ಮಂಜೂರಾತಿ ಹಾಗೂ ಬಿಡುಗಡೆ ಕಾರ್ಯಕ್ರಮ:**

a) ಸಾಂಸ್ಥಿಕ ಆರೈಕೆಯಲ್ಲಿರುವ ಮಗುವಿನ ಪ್ರಾಯೋಜಕತ್ವ ಬೆಂಬಲದ ಕೋರಿಕೆಯನ್ನು ಡಿಸಿಪಿಯು ಅಥವಾ ಮಗುವಿನ ಕುಟುಂಬ ಮಿಷನ್ ವಾತ್ಸಲ್ಯ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
b) ಡಿಸಿಪಿಯು ಪ್ರತಿ ತ್ರೈಮಾಸಿಕ ಅವಧಿಯ ಮೊದಲ ವಾರದಲ್ಲಿ ಅಥವಾ ಬಂದಿರುವ ಕೋರಿಕೆಗಳನ್ನು ಪರಿಗಣಿಸಿ, ಅದರ ಅಗತ್ಯದ ಪ್ರಕಾರ ಎಸ್ಎಫ್‌ಸಿಎಸಿ–SFCAC ಸಭೆಯನ್ನು ಆಯೋಜಿಸಬೇಕು
c) ಅನಾಥ, ಪರಿತ್ಯಜಿಸಲ್ಪಟ್ಟ ಅಥವಾ ಒಪ್ಪಿಸಲ್ಪಟ್ಟ ಮಕ್ಕಳಿಗೆ, ಒಂದು ವೇಳೆ ಅವರು ದತ್ತು ಹೋಗಲು ಕಾನೂನು ಪ್ರಕಾರವಾಗಿ ಮುಕ್ತವಾಗಿರದಿದ್ದರೆ, ಅಥವಾ ಆರು ತಿಂಗಳೊಳಗೆ ದತ್ತುಗೆ ಒಳಪಡದಿದ್ದರೆ, ಪ್ರಾಯೋಜಕತ್ವವನ್ನು ಪರಿಗಣನೆಯ ಮೇರೆಗೆ ಆದ್ಯತೆ ನೀಡಬೇಕು.
d) ಸಮಿತಿಯು ಡಿಸಿಪಿಯು ಮೂಲಕ ಜಿಲ್ಲಾಧಿಕಾರಿಗಳಿಗೆ ಅರ್ಹ ಮಕ್ಕಳನ್ನು ಶಿಫಾರಸ್ಸು ಮಾಡುವುದು.
e) ಮಕ್ಕಳ ಕಲ್ಯಾಣ ಸಮಿತಿಯ ಶಿಫಾರಸ್ಸನ್ನು ಆಧರಿಸಿ ಜಿಲ್ಲಾಧಿಕಾರಿಗಳು ಅನುಮೋದನೆ ನೀಡಬೇಕು ಅಥವಾ ಪ್ರಕರಣಗಳನ್ನು ಪುನರ್‌ಮನನಕ್ಕಾಗಿ ಉಲ್ಲೇಖಿಸಬಹುದು.
f) ಸಮಿತಿಯು ಜಿಲ್ಲಾಧಿಕಾರಿಗಳ ಅವರ ಅವಲೋಕನಗಳನ್ನು ಪರಿಷ್ಕರಿಸಿ, ಪ್ರತಿಕ್ರಿಯಿಸಬಹುದು.
g) ಜಿಲ್ಲಾಧಿಕಾರಿಗಳ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಬಹುದು ಅಥವಾ ತಿರಸ್ಕರಿಸಬಹುದು.
h) ಡಿಸಿಪಿಓ ಮಗುವಿನ ಹೆಸರಿನಲ್ಲಿ ಷೆಡ್ಯೂಲ್ಡ್ ಬ್ಯಾಂಕ್/ ಅಂಚೆ ಕಚೇರಿಯಲ್ಲಿ ಖಾತೆಯನ್ನು ತೆರೆಯವುದು, ಆ ಖಾತೆಯನ್ನು ಮಗುವಿನ ಪಾಲಕರು, ಆದ್ಯತೆಯ ಮೇರೆಗೆ ತಾಯಿ ನಿರ್ವಹಿಸಬೇಕು.
i) ಸೂಕ್ತ ಸಮರ್ಥನೆಯೊಂದಿಗೆ, ಸಾಂಸ್ಥಿಕೇತರ ಆರೈಕೆಗಾಗಿ ಡಿಸಿಪಿಓ ಆಯವ್ಯಯ ಹಂಚಿಕೆಗಾಗಿ ಎಸ್‌ಸಿಪಿಎಸ್‌ಗೆ ಕೋರಿಕೆ ಸಲ್ಲಿಸಬೇಕು.

j) ಈ ಹಂಚಿಕೆಯನ್ನು, ಜಿಲ್ಲಾ ಮಟ್ಟದಲ್ಲಿ ಮಿಷನ್‌ಗಾಗಿ ತೆರೆಯಲ್ಪಟ್ಟಿರುವ ಸಿಂಗಲ್ ನೋಡಲ್ ಖಾತೆಗೆ ವರ್ಗಾಯಿಸಬೇಕು.

k) ಮಿಷನ್ ಖಾತೆಯಿಂದ ಮಕ್ಕಳ ಖಾತೆಗೆ ಹಣ ಬಿಡುಗಡೆ ಮಾಡಲು ಅನುಮತಿ ನೀಡಲು ಜಿಲ್ಲಾಧಿಕಾರಿಗಳು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ.

l) ಒಮ್ಮೆ ಮಂಜೂರು ಮಾಡಿದ ನಂತರ, ಹಣವನ್ನು ಮಗುವಿನ ಖಾತೆಗೆ ಪ್ರತಿ ತಿಂಗಳು ಕ್ರೆಡಿಟ್ ಮಾಡಬೇಕು.

m) ಡಿಸಿಪಿಯು, ಜಿಲ್ಲೆಯ ಸರ್ಕಾರಿ ಆಸ್ಪತ್ರೆ/ ಜಿಲ್ಲಾ ವೈದ್ಯಕೀಯ ಅಧಿಕಾರಿ/ ಸಿವಿಲ್ ಸರ್ಜನ್ ವತಿಯಿಂದ ಮಗುವಿನ ವಾರ್ಷಿಕ ಆರೋಗ್ಯ ತಪಾಸಣೆಗಳನ್ನು ಕೈಗೊಳ್ಳಬೇಕು ಹಾಗೂ ಶಾಲಾ ವಿಚಾರಣಾ ವರದಿಯನ್ನು, ಪ್ರಾಯೋಜಕತ್ವ ಸಹಾಯದ ಪುನರ್‌ಮನನ ಹಾಗೂ ವಿಸ್ತರಣೆಗಾಗಿ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿಯ ಮುಂದೆ ಡಿಸಿಪಿಯುನ ಔಟ್‌ರೀಚ್ ಕಾರ್ಯಕರ್ತರು ಅಥವಾ ಸಾಮಾಜಿಕ ಕಾರ್ಯಕರ್ತರ ಮೂಲಕ ಒಪ್ಪಿಸಬೇಕು.

n) ಪ್ರಾಯೋಜಕತ್ವದ ಬೆಂಬಲದ ಅವಧಿಯನ್ನು ಪ್ರಕರಣವನ್ನು ಆಧರಿಸಿ, ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ ನಿರ್ಧರಿಸಬೇಕು, ಹಾಗೂ 2025–26ರವರೆಗೂ ವಿಸ್ತರಣೆಯಾಗಬಹುದು.

o) ಮಕ್ಕಳು ಹಾಗೂ ಕುಟುಂಬಗಳ ಮೇಲ್ವಿಚಾರಣೆಯನ್ನು ಡಿಸಿಪಿಯು ಕೈಗೊಳ್ಳಬೇಕು ಹಾಗೂ ಇದರಲ್ಲಿ ತ್ರೈಮಾಸಿಕ ಅವಧಿಯ ಮನೆ ಹಾಗೂ ಶಾಲಾ ಭೇಟಿಗಳು ಒಳಗೊಂಡಿರಬೇಕು.

p) ಯಾವುದಾದರೂ ಹಂತದಲ್ಲಿ ಮಗುವನ್ನು ಸಾಂಸ್ಥಿಕ ಆರೈಕೆಗೆ ಒಪ್ಪಿಸುವ ಅಗತ್ಯ ಎದುರಾದರೆ ಪ್ರಾಯೋಜಕತ್ವ ಸಹಾಯವನ್ನು ನಿಲ್ಲಿಸಬೇಕು.

q) ವಿಶೇಷ ಅಗತ್ಯಗಳಿರುವ ಮಗುವನ್ನು ಹೊರತುಪಡಿಸಿದಂತೆ, ಶಾಲೆಗೆ ಹೋಗುತ್ತಿರುವ ಮಗು 30 ದಿನಗಳಿಗಿಂತ ಹೆಚ್ಚಿನ ಸಮಯದವರೆಗೆ ಶಾಲೆಗೆ ಹಾಜರಾಗದಿರುವುದು ಕಂಡು ಬಂದರೆ, ಪ್ರಾಯೋಜಕತ್ವ ಸಹಾಯವನ್ನು ಪರಿಷ್ಕರಣೆ ಮಾಡುವುದು ಹಾಗೂ ವಜಾಗೊಳಿಸಲಾಗುವುದು.

### 4.2 ಫಾಸ್ಟರ್ ಕೇರ್ (ಪೋಷಕತ್ವ)–Foster Care:

ಜೆಜೆ ಕಾಯ್ದೆ, 2015 ಹಾಗೂ ನಿಯಮಾವಳಿಗಳಲ್ಲಿ ವಿವರಿಸಿರುವಂತೆ ಫಾಸ್ಟರ್ ಕೇರ್, ಅಂದರೆ ಮಗುವನ್ನು ಒಂದು ಕೌಟುಂಬಿಕ ಪರಿಸರದಲ್ಲಿ ಪರ್ಯಾಯ ಆರೈಕೆಗಾಗಿ ಇರಿಸುವುದು, ಸಾಮಾನ್ಯವಾಗಿ ಅಲ್ಪಾವಧಿಗೆ ಅಥವಾ ವಿಸ್ತೃತ ಅವಧಿಯವರೆಗೆ. ಪೋಷಣೆ ಮತ್ತು ರಕ್ಷಣೆಯ ಉದ್ದೇಶಕ್ಕಾಗಿ ಸಂಬಂಧವಿರದ ಕುಟುಂಬದ ಸದಸ್ಯರೊಂದಿಗೆ ಒಂದು ಮಗುವನ್ನು ಫಾಸ್ಟರ್ ಕೇರ್‌ನಲ್ಲಿ ಇರಿಸುವಾಗ, ಒಂದೇ ರೀತಿಯ ಸಂಸ್ಕೃತಿ, ಬುಡಕಟ್ಟು ಅಥವಾ ಸಮುದಾಯ ಸಂಪರ್ಕವನ್ನು ಹೊಂದಿರುವಂತಹ ಕುಟುಂಬಗಳಿಗೆ ಆದ್ಯತೆ ನೀಡಬೇಕು. ಫಾಸ್ಟರ್ ಕೇರ್, ಸಮೂಹ ಫಾಸ್ಟರ್ ಮಿಷನ್ ವಾತ್ಸಲ್ಯ ಮಾರ್ಗಸೂಚಿಗಳನ್ನು ಒಳಗೊಂಡಿರಬೇಕು. ಅದರ ಪ್ರಕಾರವಾಗಿ ಸಂಬಂಧವಿರದ ಮಕ್ಕಳ ಗುಂಪನ್ನು, ಸ್ವಂತ ಮಕ್ಕಳು ಇರುವ ಅಥವಾ ಇಲ್ಲದಿರುವಂತಹ ಕುಟುಂಬ ರೀತಿಯ ವಾತಾವರಣದಲ್ಲಿ ಫಾಸ್ಟರ್ ಕುಟುಂಬ ಅಥವಾ ಫಾಸ್ಟರ್ ಕೇರ್ ಒದಗಿಸುವವರ ಪೋಷಣೆಗೆ ಒಪ್ಪಿಸಲಾಗುವುದು. ಗುಂಪು ಫಾಸ್ಟರ್ ಕೇರ್ ಅನ್ನು, ಪೋಷಕರ ಪೋಷಣೆ ಇಲ್ಲದಿರುವಂತಹ, ಪೋಷಣೆ ಹಾಗೂ ರಕ್ಷಣೆ ಅಗತ್ಯವಿರುವಂತಹ ಮಕ್ಕಳಿಗಾಗಿ ಫಿಟ್ ಸೌಲಭ್ಯದಲ್ಲಿನ ಕುಟುಂಬದ ರೀತಿಯ ಪೋಷಣೆ ಎಂದು ವ್ಯಾಖ್ಯಾನಿಸಲಾಗಿದೆ.

ಸಮಿತಿ ಪರಿಗಣಿಸುವಂತಹ 0 ಇಂದ 6 ವರ್ಷ ವಯಸ್ಸಿನ ಮಕ್ಕಳನ್ನು ಕಾನೂನು ರೀತಿಯಾಗಿ ದತ್ತುಗೆ ಮುಕ್ತವಾಗಿರುವವರು ಎಂದು ಘೋಷಿಸಬೇಕು ಹಾಗೂ ದತ್ತುಗೆ ಕಾನೂನಾತ್ಮಕವಾಗಿ ಮುಕ್ತವಾಗಿದ್ದಾರೆ ಎಂದು ಘೋಷಿಸಲ್ಪಟ್ಟಿರುವ ಮಕ್ಕಳನ್ನು ಸಾಧ್ಯವಾದಷ್ಟೂ ಫಾಸ್ಟರ್ ಕೇರ್‌ನಲ್ಲಿ ಇರಿಸಲು ಪರಿಗಣಿಸಬಾರದು. ಇಂತಹ ಮಕ್ಕಳಿಗೆ ದತ್ತು ನಿಬಂಧನೆಗಳ ಪ್ರಕಾರ ದತ್ತು ನೀಡುವ ಮೂಲಕ ಖಾಯಂ ಕುಟುಂಬವನ್ನು ಒದಗಿಸಬೇಕು. ಫಾಸ್ಟರ್ ಕೇರ್ ಅಡಿ ಎದುರಾಗುವ ಸನ್ನಿವೇಶಗಳನ್ನು ಒದಗಿಸುವುದು, ಸಿಡಬ್ಲ್ಯೂಸಿ ಮುಂದೆ ಹಾಜರುಪಡಿಸುವ ವೈಯಕ್ತಿಕ ಪ್ರಕರಣದ ಅಂದಾಜಿಸುವಿಕೆಯನ್ನು (assessment) ಆಧರಿಸಿ ಇರುತ್ತದೆ.

### 4.2.1 ಫಾಸ್ಟರ್ ಕೇರ್‌ನ (ಪೋಷಕತ್ವ) ಅವಧಿ:

i. ಅಲ್ಪಾವಧಿಗಾಗಿ ಫಾಸ್ಟರ್ ಕೇರ್ ಎಂದರೆ ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗಲ್ಲ.

ii. ಒಂದು ಮಗುವಿನ ಹೆಚ್ಚಿನ ಸಮಯದವರೆಗೆ ಫಾಸ್ಟರ್ ಕೇರ್, ಅಂದರೆ ಒಂದು ವರ್ಷಕ್ಕಿಂತಲೂ ಹೆಚ್ಚಿನ ಸಮಯದವರೆಗೆ ಫಾಸ್ಟರ್ ಕೇರ್ ಒದಗಿಸುವ ನಿರ್ಧಾರವನ್ನು ಸಮಿತಿ ನಿರ್ಧರಿಸಬೇಕು. ಅಲ್ಪಾವಧಿ ಅಥವಾ ದೀರ್ಘಾವಧಿ ಯಾವುದಾದರೂ ಫಾಸ್ಟರ್ ಕೇರ್ ಪೋಷಕರೊಂದಿಗೆ ಮಗು ಸರಿಹೊಂದಿಕೊಳ್ಳುವ ಕುರಿತಾದ ಅಂದಾಜಿಸುವಿಕೆಯನ್ನು (ಕುಟುಂಬದೊಂದಿಗೆ ಹೊಂದಿಕೊಳ್ಳುವ ಪರಿಶೀಲನೆ ಅಥವಾ ನಿರ್ಧಾರವನ್ನು) ಆಧರಿಸಿ ಇರುತ್ತದೆ. ಈ ಅವಧಿಯನ್ನು ಸಮಿತಿಯು ಕ್ರಮೇಣ ಮಗು 18 ವರ್ಷ ತಲುಪುವವರೆಗೂ ವಿಸ್ತರಿಸಬಹುದು.

### 4.2.2 ಫಾಸ್ಟರ್ ಕೇರ್ (ಪೋಷಕತ್ವ) ಗಾಗಿ ಅರ್ಹ ಮಕ್ಕಳು:

i. ಎರಡು ವರ್ಷಗಳಿಗಿಂತ ಹೆಚ್ಚಿನ ಸಮಯದವರೆಗೆ ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ ವಾಸಿಸುತ್ತಿರುವ 6–18 ವರ್ಷ ವಯೋಮಾನದ ಮಕ್ಕಳು ಹಾಗೂ ದತ್ತುಗೆ ಕಾನೂನುಬದ್ಧವಾಗಿ ಮುಕ್ತವಾಗಿರದಿರುವಂತಹ ಮಕ್ಕಳನ್ನು ಸಂಸ್ಥೆಯಲ್ಲಿ ಅಭಿವೃದ್ಧಿಪಡಿಸಿರುವ ವೈಯಕ್ತಿಕ ಪೋಷಣಾ ಯೋಜನೆಯನ್ನು ಆಧರಿಸಿ ಫಾಸ್ಟರ್ ಕೇರ್‌ನಲ್ಲಿ ಇರಿಸಬಹುದು.

ii. ಮಕ್ಕಳ ಪೋಷಕರು ಗಂಭೀರವಾದ ಖಾಯಿಲೆ ಇದ್ದರೆ ಹಾಗೂ, ಅವರಿಗೆ ಅವರ ಮಗುವನ್ನು ನೋಡಿಕೊಳ್ಳುವುದು ಸಾಧ್ಯವಿಲ್ಲ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಸಮಿತಿಗೆ ಜವಾಬ್ದಾರಿ ವಹಿಸಿಕೊಟ್ಟಿರುವ ಪೋಷಕರಿದ್ದರೆ, ಅಂತಹ ಸನ್ನಿವೇಶದಲ್ಲಿ ಅಂತಹ ಮಕ್ಕಳನ್ನು ಆದ್ಯತೆಯ ಮೇರೆಗೆ ಫಾಸ್ಟರ್ ಕೇರ್‌ಗೆ ಒಪ್ಪಿಸಬಹುದು.

iii. ಜೆಜೆ ಕಾಯ್ದೆ ಪ್ರಕಾರ, ಮನೆ ಇಲ್ಲದಿರುವಂತಹ, ಯಾವುದಾದರೂ ರೂಪದ ನೈಸರ್ಗಿಕ ವಿಕೋಪದ ಸಂತ್ರಸ್ತರು, ಬಾಲಕಾರ್ಮಿಕರು, ಬಾಲ್ಯವಿವಾಹದ ಸಂತ್ರಸ್ತರು, ಮಾನವ ಕಳ್ಳ ಸಾಗಣಿಕೆಗೆ ಒಳಪಟ್ಟ ಮಗು, ಹೆಚ್‌ಐವಿ/ ಏಡ್ಸ್ ಪೀಡಿತ ಮಗು, ವಿಶೇಷಚೇತನ ಮಗು, ತಪ್ಪಿಸಿಕೊಂಡಿರುವ ಅಥವಾ ಓಡಿಬಂದಿರುವ ಮಗು, ಭಿಕ್ಷಾಟನೆ ಮಾಡುತ್ತಿರುವ ಮಗು ಅಥವಾ ಬೀದಿಯಲ್ಲಿರುವ ಮಗು, ಬೆಂಬಲ ಹಾಗೂ ಪುನರ್ವಸತಿಯ ಅಗತ್ಯವಿರುವ ನಿಂದನೆಗೊಳಪಟ್ಟ ಅಥವಾ ಶೋಷಿತ ಮಕ್ಕಳು ಒಳಗೊಂಡಂತೆ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳು.

### 4.2.3 ಫಾಸ್ಟರ್ ಕುಟುಂಬದ ( ಪೋಷಕ ಕುಟುಂಬ) ಆಯ್ಕೆಯ ಮಾನದಂಡ:

ಡಿಸಿಪಿಯು ವತಿಯಿಂದ ಫಾಸ್ಟರ್ ಕುಟುಂಬದ ಆಯ್ಕೆ ಪ್ರಕ್ರಿಯೆ ಹಾಗೂ ಮಾನದಂಡ ಮತ್ತು ಸಿಡಬ್ಲ್ಯೂಸಿ ವತಿಯಿಂದ ತಪಾಸಣೆಯ ಪ್ರಕ್ರಿಯೆ ಹಾಗೂ ಮಾನದಂಡಗಳು ಕಾಲಕಾಲಕ್ಕೆ ತಿದ್ದುಪಡಿ ಮಾಡಿರುವಂತೆ ಮಕ್ಕಳ ನ್ಯಾಯ ನಿಬಂಧನೆಗಳು, 2016ರ ನಿಯಮ 23 ರಡಿಯಲ್ಲಿ ವಿವರಿಸಲಾಗಿದೆ.

**ಡಿಸಿಪಿಯು ವತಿಯಿಂದ ಫಾಸ್ಟರ್ ಕುಟುಂಬಗಳ ಗುರುತಿಸುವಿಕೆ:**

i. ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು) ಮಕ್ಕಳ ಫಾಸ್ಟರ್ ಕೇರ್ ತೆಗೆದುಕೊಳ್ಳಲು ಬಯಸುವ ಕುಟುಂಬಗಳು ಅವರ ಆದ್ಯತೆಯ ಮಗುವಿನ ವಿವರಗಳ ಜೊತೆಗೆ ಗುರುತಿಸಬೇಕು. ಈ ಉದ್ದೇಶಕ್ಕಾಗಿ, ಡಿಸಿಪಿಯು ಕೌಟುಂಬಿಕ ಫಾಸ್ಟರ್ ಕೇರ್‌ಗಾಗಿ (ಪೋಷಕತ್ವ ನೀಡಲು ಸಿದ್ಧರಿರುವ ಕುಟುಂಬಕ್ಕಾಗಿ) ಸ್ಥಳೀಯ ದಿನಪತ್ರಿಕೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸುವ ಜಾಹೀರಾತನ್ನು ಪ್ರಕಟಿಸಬಹುದು.

ii. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಮಾನದಂಡವನ್ನು ಆಧರಿಸಿ ಅರ್ಜಿಗಳನ್ನು ಆಯ್ಕೆ ಮಾಡಿ, ಫಾಸ್ಟರ್ ಕುಟುಂಬಗಳೊಂದಿಗೆ ಸಂದರ್ಶನಗಳನ್ನು ನಡೆಸುವುದು. ಇದು ಸಂಭವನೀಯ ಫಾಸ್ಟರ್ ಕುಟುಂಬವನ್ನು ಅಂದಾಜಿಸಲು ನೆರವಾಗುತ್ತದೆ.

iii. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಪ್ರತಿ ಫಾಸ್ಟರ್ ಕುಟುಂಬ ಒದಗಿಸಿರುವ, ಸಮುದಾಯದಲ್ಲಿ ಒಳ್ಳೆಯ ಹೆಸರಿರುವ ವ್ಯಕ್ತಿಗಳು (References) ಒದಗಿಸಿರುವ ಎರಡು ಉಲ್ಲೇಖಗಳನ್ನು ಸಂಪರ್ಕಿಸುವ ಮೂಲಕ ಸಹ ಪರಿಶೀಲಿಸಬೇಕು.

iv. ಡಿಸಿಪಿಯು, ಸಂಭವನೀಯ ಫಾಸ್ಟರ್ ಕುಟುಂಬದ ಮೌಲ್ಯಮಾಪನವನ್ನು ಮಾಡುವಾಗ, ಮಗುವಿನ ಎಲ್ಲಾ ಅಗತ್ಯಗಳನ್ನೂ ಸಹ ಪೂರೈಸಲು ಸಮರ್ಥರಾಗಿದ್ದಾರೆಯೇ? ಹಾಗೂ ಮಗುವಿನ ನಿರ್ವಹಣೆಗಾಗಿ ಫಾಸ್ಟರ್ ಕೇರ್‌ನ ಹಣ ಸಹಾಯದ ಅಗತ್ಯ ಇಲ್ಲದಿರುವುದನ್ನು ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಅವರ ಆರ್ಥಿಕ ಸ್ಥಿತಿಗತಿಯನ್ನು ಸರಿಯಾಗಿ ಪರಿಶೀಲಿಸಬೇಕು; ಒಂದು ವೇಳೆ ಇತರೆ ಎಲ್ಲಾ ಮನದಂಡಗಳನ್ನೂ ಪೂರೈಸಿ ಕೇವಲ ಹಣಕಾಸಿನ ಬೆಂಬಲ ಮಾತ್ರ ಅಗತ್ಯವಿದ್ದರೆ, ಹಾಗೂ ಪರ್ಯಾಯ ಮಾರ್ಗಗಳು ಇಲ್ಲದಿದ್ದರೆ, ಸಿಡಬ್ಲ್ಯೂಸಿಯ ಅಂತಿಮ ಆದೇಶದ ನಂತರ ಪ್ರಕರಣವನ್ನು ಜಿಲ್ಲೆಯಲ್ಲಿ ಈ ಉದ್ದೇಶಕ್ಕಾಗಿ ರಚಿಸಲ್ಪಟ್ಟಿರುವ ಸಮಿತಿಗೆ ಶಿಫಾರಸ್ಸು ಮಾಡಬೇಕು. ವಿಶೇಷವಾಗಿ ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ಪ್ರಕರಣಗಳಲ್ಲಿ ಅಗತ್ಯವಿದ್ದರೆ ಹಣಕಾಸಿನ ಬೆಂಬಲವನ್ನು ಒದಗಿಸಬಹುದು.

v. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಸಂಭವನೀಯ ಫಾಸ್ಟರ್ ಕುಟುಂಬಗಳು ಪ್ರತಿ ವರ್ಷ ಒದಗಿಸಲು ಬಯಸಿರುವ ಫಾಸ್ಟರ್ ಕೇರ್ ವಿಧದ ವಿವರಗಳ ಕುರಿತ ರೋಸ್ಟರ್/ ಪ್ಯಾನೆಲ್ ಅನ್ನು ನಿರ್ವಹಿಸಬೇಕು. ಅದನ್ನು ಫಾಸ್ಟರ್ ಕೇರ್‌ನಲ್ಲಿ ಮಕ್ಕಳನ್ನು ಇರಿಸಲು ಮಕ್ಕಳ ಕಲ್ಯಾಣ ಸಮಿತಿಗೆ ಕಳುಹಿಸಬೇಕು.

vi. ಮಗುವನ್ನು ಫಾಸ್ಟರ್ ಕೇರ್‌ಗೆ ಒಪ್ಪಿಸಲು ಡಿಸಿಪಿಯು ಅಗತ್ಯ ಸಿದ್ಧತೆಯನ್ನು ಕೈಗೊಳ್ಳಬೇಕು ಹಾಗೂ ಫಾಸ್ಟರ್ ಪೋಷಕ ಹಾಗೂ ಫಾಸ್ಟರ್ ಮಗುವನ್ನು ಸರಿಹೊಂದಿಸುವ ಪ್ರಕ್ರಿಯೆಯನ್ನು ಕೈಗೊಳ್ಳಬೇಕು ಮತ್ತು ಸಂಬಂಧಪಟ್ಟ ವರದಿಯನ್ನು ಸಿದ್ಧಪಡಿಸಬೇಕು. ಈ ವರದಿಗಳನ್ನು ಡಿಸಿಪಿಯು ಸರಿಹೊಂದಿಸುವ ಪ್ರಕ್ರಿಯೆಯ ಸಮಯದಲ್ಲಿ ತುಂಬಬೇಕು ಹಾಗೂ ಸರಿಹೊಂದಿದ ವಿವರಗಳಿರುವ ಲಿಖಿತ ಪತ್ರದೊಂದಿಗೆ ಸಿಡಬ್ಲ್ಯೂಸಿಗೆ ಸಲ್ಲಿಸಬೇಕು.

**ಫಾಸ್ಟರ್ ಕೇರ್ ಕಾರ್ಯಕ್ರಮದಡಿ ಹಣ ಮಂಜೂರಾತಿ ಹಾಗೂ ಬಿಡುಗಡೆಯ ವಿಧಾನ:**

i. ಮಗುವನ್ನು ನೋಡಿಕೊಳ್ಳಲು ಅಪೇಕ್ಷಿಸುವ ದಂಪತಿಗಳು/ ಕುಟುಂಬಗಳು ನಿಗದಿತ ನಮೂನೆಯಲ್ಲಿ ಡಿಸಿಪಿಯುಗೆ ಅರ್ಜಿ ಸಲ್ಲಿಸುವುದು.

ii. ಡಿಸಿಪಿಯು ಸಾಮಾಜಿಕ ಕಾರ್ಯಕರ್ತರ ಮೂಲಕ ಆ ಕುಟುಂಬದ ಮನೆಯ ವರದಿಯನ್ನು ಸಿದ್ಧಪಡಿಸಬೇಕು ಹಾಗೂ ಪೊಲೀಸರ ಮೂಲಕ ಕುಟುಂಬಸ್ಥರ ತಪಾಸಣೆಯನ್ನು ಕೈಗೊಳ್ಳಬೇಕು. ಕುಟುಂಬದ ಆರ್ಥಿಕ ಹಾಗೂ ಶೈಕ್ಷಣಿಕ ಹಿನ್ನೆಲೆಯನ್ನೂ ಸಹ ಪರಿಗಣಿಸಬೇಕು.

iii. ಒಂದು ಮಗುವಿನ ಪೋಷಣೆಯ ಜವಾಬ್ದಾರಿಗಳನ್ನು ಕುಟುಂಬದ ಸದಸ್ಯರಿಗೆ ಆಪ್ತಸಮಾಲೋಚನೆ ಮೂಲಕ ವಿವರಿಸಬೇಕು. ಹಾಗೂ ಆ ಮೂಲಕ ಕುಟುಂಬಗಳು ಮಗುವಿನ ಪೋಷಣೆಗೆ ಅರ್ಹರಾಗಿದ್ದಾರೆ ಎಂದು ಅನುಮತಿಸಲು ಅವರ ಮಾನಸಿಕ ಸಿದ್ಧತೆಯನ್ನು ಅಂದಾಜಿಸಬೇಕು.

iv. ಪೋಷಣೆ ನೀಡುವ ಕುಟುಂಬದವರು ಒಂದು ವೇಳೆ ಅವರ ವಾರ್ಷಿಕ ಆದಾಯ ರೂ. 8 ಲಕ್ಷಗಳಿಗಿಂತ ಕಡಿಮೆ ಇದ್ದರೆ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕಾಲಕಾಲಕ್ಕೆ ನಿಗಧಿಪಡಿಸುವ ಮಿತಿಗಿಂತ ಕಡಿಮೆ ಇದ್ದರೆ ಹಣಕಾಸಿನ ಬೆಂಬಲವನ್ನು ಕೋರಬಹುದು.

v. ಒಂದು ವೇಳೆ ಹಣಕಾಸಿನ ಬೆಂಬಲ ಒದಗಿಸಬೇಕಾದರೆ ಪ್ರಾಯೋಜಕತ್ವಕ್ಕೆ ಒದಗಿಸುವ ಪ್ರಕ್ರಿಯೆಯನ್ನೇ ಇಲ್ಲಿಯೂ ಅನುಸರಿಸಬೇಕು.

vi. ನಿಜವಾದ ವಿಸ್ತೃತ ಕುಟುಂಬಗಳೊಂದಿಗೆ ದತ್ತು ಅಥವಾ ಪುನರ್ವಸತಿ ಆಗದಿರುವಂತಹ ಮಕ್ಕಳನ್ನು ಫಾಸ್ಟರ್ ಕೇರ್‌ಗಾಗಿ ಪರಿಣಿಸಬಹುದು.

vii. ಡಿಸಿಪಿಓ, ಮಗು ಹಾಗೂ ಸಂಭವನೀಯ ಫಾಸ್ಟರ್ ಪೋಷಕರ ನಡುವೆ ಒಂದು ಪರಿಚಯ ಸಭೆಯನ್ನು ಆಯೋಜಿಸಬೇಕು. ಇದನ್ನು ಮಗು ಫಾಸ್ಟರ್ ಪೋಷಕರು/ ಕುಟುಂಬಗಳ ಜೊತೆ ಇರಲು ಒಪ್ಪಿದರೆ ಮಾತ್ರ ಕೈಗೊಳ್ಳುವುದು.

**viii. ಫಾಸ್ಟರ್ ಕೇರ್ ವ್ಯವಸ್ಥೆಗಳನ್ನು ಜಿಲ್ಲಾಧಿಕಾರಿಗಳು ಅನುಮೋದಿಸಬೇಕು.**

ix. ಡಿಸಿಪಿಯು ಸರ್ಕಾರಿ ಆಸ್ಪತ್ರೆ/ ಜಿಲ್ಲೆಯ ಮುಖ್ಯ ವೈದ್ಯಕೀಯ ಅಧಿಕಾರಿಯ ಮೂಲಕ ಮಗುವಿನ ಆರೋಗ್ಯ ವಾರ್ಷಿಕ ತಪಾಸಣೆಗೆ ವ್ಯವಸ್ಥೆ ಮಾಡಬೇಕು ಹಾಗೂ ಡಿಸಿಪಿಯುನ ಸಾಮಾಜಿಕ ಕಾರ್ಯಕರ್ತ ಅಥವಾ ಔಟ್‌ರೀಚ್ ಕಾರ್ಯಕರ್ತರ ಮೂಲಕ ಮನೆ ಹಾಗೂ ಶಾಲಾ ವಿಚಾರಣಾ ವರದಿಯೊಂದಿಗೆ ಒಪ್ಪಿಸಬೇಕು. ಫಾಸ್ಟರ್ ಕೇರ್ ಸಹಾಯದ ಪರಿಷ್ಕರಣೆ ಹಾಗೂ ವಿಸ್ತರಣೆಗಾಗಿ ಫಾಸ್ಟರ್ ಕೇರ್ ಅನುಮೋದನಾ ಸಮಿತಿ ಹಾಗೂ ಪ್ರಾಯೋಜಕತ್ವದ ಮುಂಚೆ ಇದನ್ನು ಮಾಡಬೇಕು.

x. ಮಕ್ಕಳು ಹಾಗೂ ಕುಟುಂಬಸ್ಥರ ಮೇಲ್ವಿಚಾರಣೆಯನ್ನು ಡಿಸಿಪಿಯು ಕೈಗೊಳ್ಳಬೇಕು ಹಾಗೂ ತ್ರೈಮಾಸಿಕ ಗೃಹ ಹಾಗೂ ಶಾಲಾ ಭೇಟಿಗಳು ಒಳಗೊಂಡಿರಬೇಕು.

xi. ವಿಕಲಚೇತನ ಅಥವಾ ಖಾಯಿಲೆ ಇರುವಂತಹ ಮಕ್ಕಳ ವಿಶೇಷ ಪ್ರಕರಣಗಳನ್ನು ಹೊರತುಪಡಿಸಿದಂತೆ, ಶಾಲೆಗೆ ಹೋಗುವ ವಯಸ್ಸಿನ ಎಲ್ಲಾ ಫಾಸ್ಟರ್ ಮಕ್ಕಳು ಔಪಚಾರಿಕ ಶಾಲೆಗೆ ಹಾಜರಾಗಬೇಕು. ಇದನ್ನು ಡಿಸಿಪಿಯು ಪರಿಶೀಲಿಸಿ ಖಾತ್ರಿಪಡಿಸಿ ಅನುಮೋದಿಸಬೇಕು.

xii. ಒಂದು ವೇಳೆ ಯಾವುದಾದರೂ ಹಂತದಲ್ಲಿ ಮಗುವನ್ನು ಸಾಂಸ್ಥೀಕರಣಗೊಳಿಸಬೇಕಾದರೆ, ಫಾಸ್ಟರ್ ಕೇರ್ ಅನ್ನು ಮುಂದುವರಿಸುವಂತಿಲ್ಲ. ಒಂದು ವೇಳೆ ವಿಶೇಷ ಸಾಮರ್ಥ್ಯವಿರುವ/ಅಗತ್ಯಗಳಿರುವ ಮಕ್ಕಳನ್ನು ಹೊರತುಪಡಿಸಿದಂತೆ, ಮಗು 30 ದಿನಗಳಿಗಿಂತ ಹೆಚ್ಚಿನ ಸಮಯದವರೆಗೆ ಶಾಲೆಗೆ ಹಾಜರಾಗಿರದಿದ್ದರೆ ಫಾಸ್ಟರ್ ಕೇರ್ ಸಹಾಯವನ್ನು ಕೂಡಲೇ ವಜಾಗೊಳಿಸಲಾಗುವುದು.

## ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ (ಎಸ್‌ಎಫ್‌ಸಿಎಸಿ – SFCAC-Sponsorship & Foster Care Approval Committee)

ಪ್ರಾಯೋಜಕತ್ವ (ತಡೆಗಟ್ಟುವ ರಚನೆಗಳಿಗೆ ಮಾತ್ರ) ಹಾಗೂ ಫಾಸ್ಟರ್ ಕೇರ್ ನಿಧಿಯ ಪರಿಷ್ಕರಣೆ ಹಾಗೂ ಮಂಜೂರಾತಿಗಾಗಿ ಪ್ರತಿ ಜಿಲ್ಲೆಯಲ್ಲೂ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ ಇರಬೇಕು. ಆ ಪ್ರಾಯೊಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ (ಎಸ್‌ಎಫ್‌ಸಿಎಸಿ) ಈ ಕೆಳಕಂಡ ಸದಸ್ಯರನ್ನು ಹೊಂದಿರಬೇಕು:

| ಕ್ರ.ಸಂ. | ಸದಸ್ಯರು | ಹುದ್ದೆ |
|---|---|---|
| **1.** | **ಜಿಲ್ಲಾಧಿಕಾರಿಗಳು** | **ಅಧ್ಯಕ್ಷರು** |
| 2. | ಅಧ್ಯಕ್ಷರು/ ಸದಸ್ಯರು, ಮಕ್ಕಳ ಕಲ್ಯಾಣ ಸಮಿತಿ | ಸದಸ್ಯರು |
| 3. | ವಿಶೇಷ ದತ್ತು ಕೇಂದ್ರ (ಎಸ್‌ಎಎ–SAA) ಪ್ರತಿನಿಧಿ | ಸದಸ್ಯರು |
| 4. | ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿ | ಸದಸ್ಯರು |
| **5.** | **ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ** | **ಸದಸ್ಯ ಕಾರ್ಯದರ್ಶಿ** |
| 6. | ರಕ್ಷಣಾ ಅಧಿಕಾರಿ (ಸಾಂಸ್ಥಿಕೇತರ ಪೋಷಣೆ) | ಸದಸ್ಯರು |

**ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ (ಎಸ್ಎಫ್ಸಿಎಸಿ– SFCAC) ಪಾತ್ರಗಳು ಹಾಗೂ ಜವಾಬ್ದಾರಿಗಳು:**

i. ಮಿಷನ್ ಯೋಜನೆ ಅಭಿಯಾನದಡಿ ವಿವರಿಸಿರುವಂತೆ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಕಾರ್ಯಕ್ರಮದ ಅನುಷ್ಠಾನ ಹಾಗೂ ನಿಗಾವಣೆಗಾಗಿ ಪ್ರತಿ ಜಿಲ್ಲೆಯಲ್ಲೂ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ (ಎಸ್ಎಫ್ಸಿಎಸಿ– **SFCAC**) ಇರಬೇಕು.

ii. ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿಯು ಪ್ರತಿ ಶಿಫಾರಸ್ಸನ್ನೂ ಸಹ ಪರಿಷ್ಕರಣೆ ನಡೆಸಿ, ಅರ್ಹ ಪ್ರಕರಣಗಳಿಗೆ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಬೆಂಬಲ ಒದಗಿಸುವುದನ್ನು ಅನುಮೋದಿಸುತ್ತದೆ. ಅರ್ಹ ಪ್ರಕರಣಗಳನ್ನು ಅಗತ್ಯದ ಪ್ರಕಾರ ಪ್ರಾಯೋಜಕತ್ವ/ ಫಾಸ್ಟರ್ ಕೇರ್‌ನ ಅಂತಿಮ ಆದೇಶಕ್ಕಾಗಿ ಮಕ್ಕಳ ಕಲ್ಯಾಣ ಸಮಿತಿಗೆ ಉಲ್ಲೇಖಿಸಲಾಗುವುದು/ಕಳುಹಿಸುವುದು.

iii. ಪ್ರತಿ ಜಿಲ್ಲೆಯಲ್ಲೂ ಸಿಡಬ್ಲ್ಯೂಸಿ ವತಿಯಿಂದ ಅಂತಿಮ ಆದೇಶ ಹೊರಡಿಸಿದ ನಂತರ ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಮಂಜೂರು ಮಾಡಲು, ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್ ಅನುಮೋದನಾ ಸಮಿತಿ (ಎಸ್ಎಫ್ಸಿಎಸಿ– **SFCAC**) ಜವಾಬ್ದಾರಿಯಾಗಿರುತ್ತದೆ.

iv. ಎಸ್ಎಫ್ಸಿಎಸಿ– **SFCAC** ಪ್ರತಿ ತಿಂಗಳು ಸಭೆ ನಡೆಸಿ, ಸಮಯೋಚಿತವಾಗಿ ಕಾರ್ಯನಿರ್ವಹಿಸಬೇಕು. ಯಾವುದೇ ಕೋರಿಕೆಗೆ ಸಂಬಂಧಿಸಿದ ನಿರ್ಧಾರವನ್ನು ಅರ್ಜಿ ಪಡೆದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಕೈಗೊಳ್ಳಬೇಕು.

v. ಎಸ್ಎಫ್ಸಿಎಸಿ ವತಿಯಿಂದ ಮಗುವಿನ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿದೆಯೋ ಇಲ್ಲವೋ?, ಹಾಗೂ ಮಗು ಚೆನ್ನಾಗಿ ಹೊಂದಿಕೊಂಡಿರುವುದೋ ಇಲ್ಲವೋ ಎಂದು ಖಾತ್ರಿಪಡಿಸಿಕೊಳ್ಳಲು ಪ್ರಾಯೋಜಕತ್ವ/ ಫಾಸ್ಟರ್ ಕೇರ್ ಅಡಿ ಇರುವ ಪ್ರತಿ ಮಗುವಿನ ವಾರ್ಷಿಕ ಮರುಪರಿಶೀಲನೆ ನಡೆಸಿ ಕೈಗೊಳ್ಳಲಾಗುವುದು. ಈ ಮರುವಿಮರ್ಶೆ ಆಧರಿಸಿ ಪ್ರಾಯೋಜಕತ್ವ ಮುಂದುವರೆಸುವ ಅನುಮತಿಯನ್ನು ನೀಡಲಾಗುವುದು.

vi. ಇತರೆ ಇಲಾಖೆಗಳ ಸಹಭಾಗಿತ್ವದೊಂದಿಗೆ ಕುಟುಂಬಗಳನ್ನು ಶಕ್ತಗೊಳಿಸಲು ಡಿಸಿಪಿಯು ಸೂಕ್ತ ಪ್ರಯತ್ನಗಳನ್ನು ಮಾಡಿರುವುದನ್ನು ಖಾತ್ರಿಪಡಿಸಿಕೊಳ್ಳಲು ಎಸ್ಎಫ್ಸಿಎಸಿ ಯು ಅದನ್ನು ಸದಾ ಪರಿಶೀಲನೆ ನಡೆಸುತ್ತಿರುತ್ತದೆ.

vii. ಕುಟುಂಬ ಆಧಾರಿತ ಪ್ರಾಯೋಜಕತ್ವ ಸೇವೆ ನಿಲ್ಲಿಸುವ ಸಂಬಂಧ ಎಸ್ಎಫ್ಸಿಎಸಿ ಯು ಗೆ ಪರಿಶೀಲನೆ ಹಾಗೂ ಶಿಫಾರಸ್ಸನ್ನು ಮಾಡುವ ಅಧಿಕಾರವನ್ನು ಹೊಂದಿರುತ್ತದೆ

**ಎಸ್ಎಫ್ಸಿಎಸಿ – SFCAC ವತಿಯಿಂದ ಒದಗಿಸುವ ಪ್ರಾಯೋಜಕತ್ವದ ಪುನರ್‌ಪರಿಶೀಲನೆ:**

ಎಸ್ಎಫ್ಸಿಎಸಿ ಈ ಕೆಳಕಂಡ ಸನ್ನಿವೇಶಗಳಲ್ಲಿ ಕುಟುಂಬ ಆಧಾರಿತ ಪ್ರಾಯೋಜಕತ್ವ ಸೇವೆಯನ್ನು ನಿಲ್ಲಿಸುವ ಕುರಿತು ಪುನರ್‌ಪರಿಶೀಲನೆ ಮಾಡುವ ಹಾಗೂ ಶಿಫಾರಸ್ಸನ್ನು ಮಾಡುವ ಅಧಿಕಾರವನ್ನು ಹೊಂದಿರುತ್ತದೆ,

i. ಮಗು 18 ವರ್ಷ ವಯಸ್ಸನ್ನು ಪೂರೈಸಿದಾಗ.

ii. ಕುಟುಂಬದ ಆರ್ಥಿಕ ಸ್ಥಿತಿಗತಿ ಸುಧಾರಿಸಿರುವಾಗ ಹಾಗೂ ಕುಟುಂಬ ಸ್ವಯಂಪ್ರೇರಿತವಾಗಿ ಪ್ರಾಯೋಜಕತ್ವದ ಬೆಂಬಲವನ್ನು ತ್ಯಜಿಸಿದಾಗ.

iii. ಮಗು ಶಾಲೆ ಹಾಗೂ/ಅಥವಾ ಅಂಗನವಾಡಿಗೆ (ಕೇವಲ ವಿಶೇಷಚೇತನ ಮಕ್ಕಳು ಅಥವಾ ಮಗುವಿಗೆ ಅನಾರೋಗ್ಯವಿದ್ದಾಗ ಅದನ್ನು ಡಿಸಿಪಿಯು ವತಿಯಿಂದ ಪರಿಶೀಲಿಸಿರುವ ಪ್ರಕರಣಗಳನ್ನು ಮಾತ್ರ

ಹೊರತುಪಡಿಸಿ) ಹೋಗುವುದನ್ನು ನಿಲ್ಲಿಸಿದಾಗ, ಮಗುವಿನ ಶಾಲಾ ಹಾಜರಾತಿ 30 ದಿನಗಳಿಗಿಂತ ಹೆಚ್ಚಿನ ಅವಧಿಯವರೆಗೆ ಅನುಪಸ್ಥಿತಿ ಕಂಡು ಬರುವ ಪ್ರಕರಣಗಳಲ್ಲಿ, ಪ್ರಾಯೋಜಕತ್ವ ಸಹಾಯವನ್ನು ಪುನರ್‌ಪರಿಶೀಲಿಸಿ, ವಜಾಗೊಳಿಸಲಾಗುತ್ತದೆ.

iv. ಮಗುವನ್ನು ಮತ್ತೊಮ್ಮೆ ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆಯಲ್ಲಿ ಇರಿಸಿರುವ ಪ್ರಕರಣಗಳಲ್ಲಿ.

v. ಒಂದು ವೇಳೆ ಮಗುವಿಗೆ ವೈದ್ಯಕೀಯ ತೊಂದರೆಗಳಿದ್ದರೆ ಹಾಗೂ ಪೋಷಕರಿಗೆ ಅಗತ್ಯ ಚಿಕಿತ್ಸೆ ಒದಗಿಸುವುದು ಸಾಧ್ಯವಾಗದಿದ್ದರೆ.

vi. ಒಂದು ವೇಳೆ ಇಬ್ಬರೂ ಪೋಷಕರು ಅಶಕ್ತರಾಗಿದ್ದರೆ ಅಥವಾ ನೋಡಿಕೊಳ್ಳಲು ಸಾಧ್ಯವಾಗದಿರುವಂತಹ ಪರಿಸ್ಥಿತಿಯಲ್ಲಿದ್ದರೆ (ಒಂದು ವೇಳೆ ಪ್ರಾಯೋಜಕತ್ವವನ್ನು ಸಂಬಂಧಿಕರು ಅಥವಾ ಇತರೆ ಕುಟುಂಬ ಆಧಾರಿತ ಪೋಷಣೆ ವ್ಯವಸ್ಥೆಗೆ ವರ್ಗಾಯಿಸುವಂತಿದ್ದರೆ)

vii. ಒಂದು ವೇಳೆ ಕನಿಷ್ಠ ಮೂರು ತಿಂಗಳ ನಂತರವೂ ಮಗು ಹಾಗೂ ಕುಟುಂಬ ಸರಿಹೊಂದಿಕೊಳ್ಳದಿದ್ದರೆ (ಮಗು ಸಿಸಿಐನಿಂದ ಬಿಡುಗಡೆಗೊಂಡಿದ್ದರೆ)

ರಕ್ಷಣಾ ಅಧಿಕಾರಿಯು (ಸಾಂಸ್ಥಿಕೇತರ ಪೋಷಣೆ) ಎಸ್‌ಎಫ್‌ಸಿಎಸಿ ಮುಂದೆ, ಮಗು ಹಾಗೂ ಕುಟುಂಬದ ಹಾಲಿ ಪರಿಸ್ಥಿತಿಯನ್ನು ಬಹಿರಂಗಗೊಳಿಸಬೇಕು ಹಾಗೂ ಸೇವೆಯ ಸಂಭವನೀಯ ಸ್ಥಗಿತದ ಕಾರಣಗಳನ್ನು ಒದಗಿಸಬೇಕು ಹಾಗೂ ಮಗುವಿನ ಪರವಾಗಿ ಮುಂದಿನ ಕ್ರಮದ ಕುರಿತು ಸಲಹೆ ಪಡೆದುಕೊಳ್ಳಬೇಕು.

ಎಸ್‌ಎಫ್‌ಸಿಎಸಿ ಪ್ರಾಯೋಜಕತ್ವವನ್ನು ನಿಲ್ಲಿಸಲು ತೀರ್ಮಾನಿಸಿದರೆ, ಅಗತ್ಯವಿದ್ದರೆ, ಮಗುವಿಗೆ ಪರ್ಯಾಯ ಪೋಷಣೆ ಹಾಗೂ ಪುನರ್ವಸತಿ ಕ್ರಮಗಳನ್ನು ಶಿಫಾರಸ್ಸು ಮಾಡಬಹುದು. ಮಗುವಿನ ಉತ್ತಮ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಪರ್ಯಾಯ ಪ್ಲೇಸ್‌ಮೆಂಟ್ ವ್ಯವಸ್ಥೆ ಇದರಲ್ಲಿ ಒಳಗೊಂಡಿರಬಹುದು. ಈ ಶಿಫಾರಸ್ಸನ್ನು ಸಿಡಬ್ಲ್ಯೂಸಿ ಮುಂದೆ ಹಾಜರುಪಡಿಸಲಾಗುವುದು. ನಂತರ ಸಿಡಬ್ಲ್ಯೂಸಿ ಅದನ್ನು ರದ್ದುಪಡಿಸುತ್ತದೆ ಅಥವಾ ಪ್ರಾಯೋಜಕತ್ವ ಮುಂದುವರೆಸುವುದನ್ನು ನಿಲ್ಲಿಸಬಹುದು ಹಾಗೂ ಮಗುವಿನ ಪ್ರಕರಣದ ಕಡತವನ್ನು ಮುಕ್ತಾಯಗೊಳಿಸಬಹುದು. ಇಂತಹ ಪ್ರಕರಣದಲ್ಲಿ ರಕ್ಷಣಾ ಅಧಿಕಾರಿ (ಎನ್‌ಐಸಿ) ಮಗುವಿನ ಸೂಕ್ತ ಪ್ಲೇಸ್‌ಮೆಂಟ್‌ಗಾಗಿ ಸಿಡಬ್ಲ್ಯೂಸಿ ಸಂಪರ್ಕಿಸಬಹುದು.

### 4.3 ಅನುಪಾಲನಾ ಸೇವೆ – After Care:

ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015, ಕಲಂ 2(5) ಹಾಗೂ ಕಲಂ 46 ರಡಿ ಮಕ್ಕಳ ಅನುಪಾಲನಾ ಸೇವೆಯನ್ನು ಕಡ್ಡಾಯಪಡಿಸಲಾಗಿದೆ. ***"18 ವರ್ಷ ಪೂರೈಸಿದ ನಂತರ ಮಕ್ಕಳ ಪೋಷಣಾ ಸಂಸ್ಥೆಯಿಂದ ಹೊರಬರುವ ಯಾವುದೇ ಮಗುವಿಗಾದರೂ, ಆ ಮಗು ಸಮಾಜದ ಮುಖ್ಯವಾಹಿನಿಯಲ್ಲಿ ವಿಲೀನಗೊಳ್ಳಲು ಅಗತ್ಯದ ಪ್ರಕಾರ ಹಣಕಾಸಿನ ಬೆಂಬಲವನ್ನು ಒದಗಿಸುವುದು".***

ಅನುಪಾಲನಾ ಸೇವೆ, ಮಕ್ಕಳ ಗೃಹಗಳು (Children's Home), ಪರಿವೀಕ್ಷಣಾ ಗೃಹಗಳು, ಇತ್ಯಾದಿ ಅಥವಾ ಫಿಟ್ ಸೌಲಭ್ಯಗಳಂತಹ ಯಾವುದಾದರೂ ರೂಪದ ಪರ್ಯಾಯ ಪೋಷಣೆಯಲ್ಲಿ ಬೆಳೆದಿರುವಂತಹ ಹಾಗೂ 18 ವರ್ಷಗಳನ್ನು ಪೂರೈಸಿರುವ ಕಾರಣದಿಂದಾಗಿ ಅಲ್ಲಿಂದ ಹೊರಗೆ ಬರಬೇಕಾದಂತಹ ಎಲ್ಲಾ ಮಕ್ಕಳಿಗೂ ಅನ್ವಯಿಸುತ್ತದೆ. ಈ ರೀತಿ ಹದಿಹರೆಯದ ವಯಸ್ಸನ್ನು ಪೂರೈಸಿ ಮಕ್ಕಳ ಪೋಷಣಾ ಸಂಸ್ಥೆಯಿಂದ ಹೊರಗೆ ಬರುವ ವ್ಯಕ್ತಿ ಸ್ವತಂತ್ರವಾಗಿ ಬದುಕನ್ನು ಎದುರಿಸುವಾಗ ವಿವಿಧ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಹಾಗೂ ಅವರು ಸಾಂದರ್ಭಿಕ ಹಾಗೂ ಭಾವನಾತ್ಮಕ ಬದಲಾವಣೆಗಳಿಗೆ ಒಳಪಡುವ ವಯಸ್ಸಾಗಿರುವುದರಿಂದ ವಿವಿಧ ಅವಕಾಶಗಳನ್ನೂ ಪಡೆಯುತ್ತಾರೆ. ಈ ಬದಲಾವಣೆಯ ಅವಧಿ ಬಹಳ ಸೂಕ್ಷ್ಮವಾದ ಅವಧಿಯಾಗಿರುತ್ತದೆ. ಏಕೆಂದರೆ, ಇಂತಹ ಸಮಯದಲ್ಲಿ ಆ ಯುವಜನರಿಗೆ ಬೆಂಬಲ ಲಭಿಸದಿದ್ದರೆ, ಅವರಿಗೆ ದೊರೆಯುವ ಅವಕಾಶಗಳು ತಪ್ಪಿಹೋಗುತ್ತವೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು 18 ವರ್ಷಗಳನ್ನು ಪೂರೈಸಿದ ನಂತರ ಮಕ್ಕಳ ಪೋಷಣಾ ಸಂಸ್ಥೆಗಳಿಂದ ಹೊರಗೆ ಬರುವಂತಹ ಮಕ್ಕಳಿಗಾಗಿ ಅವರ ಶಿಕ್ಷಣ, ಔದ್ಯೋಗಿಕ ಕೌಶಲ್ಯಗಳ ತರಬೇತಿ ಹಾಗೂ ಪ್ಲೇಸ್‌ಮೆಂಟ್, ಕೈಗಾರಿಕಾ ಕರಕುಶಲತೆ, ವ್ಯಾಪಾರ ಆರಂಭಿಸಲು ಸಾಲದ ಬೆಂಬಲ ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿ ಏಕೀಕರಣಗೊಳ್ಳಲು ಉಳಿದುಕೊಳ್ಳಲು ಸೂಕ್ತ ಸ್ಥಳದಂತಹ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮವನ್ನು ಸಿದ್ಧಪಡಿಸಬೇಕು. ಇಂತಹ ಯೋಜನೆಯನ್ನು ಮಗು 16 ವರ್ಷ ವಯಸ್ಸನ್ನು ಪೂರೈಸಿದಾಗಲೇ ರೂಪಿಸಿ, ಆತ/ಆಕೆ 18 ವರ್ಷ ವಯಸ್ಸನ್ನು ಪೂರ್ಣಗೊಳಿಸಿದ ನಂತರ ಅನುಷ್ಠಾನಗೊಳಿಸುವುದು ಸೂಕ್ತ.

### 4.3.1 ಅನುಪಾಲನಾ ಸೇವೆಯ ವ್ಯವಸ್ಥೆ ಪಡೆಯಲು ಬೇಕಾದ ಅರ್ಹತೆಗಳು:

18 ವರ್ಷ ಪೂರ್ಣಗೊಳಿಸಿರುವಂತಹ ಪ್ರತಿ ಯುವಕ/ಯುವತಿ ಹಾಗೂ ಮಗುವಾಗಿದ್ದಾಗ (ಅಂದರೆ 18 ವರ್ಷದೊಳಗಿದ್ದಾಗ) ಯಾವುದಾದರೂ ಔಪಚಾರಿಕ ಅಥವಾ ಅನೌಪಚಾರಿಕ ರೂಪದ ಪರ್ಯಾಯ ಪೋಷಣಾ ವ್ಯವಸ್ಥೆಯಲ್ಲಿ ಪೋಷಣೆ ಹಾಗೂ ರಕ್ಷಣೆಯನ್ನು ಪಡೆದುಕೊಂಡಿದ್ದರೆ; ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವಂತಹ ಹಾಗೂ ಕಾನೂನಿನೊಂದಿಗೆ ಸಂಘರ್ಷದಲ್ಲಿರುವಂತಹ ಹಾಗೂ ನಿಕಟ ಬೆಂಬಲದ ಅಗತ್ಯವಿರುವಂತಹ ಯಾವುದಾದರೂ ಮಕ್ಕಳಿಗೆ ನಿಕಟ ಹಾಗೂ ಈ ಮಾರ್ಗಸೂಚಿಗಳಲ್ಲಿ ವಿವರಿಸಿರುವಂತಹ ರೀತಿಯಲ್ಲಿ ಮುಂದುವರಿದು ದೀರ್ಘಾವಧಿ ಅನುಪಾಲನಾ ಸೇವೆಗಳನ್ನು ಹಾಗೂ ಸೌಲಭ್ಯಗಳನ್ನು ಕಲ್ಪಿಸಬೇಕು.

### 4.3.2 ಅನುಪಾಲನಾ ಸೇವೆಯ ಅವಧಿ:

18 ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಯುವಕ/ಯುವತಿಗೆ ಗರಿಷ್ಠ ಮೂರು ವರ್ಷದವರೆಗೆ (21 ವರ್ಷ ಪೂರ್ಣಗೊಳಿಸುವವರೆಗೆ) ಅನುಪಾಲನಾ ಸೇವೆಯ ಬೆಂಬಲವನ್ನು ಒದಗಿಸಬಹುದು ಹಾಗೂ ಈ ಸೇವೆಗಳನ್ನು 23 ವರ್ಷದವರೆಗೂ ವಿಸ್ತರಿಸಬಹುದು (ವಿಶೇಷ ಪ್ರಕರಣಗಳಲ್ಲಿ) ಅಥವಾ ಯುವಕ/ಯುವತಿ, ಸಮಾಜದ ಮುಖ್ಯವಾಹಿನಿಯೊಳಗೆ ಸೇರ್ಪಡೆಗೊಳ್ಳುವವರೆಗೂ, ಯಾವುದು ಮೊದಲೋ ಅದನ್ನು ಮಾಡುವುದು.

### 4.3.3 ಹಣಕಾಸು ನಿಬಂಧನೆಗಳು:

ಆಹಾರ, ಉಡುಗೆ, ಆರೋಗ್ಯ ಸೇವೆ ಹಾಗೂ ಸೂರು; ವಯೋಸೂಕ್ತ ಹಾಗೂ ಅಗತ್ಯ ಆಧಾರಿತ ಶಿಕ್ಷಣ ಮತ್ತು ವೃತ್ತಿಪರ ತರಬೇತಿ, ಶಿಷ್ಯವೇತನ ಹಾಗೂ ಇನ್ನಿತರೆ ಅಗತ್ಯಗಳು ಒಳಗೊಂಡಂತೆ ಯುವಕ/ಯುವತಿಯ ಮೂಲಭೂತ ಅಗತ್ಯಗಳನ್ನು ಪೂರೈಸಲು **ವೈಯಕ್ತಿಕ ಅನುಪಾಲನಾ ಸೇವೆ ಯೋಜನೆ** (ಐಎಪಿ–IAP-Individual After Care Plan) ಯ ಸಂಪೂರ್ಣ ಅನುಷ್ಠಾನಕ್ಕಾಗಿ ಅನುಪಾಲನೆಯನ್ನು ಒದಗಿಸಲು ಆಸಕ್ತಿ ಹೊಂದಿರುವ ಮಕ್ಕಳ ಪೋಷಣಾ ಸಂಸ್ಥೆಗಳು/ ಕೇಂದ್ರಗಳು/ ವ್ಯಕ್ತಿಗಳು ಪ್ರತಿ ಮಗುವಿಗೆ ರೂ.4,000/–ದಂತೆ ಮಾಸಿಕ ಹಣಕಾಸಿನ ಬೆಂಬಲವನ್ನು ಒದಗಿಸಬೇಕು. ಅನುಪಾಲನಾ ಸೇವೆಗಳ ಪ್ರಮುಖ ಉದ್ದೇಶ ಯುವಕ/ಯುವತಿ ತಮ್ಮ ಔದ್ಯೋಗಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅಗತ್ಯವಿರುವಂತಹ ಕೌಶಲ್ಯಗಳನ್ನು ಹೊಂದುವುದು ಹಾಗೂ ಸಮಾಜದಲ್ಲಿ ಉತ್ತಮ ಜೀವನವನ್ನು ಅಳವಡಿಸಿಕೊಳ್ಳುವಂತಾಗುವುದಾಗಿರುತ್ತದೆ.

ಯುವಕ/ಯುವತಿಯರಿಗಾಗಿ ಕೇಂದ್ರದ ಬೆಂಬಲದ ಜೊತೆಗೆ, ವಿವಿಧ ಯೋಜನೆಗಳನ್ನು ಸಹಯೋಗಗೊಳಿಸುವುದರ ಮೂಲಕ ರಾಜ್ಯ ಸರ್ಕಾರವು ಸಹ ಹೆಚ್ಚುವರಿ ಹಣಕಾಸಿನ ಬೆಂಬಲವನ್ನು ಒದಗಿಸಬೇಕು. ಈ ಪೈಕಿ ಕೆಲವು ಪೂರಕ ಸಚಿವಾಲಯಗಳು/ ಇಲಾಖೆಗಳೆಂದರೆ ವಸತಿ, ಉನ್ನತ ಶಿಕ್ಷಣ, ಕೌಶಲ್ಯಗಳ ಅಭಿವೃದ್ಧಿ, ಕ್ರೀಡೆಗಳು, ಯುವ ವ್ಯವಹಾರಗಳು, ಸಾಮಾಜಿಕ ನ್ಯಾಯ, ಬುಡಕಟ್ಟು ಅಭಿವೃದ್ಧಿ, ಹಣಕಾಸು ಸೇವೆಗಳ ಇಲಾಖೆ, ಕೈಗಾರಿಕೆಗಳ ಇಲಾಖೆ, ಇತ್ಯಾದಿ.

# 5. ಸಹಭಾಗಿತ್ವ – CONERGENCE

## 5.1 ಸಹಭಾಗಿತ್ವದ ಕಾರ್ಯತಂತ್ರ: Convergence Strategy

ಮಿಷನ್ ವಾತ್ಸಲ್ಯ ಮಕ್ಕಳ ಕಲ್ಯಾಣ ಹಾಗೂ ಸಂರಕ್ಷಣೆಯ ಅಪೇಕ್ಷಿತ ಫಲಿತಾಂಶಗಳನ್ನು ಹೊಂದಲು ಯೋಜನೆಗಳು ಹಾಗೂ ಪ್ರಯತ್ನಗಳ ಮೂಲಕ ಸಮರ್ಥ ಹಾಗೂ ಪರಿಣಾಮಕಾರಿಯಾದ ಸಹಭಾಗಿತ್ವದ ಕಾರ್ಯತಂತ್ರವನ್ನು ಅನುಸರಿಸುವ ಗುರಿಯನ್ನು ಹೊಂದಿದೆ. ಸಹಭಾಗಿತ್ವಕ್ಕೆ ಸಂಬಂಧಿಸಿದ ವಿವರಣಾತ್ಮಕ ಕೋಷ್ಠಕ ಈ ಕೆಳಗಿನಂತಿದೆ:

**ಸಹಭಾಗಿತ್ವದ ಕೋಷ್ಠಕ:**

(ಎ) **ಅಂತರಿಕ ಸಚಿವಾಲಯ ಸಹಭಾಗಿತ್ವ –** Intra Ministry Convergence:

| ಕ್ರ.ಸಂ. | **ಯೋಜನೆ** | **ಒಮ್ಮುಖಿತೆ ಚಟುವಟಿಕೆಗಳು** |
|---|---|---|
| 1. | **ಮಿಷನ್ ಸಕ್ಷಮ್**<br>**Mission Saksham** | • ಅಂಗನವಾಡಿ ಸೇವೆಗಳನ್ನು ಬಲಗೊಳಿಸಿ ತಳಮಟ್ಟದವರೆಗೂ ತಲುಪುವುದು ಹಾಗೂ ಸಂಪರ್ಕ ಬೆಳೆಸುವುದು.<br>• ಅನಾಥ ಮಕ್ಕಳು ಹಾಗೂ ಏಕ ಪೋಷಕರಿರುವಂತಹ ಮಕ್ಕಳು ಒಳಗೊಂಡಂತೆ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಬೇಸ್‌ಲೈನ್ ದತ್ತಾಂಶ (ಅಂಕಿ ಸಂಖ್ಯೆಗಳ) ಸಂಗ್ರಹ. |
| 2. | **ಮಿಷನ್ ಶಕ್ತಿ**<br>**Mission Shakti** | • ಬೇಟಿ ಬಚಾವೊ, ಬೇಟಿ ಫಡಾವೊ/ ಸಂಭಲ್ SAMBAL-scheme is for safety and security of women, ಅಡಿ ಲಿಂಗ ಸಂವೇದನೆ ಸಂಬಂಧಿಸಿದಂತೆ ವಕಾಲತ್ತು.<br>• 18 ವರ್ಷ ಪೂರ್ಣಗೊಂಡ ನಂತರ ಮಕ್ಕಳ ಪೋಷಣಾ ಸಂಸ್ಥೆಗಳಿಂದ (ಸಿಸಿಐಗಳು) ಬಾಲಕಿಯರ ಸುಗಮವಾದ ಬದಲಾವಣೆಗಾಗಿ **'ಶಕ್ತಿ ಸದನ'** ಹಾಗೂ ದುಡಿಯುವ ಮಹಿಳೆಯರ ವಿದ್ಯಾರ್ಥಿನಿಲಯಗಳೊಂದಿಗೆ ಸಂಪರ್ಕ ಸ್ಥಾಪನೆ.<br>• ಸಾಂಸ್ಥಿಕ/ ಸಾಂಸ್ಥಿಕೇತರ ಆರೈಕೆಗಳಲ್ಲಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಬಾಲಕಿಯರಿಗೆ (18 ವರ್ಷಕ್ಕಿಂತ ಕಡಿಮೆ ವಯಸ್ಸಿನ) ಬೆಂಬಲ/ ಪುನರ್ವಸತಿ. |
| 3. | **ಸಿಎಆರ್ಎ– CARA** | • ಅರಿವು ಮೂಡಿಸುವಿಕೆ, ವಕಾಲತ್ತು ಹಾಗೂ ಎಸ್ಎಆರ್ಎ–SARA ಗಳಿಗೆ ಬೆಂಬಲದ ಮೂಲಕ ದತ್ತುಗೆ ಅನುಕೂಲ ಒದಗಿಸುವುದು. ವಕಾಲತ್ತು |

## (ಬಿ) ಅಂತರ್ ಸಚಿವಾಲಯ ಸಹಭಾಗಿತ್ವ – Inter Ministry Convergence:

| ಕ್ರ.ಸಂ. | ಯೋಜನೆ/ ಸಚಿವಾಲಯ | ಸಹಭಾಗಿತ್ವದ ಚಟುವಟಿಕೆಗಳು | ಸಹಭಾಗಿತ್ವದ ಕ್ರಮ |
|---|---|---|---|
| 1. | ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯ, D/o ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ. (ಕರ್ನಾಟಕದಲ್ಲಿ ಸಮಾಜ ಕಲ್ಯಾಣ ಇಲಾಖೆ) | • ಮಿಷನ್ ವಾತ್ಸಲ್ಯದಡಿ ಅನುದಾನಿತ ಸಿಸಿಐಗಳಲ್ಲಿ ಮಾದಕವಸ್ತು ವ್ಯಸನ ಮುಕ್ತಗೊಳಿಸುವ ಯೋಜನೆಯಡಿ ವ್ಯಸನಮುಕ್ತ ಮಧ್ಯಸ್ಥಿಕೆಗೆ ಅವಕಾಶ ಮತ್ತು ವ್ಯವಸ್ಥೆ (ನಿಬಂಧನೆ) ಲಭ್ಯವಿರಬೇಕು.<br>• ವಿದ್ಯಾರ್ಥಿವೇತನ ಯೋಜನೆಯಡಿ ಅನಾಥ, ಪರಿತ್ಯಜಿಸಲ್ಪಟ್ಟ ಅಥವಾ ಒಪ್ಪಿಸಲ್ಪಟ್ಟ ಮಕ್ಕಳ ಸೇರ್ಪಡೆ. | • ಸಂಬಂಧಪಟ್ಟ ಸಿಸಿಐಗಳಲ್ಲಿ ಮಾದಕವಸ್ತು ವ್ಯಸನಮುಕ್ತಗೊಳಿಸುವ ಚಟುವಟಿಕೆ ಆರಂಭ.<br>• ವಿದ್ಯಾರ್ಥಿವೇತನ ಯೋಜನೆಯಡಿ ಅನಾಥ, ಪರಿತ್ಯಜಿಸಲ್ಪಟ್ಟ ಅಥವಾ ಒಪ್ಪಿಸಲ್ಪಟ್ಟ ಮಕ್ಕಳ ಸೇರ್ಪಡೆ<br>• ಭೌತಿಕ ತ್ರೈಮಾಸಿಕ ವರದಿಗಳ ಜೊತೆಗೆ ಮಾಸಿಕ ವರದಿಗಳ ಆನ್‌ಲೈನ್ ಸಲ್ಲಿಕೆ. |
| 2. | ವಿಶೇಷಚೇತನರ ಸಬಲೀಕರಣ ಇಲಾಖೆ, ಸಾಮಾಜಿಕ ನ್ಯಾಯ & ಸಬಲೀಕರಣ ಸಚಿವಾಲಯ. (ಕರ್ನಾಟಕದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) | ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ ಮಿಷನ್ ವಾತ್ಸಲ್ಯ ಅಭಿಯಾನದಡಿ ವಿಶೇಷಚೇತನ ಮಕ್ಕಳ ಅನುದಾನದೊಂದಿಗೆ ದೀನ್‌ದಯಾಳ್ ವಿಶೇಷಚೇತನರ ಪನರ್ವಸತಿ ಯೋಜನೆಯಡಿ ಲಭಿಸುವ ಬೆಂಬಲಗಳನ್ನು ಜೊತೆಗೂಡಿಸುವುದು. | • ದೀನ್‌ದಯಾಳ್ ವಿಶೇಷಚೇತನರ ಪುನರ್ವಸತಿ ಯೋಜನೆಯ ಲಾಭಗಳು ಸಿಸಿಐಗಳಲ್ಲಿರುವ ಮಕ್ಕಳಿಗೂ ವಿಸ್ತರಣೆ ಮಾಡುವುದು.<br>• ತ್ರೈಮಾಸಿಕ ಭೌತಿಕ ವರದಿಗಳೊಂದಿಗೆ ಆನ್‌ಲೈನ್ ಮೂಲಕ ಮಾಸಿಕ ವರದಿ ಸಲ್ಲಿಕೆ |
| 3. | ಕೌಶಲ್ಯ ಅಭಿವೃದ್ಧಿ ಹಾಗೂ ಉದ್ಯಮಶೀಲತಾ ಸಚಿವಾಲಯ. | ಪಿಎಂ ಕೌಶಲ್ ವಿಕಾಸ ಯೋಜನೆ ಹಾಗೂ ಇತರೆ ಯೋಜನೆಗಳಡಿ ಮಕ್ಕಳ ಪೋಷಣಾ ಸಂಸ್ಥೆಗಳು/ ಸಾಂಸ್ಥಿಕೇತರ ಆರೈಕೆಯಲ್ಲಿರುವ ಮಕ್ಕಳಿಗೆ ವೃತ್ತಿಪರ ತರಬೇತಿ. | • ಸಿಸಿಐಗಳು ಹಾಗೂ ಸಾಂಸ್ಥಿಕೇತರ ಆರೈಕೆಯಲ್ಲಿರುವ ಮಕ್ಕಳಿಗೆ ನೀಡುವ ಕೌಶಲ್ಯ ಅಭಿವೃದ್ಧಿಯನ್ನು ಅವರಿಗೆ ಸಂಯೋಜಿಸುವುದು, ಮಾಹಿತಿ ಒದಗಿಸುವಿಕೆ ಹಾಗೂ ಕೌಶಲ್ಯ ಅಭಿವೃದ್ಧಿ ಕೋರ್ಸುಗಳಲ್ಲಿ ನೋಂದಣಿ ಮಾಡಿಸುವ ಮೂಲಕ ಏಕೀಕರಣಗೊಳಿಸುವುದು.<br>• ತ್ರೈಮಾಸಿಕ ಭೌತಿಕ ವರದಿಗಳೊಂದಿಗೆ ಆನ್‌ಲೈನ್ ಮೂಲಕ ಮಾಸಿಕ ವರದಿ ಸಲ್ಲಿಕೆ. |

| | | | |
|---|---|---|---|
| 4. | ಶಿಕ್ಷಣ ಸಚಿವಾಲಯದ ಶಾಲಾ ಶಿಕ್ಷಣ ಹಾಗೂ ಸಾಕ್ಷರತೆ ಇಲಾಖೆ. | ಸಮಗ್ರ ಶಿಕ್ಷಾ ಅಭಿಯಾನದಡಿ ಸಿಸಿಐಗಳಲ್ಲಿರುವ ಎಲ್ಲಾ ಮಕ್ಕಳಿಗೆ ಶಾಲಾ ಶಿಕ್ಷಣ | • ಸಿಸಿಐಗಳಲ್ಲಿ ವಾಸಿಸುತ್ತಿರುವ ಎಲ್ಲಾ ಮಕ್ಕಳು ಶಾಲೆಗಳಲ್ಲಿ ದಾಖಲಾಗುವುದನ್ನು ಖಾತ್ರಿಪಡಿಸುವುದು ತ್ರೈಮಾಸಿಕ ಭೌತಿಕ ವರದಿಗಳ ಜೊತೆಗೆ ಆನ್‌ಲೈನ್ ಮೂಲಕ ಮಾಸಿಕ ವರದಿ ಸಲ್ಲಿಕೆ. |
| 5. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ. (ಮಕ್ಕಳ ಆರೋಗ್ಯ ವಿಭಾಗ) | • ಆಯುಷ್ಮಾನ್ ಭಾರತ್ ಯೋಜನೆಯಡಿ ಮಕ್ಕಳ ಆರೋಗ್ಯ ವಿಮೆ.<br>• ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿನ ಮಕ್ಕಳಲ್ಲಿ ಅರಿವು ಮೂಡಿಸುವುದು ಹಾಗೂ ಮಧ್ಯಸ್ಥಿಕೆಗಳಿಗಾಗಿ ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಅಭಿಯಾನದೊಂದಿಗೆ ಸಹಯೋಗಗೊಳಿಸುವುದು.<br>• ಮಾನಸಿಕ ಆರೋಗ್ಯ ಮಧ್ಯಸ್ಥಿಕೆಗಳಿಗಾಗಿ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಯೋಜನೆ. | • ರೂ.5 ಲಕ್ಷದವರೆಗೆ ಆರೋಗ್ಯ ವಿಮೆ ಒದಗಿಸಲು ಪ್ರತಿ ಮಗುವಿಗೂ ಎಬಿ ಪಿಎ–ಜೆಎವೈ ಕಾರ್ಡ್ (AB PM-JAY Card) ಒದಗಿಸುವುದು<br>• ವೈಯಕ್ತಿಕ ಪೋಷಣಾ ಯೋಜನೆ ಹಾಗೂ ಮಕ್ಕಳ ವೈದ್ಯ ಸೇವೆಗಳು ಒಳಗೊಂಡಂತೆ ಜೆಜೆ ನಿಯಮಗಳ ಪ್ರಕಾರ ಸಿಸಿಐಗಳಲ್ಲಿ ವೈದ್ಯಕೀಯ ಅಧಿಕಾರಿ (ಫಿಸಿಷಿಯನ್) ಸೇವೆಗಳನ್ನು ಒದಗಿಸುವುದು.<br>• ಸಿಸಿಐಗಳಲ್ಲಿರುವ ಎಲ್ಲಾ ಮಕ್ಕಳಿಗೂ ಲಸಿಕೆ ನೀಡುವುದು<br>• ಸಿಸಿಐಗಳಲ್ಲಿರುವ ಮಕ್ಕಳಿಗೆ ನಿಯಮಿತವಾಗಿ ಆರ್‌ಕೆಎಸ್‌ಕೆ ಆರೋಗ್ಯ ತಪಾಸಣೆಗಳನ್ನು ನಡೆಸುವುದು ಹಾಗೂ ಆಪ್ತಸಮಾಲೋಚನೆ ಮಾಡುವುದು.<br>• ತ್ರೈಮಾಸಿಕ ಭೌತಿಕ ವರದಿಗಳ ಜೊತೆಗೆ ಆನ್‌ಲೈನ್ ಮೂಲಕ ಮಾಸಿಕ ವರದಿಗಳ ಸಲ್ಲಿಕೆ. |
| 6. | ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ. | • ಸಿಎಸ್‌ಆರ್ ಮಾರ್ಗಸೂಚಿಗಳಡಿ "ಮಕ್ಕಳ ಕಲ್ಯಾಣಕ್ಕಾಗಿ (ಅಭಿವೃದ್ಧಿ) ಹೂಡಿಕೆ" ಅನುಷ್ಠಾನ. | • ಸಾಂಸ್ಥಿಕೇತರ ಪೋಷಣೆಯನ್ನು ಬಲಪಡಿಸುವುದರೊಂದಿಗೆ ಸಿಸಿಐಗಳಲ್ಲಿ ಸಿಎಸ್‌ಆರ್ ಚಟುವಟಿಕೆಗಳಿಗೆ ಪ್ರೋತ್ಸಾಹ. |
| 7. | ಆರ್ಥಿಕ ಮತ್ತು ಸಾಂಖ್ಯಿಕ ಸಚಿವಾಲಯ ಹಾಗೂ ಕಾರ್ಯಕ್ರಮ ಅನುಷ್ಠಾನ. | • ಸಂಕಷ್ಟಕ್ಕೀಡಾಗುವ ಸಂಭವವನ್ನು ಅಂದಾಜಿಸಲು ಸಮೀಕ್ಷೆ. | • ಎಂಡಬ್ಲ್ಯೂಸಿಡಿ– MWCD ಸಂಯೋಜನೆಯೊಂದಿಗೆ ರಾಷ್ಟ್ರೀಯ ಮಕ್ಕಳ ಸಮೀಕ್ಷೆಯನ್ನು ನಡೆಸುವುದು. |

| | | | |
|---|---|---|---|
| 8. | ಗೃಹ ವ್ಯವಹಾರಗಳ ಸಚಿವಾಲಯ | • ಮಕ್ಕಳು ಹಿಂಸೆ ಹಾಗೂ ನಿಂದನೆಗೆ ಒಳಗಾಗುವುದನ್ನು ತಡೆಗಟ್ಟುವುದು ಹಾಗೂ ಸಂರಕ್ಷಣೆ.<br>• ರಾಜ್ಯಗಳಲ್ಲಿ ಮಕ್ಕಳ ಪುನರ್‌ಸ್ಥಾಪನೆಗಾಗಿ ವಿವಿಧ ಇಲಾಖೆಗಳ ಸಹಭಾಗಿತ್ವ<br>• ತಪ್ಪಿಸಿಕೊಂಡಿರುವ ಮಕ್ಕಳನ್ನು ಪತ್ತೆ ಹಚ್ಚಲು ಮಾಹಿತಿ ಕ್ರೋಢೀಕರಣ. | • ಮಕ್ಕಳ ವಿಶೇಷ ಪೊಲೀಸ್ ಘಟಕಗಳಿಗೆ ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿ.<br>• ಎಂಹೆಚ್‌ಎ 112 ಇಆರ್‌ಎಸ್‌ಎಸ್‌ನೊಂದಿಗೆ ಚೈಲ್ಡ್‌ಲೈನ್ ಸೇವೆಗಳ ಏಕೀಕರಣ.<br>• ತಪ್ಪಿಸಿಕೊಂಡಿರುವ ಮಕ್ಕಳ ಪತ್ತೆಗಾಗಿ ಸುಧಾರಿತ ಸಂಯೋಜನೆಯಿಂದ ಕೂಡಿದ ಸಹಭಾಗಿತ್ವ. |
| 9. | ವಿದೇಶಾಂಗ ವ್ಯವಹಾರಗಳ ಸಚಿವಾಲಯ. | • ಅಂತರರಾಷ್ಟ್ರೀಯ ಗಡಿಗಳಲ್ಲಿ ಮಕ್ಕಳ ಪುನರ್‌ಸ್ಥಾಪನೆಗಾಗಿ ಸಹಯೋಗ. | • ಅಂತರರಾಷ್ಟ್ರೀಯ ಗಡಿಗಳಲ್ಲಿ ಮಕ್ಕಳ ವಾಪಸಾತಿ ಹಾಗೂ ಪುನರ್‌ಸ್ಥಾಪನೆಗಾಗಿ ಪ್ರಾಮಾಣಿತ ಗುಣಮಟ್ಟದ ಕ್ರಮಬದ್ಧ ಕಾರ್ಯವಿಧಾನಗಳ (ಎಸ್‌ಒಪಿಗಳು–SOPs) ಅನುಸರಣೆ. |
| 10. | ನ್ಯಾಯಾಂಗ ಇಲಾಖೆ, ಕಾನೂನು ಮತ್ತು ನ್ಯಾಯಾಂಗ ಸಚಿವಾಲಯ. | • ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳ ಸ್ಥಾಪನೆ; ಹಾಗೂ<br>• ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಸಮರ್ಪಕ ಮಾನವ ಸಂಪನ್ಮೂಲಗಳ ಖಾತ್ರಿ. | • ಎಂಡಬ್ಲ್ಯೂಸಿಡಿ–MWCD ಯೊಂದಿಗೆ ತ್ರೈಮಾಸಿಕ ಭೌತಿಕ ವರದಿಗಳ ಹಂಚಿಕೆ. |
| 11. | ಆಯುಷ್ ಸಚಿವಾಲಯ. | • ಮಕ್ಕಳ ಪೋಷಣಾ ಸಂಸ್ಥೆಗಳು ಅಥವಾ ಸಾಂಸ್ಥಿಕೇತರ ಪೋಷಣೆಯಡಿ ಇರುವ ಮಕ್ಕಳಲ್ಲಿ ಆರೋಗ್ಯಕರ ಜೀವನಶೈಲಿ ಅಭ್ಯಾಸಗಳನ್ನು ಬೆಳೆಸಲು ಸಹಯೋಗ.<br>• ಪೂರಕ ಪೌಷ್ಟಿಕ ಆಹಾರಗಳಿಗಾಗಿ ಆಯುಷ್ ಕೇಂದ್ರಗಳೊಂದಿಗೆ ಮಕ್ಕಳ ಪೋಷಣಾ ಸಂಸ್ಥೆಗಳ ಸಂಪರ್ಕ ಕಲ್ಪಿಸುವಿಕೆ. | • ಒಟ್ಟಾರೆ ಯೋಗಕ್ಷೇಮಕ್ಕಾಗಿ ಸಿಸಿಐಗಳನ್ನು ಆಯುಷ್ ಕೇಂದ್ರಗಳೊಂದಿಗೆ ಸಂಪರ್ಕ ಕಲ್ಪಿಸಲು ಕೈಗೊಳ್ಳಬೇಕಿರುವ ಚಟುವಟಿಕೆಗಳ ಕ್ಯಾಲೆಂಡರ್ ಅಭಿವೃದ್ಧಿ.<br>• ನಿಯಮಿತವಾಗಿ ತ್ರೈಮಾಸಿಕ ಭೌತಿಕ ವರದಿಗಳ ಸಲ್ಲಿಕೆ. |
| 12. | ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ. | • ಎಂಇಐಟಿವೈ–Meity's ಯೋಜನೆಗಳ ಮೂಲಕ ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ ಡಿಜಿಟಲ್ ಸಾಕ್ಷರತೆಯ ವಿಸ್ತರಣೆ.<br>• ಮಕ್ಕಳ ಪೋರ್ಟಲ್ ಅಭಿವೃದ್ಧಿ ಹಾಗೂ ನಿರ್ವಹಣೆ | • ಡಿಜಿಟಲ್ ಸಾಕ್ಷರತೆಗಾಗಿ ಸಿಸಿಐಗಳಲ್ಲಿ ಚಟುವಟಿಕೆಗಳ ಕ್ಯಾಲೆಂಡರ್ ಅಭಿವೃದ್ಧಿ.<br>• ನಿಯಮಿತವಾಗಿ ತ್ರೈಮಾಸಿಕ ಭೌತಿಕ ವರದಿಗಳ ಸಲ್ಲಿಕೆ. |

| | | | |
|---|---|---|---|
| 13. | **ಪಂಚಾಯಿತಿ ರಾಜ್ ಸಚಿವಾಲಯ.** | • **ಮಕ್ಕಳು ತಮ್ಮ ಹಕ್ಕುಗಳನ್ನು ಚಲಾಯಿಸುವಂತೆ ಮಾಡಲು ಗ್ರಾಮ ಪಂಚಾಯಿತಿಗಳನ್ನು ಮಕ್ಕಳ–ಸ್ನೇಹಿ ಪಂಚಾಯಿತಿಗಳಾಗಿ ಅಭಿವೃದ್ಧಿಪಡಿಸುವುದು.** | • **ಬಾಲ (ಮಕ್ಕಳ) ಪಂಚಾಯಿತಿ ಆಯೋಜನೆ**<br>• **ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳಿಗೆ ಅನುಕೂಲ ಮಾಡಿಕೊಡಲು ಆಯವ್ಯಯ ಹಂಚಿಕೆ.** |
| 14. | ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ. | • ಎನ್‌ಸಿಎಲ್‌ಪಿ–NCLP ಯೋಜನೆಯಡಿ ರಕ್ಷಿಸಲ್ಪಟ್ಟಿರುವ ಬಾಲ/ಕಿಶೋರ ಕಾರ್ಮಿಕರನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ಕಲ್ಯಾಣ ಸಮಿತಿಗಳ ಮುಂದೆ ಹಾಜರುಪಡಿಸುವುದು. | • ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯ ಪ್ರಕಾರ ಬಾಲ ಮತ್ತು ಕಿಶೋರ ಕಾರ್ಮಿಕ ಪ್ರಕರಣಗಳನ್ನು ಕಡಿಮೆಗೊಳಿಸಲು ಹಾಗೂ ಪುನರ್ವಸತಿ ಕಲ್ಪಿಸಲು ಕ್ರಮಬದ್ಧ ಕಾರ್ಯವಿಧಾನಗಳನ್ನು (ಎಸ್‌ಒಪಿ–SOP) ಅಭಿವೃದ್ಧಿಪಡಿಸುವುದು ಮತ್ತು ಶಿಕ್ಷಣ ಸಚಿವಾಲಯದಡಿ ಬರುವ ಸಮಗ್ರ ಶಿಕ್ಷಾ ಅಭಿಯಾನದೊಂದಿಗೆ ವಿಲೀನಗೊಳಿಸುವುದು. |
| 15. | ಪೊಲೀಸ್ ಸಂಶೋಧನೆ ಹಾಗೂ ಅಭಿವೃದ್ಧಿ ಬ್ಯೂರೊ (ಬಿಪಿಆರ್&ಡಿ–BPR&D-Bureau of Police Research and Development), ಗೃಹ ವ್ಯವಹಾರಗಳ ಸಚಿವಾಲಯ. | • ಕರ್ತವ್ಯ ಪಾಲಕರ ಸಾಮರ್ಥ್ಯಾಭಿವೃದ್ಧಿ. | • ಎನ್‌ಐಪಿಸಿಸಿಡಿ - NIPCCD ಸಂಯೋಜನೆಯೊಂದಿಗೆ ಬಿಪಿಆರ್&ಡಿ ವತಿಯಿಂದ ತರಬೇತಿ ಕ್ಯಾಲೆಂಡರ್ ಅಭಿವೃದ್ಧಿ ಹಾಗೂ ಮಿಷನ್ ವಾತ್ಸಲ್ಯ ಯೋಜನೆಯ ಸಂಯೋಜನೆಯೊಂದಿಗೆ ಕಾರ್ಯನಿರ್ವಾಹಕರಿಗೆ ತರಬೇತಿ ನೀಡುವುದು.<br>• ನಿಯಮಿತವಾಗಿ ತ್ರೈಮಾಸಿಕ ಭೌತಿಕ ವರದಿಗಳ ಸಲ್ಲಿಕೆ. |
| 16. | ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಎನ್‌ಎಎಲ್‌ಎಸ್–NALSA), ಕಾನೂನು ಸಚಿವಾಲಯ. | • ಕರ್ತವ್ಯ ಪಾಲಕರ ಸಾಮರ್ಥ್ಯಾಭಿವೃದ್ಧಿ. | • ಎನ್‌ಎಎಲ್‌ಎಸ್‌ಎ/NALSA ಎಸ್‌ಎಲ್‌ಎಸ್‌ಎ/SLSA ಡಿಎಲ್‌ಎಸ್‌ಎ – DLSA ವತಿಯಿಂದ ತರಬೇತಿ ಕ್ಯಾಲೆಂಡರ್ ಅಭಿವೃದ್ಧಿ ಮಾಡಿ ಹಾಗೂ ಮಿಷನ್ ವಾತ್ಸಲ್ಯ ಕಾರ್ಯನಿರ್ವಾಹಕರುಗಳಿಗೆ ತರಬೇತಿ ನೀಡಿಕೆ.<br>• ನಿಯಮಿತವಾಗಿ ತ್ರೈಮಾಸಿಕ ಭೌತಿಕ ವರದಿಗಳ ಸಲ್ಲಿಕೆ. |

## (ಸಿ) ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಸಹಭಾಗಿತ್ವ/ ಒಮ್ಮುಖತೆ/ಸಹಯೋಗ:

## Covergence with States/UTs:

| ಕ್ರ.ಸಂ. | ರಾಜ್ಯ | ಚಟುವಟಿಕೆ |
|---|---|---|
| 1. | ಡಿಡಬ್ಲ್ಯೂಸಿಡಿ– DWCD ಇಲಾಖೆ ಅಥವಾ ಎಸ್‌ಜೆಇ– DSJE- Department Of Social Justice ಇಲಾಖೆ. | ಮಾರ್ಗಸೂಚಿಗಳ ಪ್ರಕಾರ ಯೋಜನೆಯ ಅನುಷ್ಠಾನ ಇತರೆ ಇಲಾಖೆಗಳೊಂದಿಗೆ ಸಹಭಾಗಿತ್ವ/ಒಮ್ಮುಖತೆ ಖಾತ್ರಿಪಡಿಸುವುದು. |
| 2. | ರಾಜ್ಯ ಪೊಲೀಸ್. | ಮಕ್ಕಳ ವಿರುದ್ಧದ ಹಿಂಸೆಯನ್ನು ತಡೆಗಟ್ಟುವುದು ಹಾಗೂ ಸಂರಕ್ಷಣೆಯನ್ನು ಖಾತ್ರಿಪಡಿಸುವುದು. |
| 3. | ರಾಜ್ಯ ಹಣಕಾಸು. | ಮಕ್ಕಳ ಆಯವ್ಯಯ ಸಿದ್ಧತೆ. |

## (ಡಿ) ಕಾರ್ಪೋರೇಟ್ ಸಂಸ್ಥೆಗಳೊಂದಿಗೆ ಸಹಭಾಗಿತ್ವ/ಒಮ್ಮುಖತೆ:

## Convergence with Corporate Organisations:

| ಕ್ರ.ಸಂ. | ಏಜೆನ್ಸಿ | ಚಟುವಟಿಕೆ |
|---|---|---|
| 1. | ಖಾಸಗಿ ಸಂಘ ಸಂಸ್ಥೆಗಳು. | • ಮೂಲಸೌಕರ್ಯ ಬೆಂಬಲ ಪ್ರಾಯೋಜಕತ್ವ.<br>• 18 ವರ್ಷಗಳ ನಂತರ ಮಕ್ಕಳಿಗೆ ಶಿಷ್ಯವೃತ್ತಿ ಅವಕಾಶಗಳನ್ನು ಒದಗಿಸುವುದು.<br>• ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ ಕ್ಯಾಂಪಸ್ ಪ್ಲೇಸ್‌ಮೆಂಟ್ ಚಟುವಟಿಕೆಗಳು.<br>• ಉನ್ನತ ಶಿಕ್ಷಣದ ಪ್ರಾಯೋಜಕತ್ವ.<br>• ಅನುಪಾಲನಾ ಸೇವಾ ಗೃಹಗಳಿಗೆ ಬೆಂಬಲ |
| 2. | ಸಾರ್ವಜನಿಕ ವಲಯದ ಸಂಸ್ಥೆಗಳು. | • ಇಂಟರ್ನ್‌ಷಿಪ್ ಅವಕಾಶಗಳು.<br>• ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನಗಳು. |

## 5.2 ಭಾಗೀಧಾರರ ಸಾಮರ್ಥ್ಯ ಅಭಿವೃದ್ಧಿ – Capacity Building of Stake holders:

ಭಾರತದಲ್ಲಿ ಮಕ್ಕಳ ನ್ಯಾಯ ಕಾಯ್ದೆಯ ಅನುಷ್ಠಾನಕ್ಕಾಗಿ, ಸಾಮರ್ಥ್ಯ ಅಭಿವೃದ್ಧಿಗಾಗಿ, ರಾಷ್ಟ್ರೀಯ ಸಾರ್ವಜನಿಕ ಸಹಕಾರ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ಎನ್‌ಐಪಿಸಿಸಿಡಿ–NIPCCD), ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರರೋಗಗಳ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್–NIMHANS), ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್ (ಎಲ್‌ಬಿಎಸ್‌ಎನ್ನರಿರಿ–LBSNAA), ಪೊಲೀಸ್ ಸಂಶೋಧನೆ ಹಾಗೂ ಅಭಿವೃದ್ಧಿ ಬ್ಯೂರೊ (ಬಿಪಿಆರ್&ಡಿ–BPR&D), ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಎನ್‌ಎಎಲ್‌ಎಸ್‌ಎ– NALSA) ಹಾಗೂ ಇತರೆ ಪ್ರತಿಷ್ಠಿತ ರಾಷ್ಟ್ರೀಯ ಹಾಗೂ ರಾಜ್ಯ ತರಬೇತಿ ಸಂಸ್ಥೆಗಳೊಂದಿಗೆ ಸಂಯೋಜನೆ. ಹೆಚ್ಚುವರಿಯಾಗಿ, ಅಭಿಯಾನ ಬಗ್ಗೆ ನಾಗರಿಕರನ್ನು ಸಂವೇದನಾಶೀಲರನ್ನಾಗಿಸಿ, ಮಿಷನ್ ವಾತ್ಸಲ್ಯ ಯೋಜನೆಯನ್ನು ಸಮುದಾಯ ಮಾಲೀಕತ್ವಕ್ಕೆ ಮುಖಾಂತರ ಸುಸ್ಥಿರ ಅನುಷ್ಠಾನವನ್ನು ಖಾತ್ರಿಪಡಿಸುವುದು ಮುಖ್ಯ ಅಂಶವಾಗುತ್ತದೆ.

# 6. ಇತರೆ ಉಪಕ್ರಮಗಳು (ಕಾರ್ಯಕ್ರಮಗಳು) – OTHER INITIATIVES

ದೇಶದಲ್ಲಿ ಮಕ್ಕಳ ಕಲ್ಯಾಣ ಹಾಗೂ ಸಂರಕ್ಷಣೆಗಾಗಿ ಹಾಲಿ ಇರುವ ವ್ಯವಸ್ಥೆಗೆ ಪೂರಕವಾಗಿರುವಂತಹ ಹಲವು ಹೊಸ ಉಪಕ್ರಮಗಳನ್ನು (ಕಾರ್ಯಕ್ರಮಗಳನ್ನು) ಕೈಗೊಳ್ಳಲಾಗಿದೆ. ಸಂವಾದ್, ಸಿಸಿಐಗಳ ಗ್ರೇಡಿಂಗ್, ಎನ್‌ಐಪಿಸಿಸಿಡಿಯಲ್ಲಿ (NIPCCD) ರಾಷ್ಟ್ರೀಯ ಸಂಪನ್ಮೂಲಗಳ ಕೇಂದ್ರ, ಮಕ್ಕಳ ಸಮೀಕ್ಷೆ, ಮಕ್ಕಳ ಸೂಚ್ಯಂಕ, ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಗಳು, ಇತ್ಯಾದಿಗಳಂತಹ ಅಗತ್ಯ ಚಟುವಟಿಕೆಗಳಿಗಾಗಿ ಅಂದಾಜು 2% ರಷ್ಟು ಒಟ್ಟು ವೆಚ್ಚವನ್ನು ಒದಗಿಸಲಾಗುತ್ತಿದೆ. ಸಚಿವಾಲಯದ ವತಿಯಿಂದ ಕೈಗೊಳ್ಳಲು ಪ್ರಸ್ತಾಪಿಸಿರುವ ಚಟುವಟಿಕೆಗಳ ಸೂಚಕ ಪಟ್ಟಿ ಈ ಕೆಳಗಿನಂತಿದೆ:

i. **ಸಂವಾದ್–SAMVAD:** ಸಚಿವಾಲಯವು ನಿಮ್ಹಾನ್ಸ್‌ನ ಸಂಯೋಜನೆಯೊಂದಿಗೆ ಈ ಯೋಜನೆಯಡಿ (ಸಂವಾದ್) ಸಂಕಷ್ಟದಲ್ಲಿರುವ ಹಾಗೂ ಗಂಡಾಂತರದಲ್ಲಿರುವ ಮಕ್ಕಳಿಗಾಗಿ ಬೆಂಬಲ, ವಕಾಲತ್ತು ಹಾಗೂ ಮಾನಸಿಕ ಆರೋಗ್ಯ ಮಧ್ಯಸ್ಥಿಕೆಗಳಿಗೆ ಚಾಲನೆ ನೀಡಿದೆ. ಎಲ್ಲಾ ಮಕ್ಕಳ ಮನೋ ಆರೋಗ್ಯ, ವಿಶೇಷವಾಗಿ ಗಂಡಾಂತರ ಸನ್ನಿವೇಶಗಳಲ್ಲಿರುವಂತಹ ಮಕ್ಕಳ ಮನೋ ಆರೋಗ್ಯ ಪ್ರಮುಖ ಕಾಳಜಿಯಾಗಿದೆ. ಕೇವಲ ಮಕ್ಕಳಲ್ಲದೆ ಬದಲಿಗೆ ಅವರನ್ನು ನೋಡಿಕೊಳ್ಳುವವರಿಗೂ ಸಹ ಈ ಮಕ್ಕಳೊಂದಿಗೆ ಕೆಲಸ ಮಾಡುವಾಗ ಆಪ್ತಸಮಾಲೋಚನೆಯ ಬೆಂಬಲದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಮಕ್ಕಳು ಹಾಗೂ ಪಾಲಕರು ಇಬ್ಬರಿಗೂ ಸಹ ಅಗತ್ಯವಿರುವಂತಹ ಮನೋ–ಸಾಮಾಜಿಕ ಆಪ್ತಸಮಾಲೋಚನಾ ಸೇವೆಗಳ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ದೇಶದಲ್ಲಿರುವ ಪ್ರತಿಷ್ಠಿತ ವೈದ್ಯಕೀಯ ಆರೋಗ್ಯ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಆಪ್ತಸಮಾಲೋಚನೆಗೆ ಸುಗಮಗಾರಿಕೆ ಕೈಗೊಳ್ಳಬೇಕೆಂದು ಪ್ರಸ್ತಾಪಿಸಲಾಗಿದೆ. ಮಿಷನ್ ವಾತ್ಸಲ್ಯ ಯೋಜನೆಯು ಇತರೆ ಸೂಕ್ತ ಸಂಸ್ಥೆಗಳೊಂದಿಗೆ ಭಾಗವಹಿಸುವ ಮೂಲಕ ಹಾಗೂ ಸಂವಾದ್‌ನ ಅನುಭವ / ಕಲಿಕೆಗೆ ಅನುಕೂಲ ಮಾಡಿ ಕೊಡುವ ಮೂಲಕ ಮತ್ತು ದೇಶದ ಇತರೆ ಭಾಗಗಳಲ್ಲಿಯೂ ಇದೇ ರೀತಿಯ ಕೇಂದ್ರಗಳನ್ನು ರಚಿಸುವ ಮೂಲಕ ಈ ಕಾರ್ಯಕ್ರಮಗಳನ್ನು ಮತ್ತಷ್ಟು ವಿಸ್ತರಿಸುವ ಗುರಿಯನ್ನು ಹೊಂದಿದೆ.

ii. **ಮಕ್ಕಳ ಪೋಷಣಾ ಸಂಸ್ಥೆಗಳ ಶ್ರೇಣೀಕರಣ – Grading of Child Care Institutions:** ರಾಜ್ಯ ಸರ್ಕಾರಗಳು ನಿಗಧಿತ ಅವಧಿಯಲ್ಲಿ ಪ್ರತಿ ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆಯ (ಸಿಸಿಐ) ಶ್ರೇಣೀಕರಣ ಮಾಡುವ ಚಟುವಟಿಕೆಯನ್ನು ಕೈಗೊಳ್ಳಬೇಕು. ಮೂಲಸೌಕರ್ಯ, ಸೇವೆಗಳ ಗುಣಮಟ್ಟ, ಮಕ್ಕಳ ಆರೋಗ್ಯ ಮತ್ತು ಶಿಕ್ಷಣ, ಪುನರ್‌ಸ್ಥಾಪನೆ ಹಾಗೂ ಪುನರ್ವಸತಿ ಹಾಗೂ ಇನ್ನಿತರೆ ಸೇವೆಗಳನ್ನು ಆಧರಿಸಿ ಶ್ರೇಣೀಕರಣ ಮಾಡಬೇಕು. ಮಾನದಂಡಗಳು ಹಾಗೂ ಸೂಚಕಗಳನ್ನು ವಿನ್ಯಾಸಪಡಿಸುವುದು ಒಳಗೊಂಡಂತೆ ಸಿಸಿಐಗಳ ಶ್ರೇಣೀಕರಣವನ್ನು ರಾಷ್ಟ್ರೀಯ ಮಕ್ಕಳ ಅಭಿವೃದ್ಧಿ ಹಾಗೂ ಸಾರ್ವಜನಿಕ ಸಹಕಾರ ಸಂಸ್ಥೆಯ (ಎನ್‌ಐಪಿಸಿಸಿಡಿ) ಸಮಾಲೋಚನೆಯೊಂದಿಗೆ ಕೈಗೊಳ್ಳುವುದು

iii. **ರಾಷ್ಟ್ರೀಯ ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಅಭಿವೃದ್ಧಿಯ ರಾಷ್ಟ್ರೀಯ ಮಕ್ಕಳ ಸಂಪನ್ಮೂಲ ಕೇಂದ್ರಕ್ಕೆ ಬೆಂಬಲ –Supporting National Child Resource Centre at National Institute of Public cooperation and Child Development:** ತಾಂತ್ರಿಕ ಹೂಡುವಳಿಗಳನ್ನು ಒದಗಿಸುವುದು ಹಾಗೂ ಮಕ್ಕಳಿಗೆ ಸಂಬಂಧಪಟ್ಟ ವಿಷಯಗಳ ಮೇಲೆ ಶೈಕ್ಷಣಿಕ ಸಂಶೋಧನೆಗಳಿಗೆ ಸುಗಮಗಾರಿಕೆಯನ್ನು ಒದಗಿಸುವ ಕೆಲಸಗಳ ಮೂಲಕ ಮಿಷನ್‌ಗೆ ನೆರವಾಗುವುದರೊಂದಿಗೆ ಎನ್‌ಐಪಿಸಿಸಿಡಿ (ಕೇಂದ್ರ ಸ್ಥಾನ) ಯಲ್ಲಿರುವ ರಾಷ್ಟ್ರೀಯ ಮಕ್ಕಳ ಸಂಪನ್ಮೂಲ ಕೇಂದ್ರವನ್ನು ಬಲಪಡಿಸಲಾಗುವುದು. ಮಕ್ಕಳ ರಕ್ಷಣಾ ಸೇವೆಗಳು ಹಾಗೂ ಮಕ್ಕಳ ಕಲ್ಯಾಣ ಸೇವೆಗಳನ್ನು ಬಲಪಡಿಸಲು ಮಕ್ಕಳ ರಕ್ಷಣಾ ವ್ಯವಸ್ಥೆಯಡಿ ಇರುವಂತಹ ವಿವಿಧ ಭಾಗೀದಾರರಿಗೆ ತಾಂತ್ರಿಕ ಮಾರ್ಗದರ್ಶನ ಒದಗಿಸಲು ಜ್ಞಾನ ಕೇಂದ್ರವನ್ನು ಸೃಷ್ಟಿಸುವುದು ಸಂಪನ್ಮೂಲ ಕೇಂದ್ರದ ಉದ್ದೇಶವಾಗಿರುತ್ತದೆ.

iv. **ರಾಷ್ಟ್ರೀಯ ಮಕ್ಕಳ ಸಮೀಕ್ಷೆ ಹಾಗೂ ಮಕ್ಕಳ ಅಭಿವೃದ್ಧಿ ಸೂಚ್ಯಂಕ – Conducting a National Survey and Development of Child Index**: ಸಾಂಖ್ಯಿಕ ಹಾಗೂ ಕಾರ್ಯಕ್ರಮ ಅನುಷ್ಠಾನ ಸಚಿವಾಲಯ (ಎಂಓಎಸ್‌ಪಿಐ–MoSPI-Ministry of Statistics and Program Implimentation) ಸಂಯೋಜನೆಯೊಂದಿಗೆ; ಸಾಂಖ್ಯಿಕ ಹಾಗೂ ಕಾರ್ಯಕ್ರಮ ಅನುಷ್ಠಾನ (ಎಂಓಎಸ್‌ಪಿಐ) ಸಚಿವಾಲಯದೊಂದಿಗೆ ರಾಷ್ಟ್ರೀಯ ಮಕ್ಕಳ ಅಭಿವೃದ್ಧಿ ಸೂಚ್ಯಂಕ ಹಾಗೂ ಮಕ್ಕಳ ಸಮೀಕ್ಷೆಯನ್ನು ವಿನ್ಯಾಸಪಡಿಸಿ, ಅನುಷ್ಠಾನಗೊಳಿಸಲು ಪ್ರಸ್ತಾಪಿಸಿದೆ. ನೀತಿ, ಕಾರ್ಯಕ್ರಮಗಳು ಅಥವಾ ಯೋಜನೆಗಳ ನಿಯಮಾವಳಿಗಳಿಗೆ ಸೂಕ್ತ ಪ್ರಕ್ರಿಯೆಯನ್ನು ಖಾತ್ರಿಪಡಿಸಲು ಸಕಾಲಿಕ ಮಕ್ಕಳ ಸಮೀಕ್ಷೆಯನ್ನು ನಡೆಸುವ ಮೂಲಕ ಮಕ್ಕಳ ಅಗತ್ಯಗಳನ್ನು ಮ್ಯಾಪ್ ಮಾಡುವುದು ಅಗತ್ಯ. ಮಕ್ಕಳ ಸೂಚ್ಯಂಕದ ನೆರವಿನೊಂದಿಗೆ ವಿವಿಧ ಜಿಲ್ಲೆಗಳು, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಕಾರ್ಯಕ್ಷಮತೆವನ್ನು ಮೌಲ್ಯಮಾಪನ ಮಾಡಲಾಗುವುದು ಹಾಗೂ ಗುರಿಯಾಗಿಸಿದ ಮಧ್ಯಸ್ಥಿಕೆಗಳನ್ನು ವಿನ್ಯಾಸಪಡಿಸಲು ನಿರ್ಧಿಷ್ಟ ಅಗತ್ಯಗಳು/ ಕ್ಷೇತ್ರಗಳನ್ನು ಗುರುತಿಸಲಾಗುವುದು.

v. **ಮಕ್ಕಳ ಸಂರಕ್ಷಣಾ ಪ್ರಶಸ್ತಿಗಳು – Child Protection Awards**: ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಕ್ಕಳ ರಕ್ಷಣಾ ಕಾರ್ಯಕ್ರಮಗಳ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಿಬ್ಬಂದಿಗಳ ಕೆಲಸ, ಪರಿಶ್ರಮ, ಬದ್ಧತೆ ಹಾಗೂ ಉತ್ಕೃಷ್ಟತೆ ಹಾಗೂ ಅತ್ಯುನ್ನತ ಗುಣಮಟ್ಟದ ನಾಯಕತ್ವದ ಗುಣಗಳನ್ನು ಗುರುತಿಸಿ ಮಕ್ಕಳ ಸಂರಕ್ಷಣಾ ಪ್ರಶಸ್ತಿಗಳನ್ನು ನೀಡುವಂತೆ ಪ್ರಸ್ತಾಪಿಸಲಾಗಿದೆ. ರಾಜ್ಯ ಸರ್ಕಾರ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಶಿಫಾರಸ್ಸನ್ನು ಆಧರಿಸಿ ಪ್ರಶಸ್ತಿಗಳನ್ನು ನೀಡಬೇಕು.

vi. **ಸಂಶೋಧನೆ ಹಾಗೂ ದಾಖಲೆ ನಿರ್ವಹಣೆ –Research and Documentation**: ಮಕ್ಕಳ ಕಲ್ಯಾಣ ಹಾಗೂ ಸಂರಕ್ಷಣೆಯ ವಿಷಯಗಳ ಮೇಲಿನ ಪರಿಣಾಮದ ಬೇರುಮಟ್ಟದ ಸನ್ನಿವೇಶವನ್ನು ವಿಶ್ಲೇಷಿಸಲು ಹಾಗೂ ಸಂಭವನೀಯ ಪರಿಹಾರಗಳನ್ನು ಅನ್ವಯಿಸಲು ಎಲ್ಲಾ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ತಮ್ಮ ತಮ್ಮ ಹಂತದಲ್ಲಿ ಅಗತ್ಯ ಆಧಾರಿತ ಸಂಶೋಧನೆ ಹಾಗೂ ದಾಖಲೆಪತ್ರ ನಿರ್ವಹಣಾ ಚಟುವಟಿಕೆಗಳನ್ನು ಕೈಗೊಳ್ಳುವುದು.

vii. **ವಾರ್ತಾಪತ್ರಗಳ ಪ್ರಕಟಣೆ –Publication of Newsletters**: ಸಚಿವಾಲಯ, ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳೊಂದಿಗೆ, ಮಕ್ಕಳ ಕಲ್ಯಾಣ ಹಾಗೂ ಸಂರಕ್ಷಣೆಯ ಕ್ಷೇತ್ರದಲ್ಲಿ ಆಯಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮಾಡಿರುವ ಸಾಧನೆಗಳು ಹಾಗೂ ಉತ್ತಮ ಅಭ್ಯಾಸಗಳನ್ನು ಗುರುತಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳು, ಸುದ್ದಿಗಳ ಕುರಿತು ದ್ವೈವಾರ್ಷಿಕ ವಾರ್ತಾಪತ್ರಗಳನ್ನು ಪ್ರಕಟಿಸುವುದು. ಈ ವಾರ್ತಾಪತ್ರಗಳು, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಇತರೆ ಪ್ರಮುಖ ಭಾಗೀದಾರರೊಂದಿಗೆ ಯೋಜನೆಯ ಒಮ್ಮುಖತೆಗಾಗಿ/ಸಹಭಾಗಿತ್ವಕ್ಕಾಗಿ ಕೈಗೊಂಡಿರುವ ಕ್ರಮಗಳು ಹಾಗೂ ಪ್ರಯತ್ನಗಳ ಕುರಿತು ಸುದ್ದಿಗಳನ್ನು ಒಳಗೊಂಡಿರಬೇಕು. ಮಕ್ಕಳ ಹಕ್ಕುಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು, ಸರ್ಕಾರದ ವತಿಯಿಂದ ಎಲ್ಲಾ ಹಂತಗಳಲ್ಲಿಯೂ ಸಮುದಾಯದ ಸಹಭಾಗಿತ್ವದೊಂದಿಗೆ ಕೈಗೊಳ್ಳಲಾಗಿರುವ ಮಕ್ಕಳ ಕಲ್ಯಾಣಕ್ಕೆ ಸಂಬಂಧಪಟ್ಟ ಕ್ರಮಗಳನ್ನು ಸಾರ್ವಜನಿಕರಿಗೆ ತಲುಪಿಸುವುದು ಈ ವಾರ್ತಾಪತ್ರಗಳ ಉದ್ದೇಶವಾಗಿರಬೇಕು. ರಾಜ್ಯಗಳು/ ಕೇಂದ್ರಾಡಳಿತ ಸರ್ಕಾರಗಳು ಈ ವಾರ್ತಾಪತ್ರಗಳನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.

viii. **ಸ್ವಯಂಸೇವಕರನ್ನು ತೊಡಗಿಸಿಕೊಳ್ಳುವುದು – Engaging Volunteers**: ಸಾರ್ವಜನಿಕ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಪ್ರಯತ್ನಗಳಲ್ಲಿ ಪರಸ್ಪರ ಸಂವಾದ, ಸಹಕಾರವನ್ನು ಅಭಿವೃದ್ಧಿಪಡಿಸಲು, ಮಿಷನ್ ಯೋಜನೆಯಡಿ ಸಂಪರ್ಕಗಳನ್ನು ಪೋಷಿಸಲು ಶೈಕ್ಷಣಿಕ ಸಂಸ್ಥೆಗಳು/ ವಿಶ್ವವಿದ್ಯಾಲಯದಿಂದ ಇಂಟರ್ನ್‌ಷಿಪ್‌ಗಳು, ವಿನಿಮಯ ಕಾರ್ಯಕ್ರಮಗಳೊಂದಿಗೆ ಸಂಯೋಜನೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಮಿಷನ್‌ನ ಯಶಸ್ಸಿಗಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳಲು, ನಾಗರಿಕ ಸಮಾಜ, ಜನರ ಗುಂಪುಗಳು ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳನ್ನು ಮಿಷನ್ ವಾತ್ಸಲ್ಯ

ಅಡಿ ವ್ಯವಸ್ಥಿತವಾದ ರೀತಿಯಲ್ಲಿ ಹಾಗೂ ಯೋಜಿತ ರೀತಿಯಲ್ಲಿ ಭಾಗವಹಿಸುವುದನ್ನು ಪ್ರೋತ್ಸಾಹಿಸಲು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಎಸ್‌ಎಸ್ ಸ್ವಯಂಸೇವಕರು, ನೆಹರೂ ಯುವ ಕೇಂದ್ರಗಳು, ಇತ್ಯಾದಿ, ಅಥವಾ ಇದೇ ರೀತಿಯ ಉದ್ದೇಶಗಳೊಂದಿಗೆ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಸರ್ಕಾರೇತರ ಸಂಸ್ಥೆಗಳು, ಸ್ವಸಹಾಯ ಗುಂಪುಗಳು, ಇತ್ಯಾದಿಗಳು ಒಳಗೊಂಡಂತೆ ಯಾವುದಾದರೂ ಸರ್ಕಾರಿ ಉಪಕ್ರಮದಡಿಯ ಸಂಸ್ಥೆಗಳನ್ನು ಗುರುತಿಸುವುದು.

***ix.*** **ಮಕ್ಕಳ ಆಯವ್ಯಯ–Child Budgeting:** ಯಾವುದೇ ವಯಸ್ಸು ಅಥವಾ ಲಿಂಗಭೇದವಿಲ್ಲದೆ ಎಲ್ಲಾ ಜನರಿಗಾಗಿ ದೊಡ್ಡ ಸಂಖ್ಯೆಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ವಾಸ್ತವಾಂಶವನ್ನು ಮಿಷನ್ ವಾತ್ಸಲ್ಯ ಪರಿಗಣಿಸುತ್ತದೆ. ***ಆದರೆ ಸೌಲಭ್ಯಗಳು ಅಥವಾ ಸೇವೆಗಳನ್ನು ವಯಸ್ಕರ ದೃಷ್ಟಿಕೋನದಿಂದ ಸೃಷ್ಟಿಸಲಾಗಿರುವ ಕಾರಣದಿಂದಾಗಿ, ಮಕ್ಕಳ ಅಗತ್ಯಗಳಿಗೆ ಪೂರಕವಾಗಿಲ್ಲ. ಉದಾಹರಣೆಗೆ, ಸಾರ್ವಜನಿಕ ಸ್ಥಳಗಳಲ್ಲಿ ನೀರಿನ ನಲ್ಲಿಗಳು ಬಹಳ ಎತ್ತರದಲ್ಲಿರುತ್ತವೆ, ಮಕ್ಕಳಿಗೆ ಎಟುಕುವುದಿಲ್ಲ. ಇದರಿಂದಾಗಿ ಮಕ್ಕಳು ಆ ಸೇವೆಗಳಿಂದ ವಂಚಿತರಾದಂತಾಗುತ್ತದೆ. ಸಾರ್ವಜನಿಕ ಸೌಲಭ್ಯಗಳು ಅಥವಾ ಸಾರ್ವಜನಿಕ ಸೇವೆಗಳನ್ನು ಸೃಷ್ಟಿಸುವಾಗ ಮಕ್ಕಳ ಕುರಿತು ಸಂವೇದನಾಶೀಲತೆಯನ್ನು ಹೊಂದಿರುವುದು ಅಗತ್ಯ. ಮಿಷನ್ ವಾತ್ಸಲ್ಯದಡಿ ಎಲ್ಲಾ ಸಚಿವಾಲಯಗಳು, ಇಲಾಖೆಗಳು ಹಾಗೂ ರಾಜ್ಯಗಳು ತಮ್ಮ ಯೋಜನೆಗಳಡಿ ಮಕ್ಕಳಿಗೆ ಸೂಕ್ತವಾದ ರೀತಿಯಲ್ಲಿ ಅನುಕೂಲಗಳನ್ನು ಸೃಷ್ಟಿಸಬೇಕು ಹಾಗೂ ಕಾರ್ಯಕ್ರಮಗಳನ್ನು ವಿನ್ಯಾಸಪಡಿಸುವಾಗ ಮಕ್ಕಳ ಸಂವೇದನಾಶೀಲತೆಯನ್ನು ಗಮನದಲ್ಲಿಟ್ಟುಕೊಂಡಿರಬೇಕು.***

# ಅನುಬಂಧಗಳು–ANNEXURES

## ಯೋಜನೆಯ ನಿಧಿ ವಿಧಾನ – SCHEME FUNDING PATTERN

ಮಿಷನ್ ವಾತ್ಸಲ್ಯ ಒಂದು ಕೇಂದ್ರ ಸರ್ಕಾರ ಪ್ರಾಯೋಜಿತ ಕಾರ್ಯಕ್ರವಾಗಿದ್ದು, ಬಹುಪಾಲು ಕೇಂದ್ರ ಸರ್ಕಾರದಿಂದ ಬರುವಂತಹ ಹಣಕಾಸಿನ ನೆರವಿನೊಂದಿಗೆ ರಾಜ್ಯ ಸರ್ಕಾರಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.

**ವಿವಿಧ ಅಂಶಗಳ ವೆಚ್ಚಗಳ ಪಾಲಿನ ಅನುಪಾತ–Cost Sharing Ratio for Various Components**

| ಕ್ರಸಂ. | ಅಂಶಗಳು | ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು | ಕೇಂದ್ರದ ಪಾಲು | ರಾಜ್ಯದ ಪಾಲು |
|---|---|---|---|---|
| 1. | ಎಸ್‌ಸಿಪಿಎಸ್, ಡಿಸಿಪಿಯು, ಎಸ್‌ಎಆರ್‌ಎ, ಸಿಡಬ್ಲೂಸಿ, ಜೆಜೆಬಿ, ಮಕ್ಕಳ ಪೋಷಣಾ ಸಂಸ್ಥೆಗಳು, ವೀಕ್ಷಣಾಲಯ, ವಿಶೇಷ ಗೃಹ, ಎಸ್‌ಎಎ ಹಾಗೂ ರಾಜ್ಯ/ ಕೇಂದ್ರ ಸರ್ಕಾರ ನಡೆಸುತ್ತಿರುವ ಮುಕ್ತ ತಂಗುದಾಣ<br>ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಎಲ್ಲಾ ಸಿಸಿಐಗಳು (ಮಕ್ಕಳ ಪೋಷಣಾ ಮತ್ತು ರಕ್ಷಣಾ ಸಂಸ್ಥೆಗಳು, ವೀಕ್ಷಣಾಲಯ, ವಿಶೇಷ ಗೃಹ, ಎಸ್‌ಎಎ ಹಾಗೂ ಮುಕ್ತ ತಂಗುದಾಣ) | ಆಂಧ್ರ ಪ್ರದೇಶ, ಬಿಹಾರ, ಚತ್ತೀಸ್‌ಘಡ, ಗೋವಾ, ಗುಜರಾತ್, ಹರಿಯಾಣ, ಜಾರ್‌ಖಂಡ್, ಕರ್ನಾಟಕ, ಕೇರಳ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ಪಂಜಾಬ್, ರಾಜಸ್ತಾನ, ತಮಿಳುನಾಡು, ತೆಲಂಗಾಣ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಹಾಗೂ ಶಾಸಕಾಂಗವಿರುವ ಕೇಂದ್ರಾಡಳಿತ ಪ್ರದೇಶ (ದೆಹಲಿ & ಪುದುಚೆರಿ) | 60% | 40% |
| 2. | ರಾಜ್ಯ/ ಕೇಂದ್ರಾಡಳಿತ ಸರ್ಕಾರಗಳು ನಡೆಸುತ್ತಿರುವ ಎಸ್‌ಸಿಪಿಎಸ್, ಡಿಸಿಪಿಯು, ಎಸ್‌ಎಆರ್‌ಎ, ಸಿಡಬ್ಲ್ಯೂಸಿ, ಜೆಜೆಬಿ, ಮಕ್ಕಳ ಪೋಷಣಾ ಸಂಸ್ಥೆಗಳು, ವೀಕ್ಷಣಾಲಯ, ವಿಶೇಷ ಗೃಹ, ಎಸ್‌ಎಎ ಹಾಗೂ ಮುಕ್ತ ತಂಗುದಾಣ<br>ಸರ್ಕಾರೇತರ ಸಂಸ್ಥೆಗಳು ನೆಡಸುತ್ತಿರುವ ಎಲ್ಲಾ ಸಿಸಿಐಗಳು (ಮಕ್ಕಳ ಪೋಷಣಾ ಮತ್ತು ರಕ್ಕಣಾ ಸಂಸ್ಥೆಗಳು, ವೀಕ್ಷಣಾಲಯ, ವಿಶೇಷ ಗೃಹ, ಎಸ್‌ಎಎ ಹಾಗೂ ಮುಕ್ತ ತಂಗುದಾಣ) | ಅರುಣಾಚಲ ಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ಸಿಕ್ಕಿಂ, ತ್ರಿಪುರಾ ಹಾಗೂ ಉತ್ತರಾಖಂಡ್ | 90% | 10%' |
| 3. | ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ನಡೆಸುತ್ತಿರುವ ಎಸ್‌ಸಿಪಿಎಸ್, ಡಿಸಿಪಿಯು, ಎಸ್‌ಎಆರ್‌ಎ, ಸಿಡಬ್ಲ್ಯೂಸಿ, ಜೆಜೆಬಿ, ಮಕ್ಕಳ ಪೋಷಣಾ ಸಂಸ್ಥೆಗಳು, ವೀಕ್ಷಣಾಲಯ, ವಿಶೇಷ ಗೃಹ, ಎಸ್‌ಎಎ ಹಾಗೂ ಮುಕ್ತ ತಂಗುದಾಣ | ಶಾಸಕಾಂಗ ಇಲ್ಲದಿರುವಂತಹ ಕೇಂದ್ರಾಡಳಿತ ಪ್ರದೇಶ (ಅಂಡಮಾನ್ & ನಿಕೋಬಾರ್ ದ್ವೀಪಗಳು, ಚಂಡೀಘಡ, ದಾದ್ರ & ನಾಗರ ಹವೇಲಿ ಹಾಗೂ ದಮನ್ & ದಿಯು, ಲಕ್ಷದ್ವೀಪ ಮತ್ತು ಲಡಾಖ್) | 100% | – |

## ಅನುಬಂಧ – ANNEXURE-1

## ಕೇಂದ್ರ ಯೋಜನಾ ನಿಗಾವಣಾ ಘಟಕಕ್ಕೆ ಹಣಕಾಸಿನ ಬೆಂಬಲ (ಸಿಪಿಎಂಯು) – Financial support for the Central Project Monitoring Unit (CPMU):

| ಕ್ರ.ಸಂ. | ವೆಚ್ಚ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)–Non-recurring Expenditure (Once in five year)** | | |
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣ (ಮೇಜುಗಳು, ಖುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಕಗಳು, ಕಪಾಟುಗಳು, ಜೆರಾಕ್ಸ್ ಯಂತ್ರ, ಇತ್ಯಾದಿ) | 50,00,000 |
| 2. | ಯುಪಿಎಸ್ ಜೊತೆಗೆ ಕಂಪ್ಯೂಟರ್‌ಗಳು/ ಲ್ಯಾಪ್‌ಟಾಪ್‌ಗಳು (ಸಾಫ್ಟ್‌ವೇರ್ ಪರವಾನಿಗೆ ವೆಚ್ಚದೊಂದಿಗೆ) ಹಾಗೂ ಪ್ರಿಂಟರ್ ಕಂ ಸ್ಕ್ಯಾನರ್‌ಗಳು | |
| | **ಒಟ್ಟು** | **50,00,000** |

**ಆವರ್ತಕ ವೆಚ್ಚ (ವಾರ್ಷಿಕ) – Recurring Expenditure (Per annum)**

| **(ಬಿ) ಸಿಪಿಎಂಯು ಅಡಿ ಸಿಬ್ಬಂದಿ** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಗುತ್ತಿಗೆ ಆಧಾರಿತ ಸಿಬ್ಬಂದಿಗಳ ವೇತನ | 85,20,000 |
| | **ಒಟ್ಟು** | **85,20,000** |

*2023–24 ರಿಂದ 2025–26ನೇ ವರೆಗೆ ಹಣಕಾಸು ಪ್ರತಿ ವರ್ಷ, ತೃಪ್ತಿಕರ ಕೆಲಸದ ನಿರ್ವಹಣೆಯನ್ನು ಆಧರಿಸಿ ವಾರ್ಷಿಕ 3% ವೇತನ ಹೆಚ್ಚಳ*

| **(ಸಿ) ಆಡಳಿತಾತ್ಮಕ ವೆಚ್ಚಗಳು** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಪ್ರಯಾಣ ಭತ್ಯೆ | 15,00,00 |
| 2. | ಬಾಡಿಗೆ, ಟ್ಯಾಕ್ಸಿ ಮತ್ತು ಸಿಬ್ಬಂದಿ ಸಲಹಾಗಾರರ ಸೇವೆಗಳು, ತರಬೇತಿ ಮತ್ತು ಸಾಮರ್ಥ್ಯ ಅಭಿವೃದ್ಧಿ, ವಕಾಲತ್ತು ಹಾಗೂ ಅರಿವು ಮೂಡಿಸುವಿಕೆ, ಪ್ರಾದೇಶಿಕ ಸಮಾಲೋಚನಾ ಸಭೆಗಳು, ವಾಹನಗಳನ್ನು ಬಾಡಿಗೆ ಪಡೆಯುವುದು, ಇತ್ಯಾದಿ ಒಳಗೊಂಡಂತಹ ಆಕಸ್ಮಿಕ ವೆಚ್ಚಗಳು | 1,00,00,000 |
| 3. | ವೆಬ್ ಪೋರ್ಟಲ್ ನಿರ್ವಹಣೆ | 1,00,00,000 |
| 4. | ವಿದೇಶ ಪ್ರವಾಸ, ಹಾಗೂ ವಿದೇಶಗಳಲ್ಲಿ ಅತ್ಯುತ್ತಮ ಅಭ್ಯಾಸಗಳ ಮನನ ಮತ್ತು ಅಧ್ಯಯನಕ್ಕಾಗಿ. | 50,00,000 |
| | **ಒಟ್ಟು** | **2,65,00,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **3,50,20,000** |
| **ಒಟ್ಟು (ಎ+ಬಿ+ಸಿ) ಅನಾವರ್ತಕ + ಆವರ್ತಕ ಅನುದಾನ.** | | **4,00,20,000** |

# ರಾಜ್ಯ ಅನುಬಂಧಗಳು – STATE ANNEXURES- II

## ಎ. ಎಸ್‌ಸಿಪಿಎಸ್ ನಲ್ಲಿ ಕರ್ತವ್ಯ ಹೊಂದಿರುವವರ ಪಾತ್ರಗಳು ಹಾಗೂ ಜವಾಬ್ದಾರಿಗಳು– A. Roles and Responsibilities of the Duty holders in SCPS:

### 1) ಕಾರ್ಯಕ್ರಮ ವ್ಯವಸ್ಥಾಪಕರು (ನಿರ್ವಾಹಕರು) – Program Manager:

i. ಕಾರ್ಯಕ್ರಮ ವ್ಯವಸ್ಥಾಪಕರು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ನೆರವಿನೊಂದಿಗೆ ರಾಜ್ಯ ಮಟ್ಟದಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ಹಾಗೂ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಕಾರ್ಯಕ್ರಮಗಳು ಹಾಗೂ ಸೇವೆಗಳ ಸಂಯೋಜನೆ ಹಾಗೂ ಮೇಲ್ವಿಚಾರಣೆ.

ii. ಮೈತ್ರಿ ವ್ಯವಸ್ಥೆಗಳು (ಪೊಲೀಸ್, ನ್ಯಾಯಾಂಗ, ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು, ಸ್ವಯಂಸೇವಾ ಸಂಸ್ಥೆ ಹಾಗೂ ಸಾರ್ವಜನಿಕರನ್ನು ಒಳಗೊಂಡು) ಹಾಗೂ ರಾಜ್ಯ ಅಥವಾ ಜಿಲ್ಲಾ ಮಟ್ಟದಲ್ಲಿ ಮಿಷನ್ ಅಡಿ ಒಳಗೊಂಡಿರುವ ಸಿಬ್ಬಂದಿಗಳ ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿಯ ಸುಗಮಗಾರಿಕೆ, ಸಂಯೋಜನೆ ಹಾಗೂ ಮೇಲ್ವಿಚಾರಣೆ.

iii. ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿ ಉದ್ದೇಶಕ್ಕಾಗಿ ರಾಷ್ಟ್ರೀಯ ಸಾರ್ವಜನಿಕ ಸಹಕಾರ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯೊಂದಿಗೆ (ಎನ್‌ಐಪಿಸಿಸಿಡಿ–NIPCCD) ಹಾಗೂ ಕೇಂದ್ರ/ ರಾಜ್ಯ ಸರ್ಕಾರಗಳ ಇತರೆ ತರಬೇತಿ ಸಂಸ್ಥೆಗಳೊಂದಿಗೆ ಸಂಪರ್ಕ ಸ್ಥಾಪನೆ.

iv. ಮಕ್ಕಳ ಹಕ್ಕುಗಳು, ಕಾನೂನು ಹಾಗೂ ನೀತಿ ತತ್ವಗಳಂತಹ ಪ್ರಮುಖ ಅಂಶಗಳ ಕಡ್ಡಾಯ ನಿರ್ವಹಣೆಯೊಂದಿಗೆ ಸ್ಥಳೀಯ ಭಾಷೆಯಲ್ಲಿ, ರಾಜ್ಯ ನಿರ್ಧಿಷ್ಟ ಸಾಮಾಜಿಕ–ಸಾಂಸ್ಕೃತಿಕ ಪರಿಸರಕ್ಕೆ ಸೂಕ್ತವಾದಂತಹ ಮಕ್ಕಳ ಹಕ್ಕುಗಳು ಹಾಗೂ ರಕ್ಷಣೆಗೆ ಸಂಬಂಧಿಸಿದ ಐಇಸಿ (ಮಾಹಿತಿ, ಶಿಕ್ಷಣ ಮತ್ತು ಸಂವಹನ) ಸಾಮಗ್ರಿಗಳ ಅಭಿವೃದ್ಧಿಯನ್ನು ಖಾತ್ರಿಪಡಿಸುವುದು ಹಾಗೂ ರಾಜ್ಯ ಮಾಧ್ಯಮ ಸಂವಹನಾ ಯೋಜನೆ ರಚಿಸಲು ನೆರವಾಗುವುದು.

v. ಕಾರ್ಯಕ್ರಮ ವ್ಯವಸ್ಥಾಪಕರು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಬೆಂಬಲದೊಂದಿಗೆ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಬಾಲ/ಕಿಶೋರ ಕಾರ್ಮಿಕ ಪದ್ಧತಿ, ಬಾಲ ಭಿಕ್ಷಾಟನೆ, ಬಾಲ್ಯವಿವಾಹ, ಹೆಣ್ಣು ಭ್ರೂಣಹತ್ಯೆ, ಹೆಣ್ಣು ಮಕ್ಕಳ ವಿರುದ್ಧ ತಾರತಮ್ಯತೆ, ಇತ್ಯಾದಿಯಂತಹ ಸಾಮಾಜಿಕ ನಡವಳಿಕೆಗಳು ಹಾಗೂ ಸಾಂಪ್ರದಾಯಿಕ ಅಭ್ಯಾಸಗಳನ್ನು ಬದಲಾಯಿಸಲು ಮಕ್ಕಳ ರಕ್ಷಣೆಯ ವಿಷಯಗಳ ಕುರಿತು ಅರಿವು ಮೂಡಿಸುವ ಚಟುವಟಿಕೆಗಳಿಗೆ ಸಂಯೋಜನೆ ಒದಗಿಸುವುದು.

vi. ಮಕ್ಕಳ ಕಲ್ಯಾಣ ಸಮಿತಿಗಳು, ಮಕ್ಕಳ ನ್ಯಾಯ ಮಂಡಳಿಗಳು, ಎಸ್‌ಜೆಪಿಯು, ರಾಜ್ಯ ಸಲಹಾ ಮಂಡಳಿ, ಇತ್ಯಾದಿಯಂತಹ ಮಕ್ಕಳ ನ್ಯಾಯ ಕಾಯ್ದೆ ಅಡಿ ಬರುವಂತಹ ಶಾಸನಬದ್ಧ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸುಗಮಗಾರಿಕೆ ಹಾಗೂ ಬೆಂಬಲ ಒದಗಿಸುವುದು.

vii. ರಾಜ್ಯದಲ್ಲಿ ಮಕ್ಕಳಿಗೆ ಆಶ್ರಯ ನೀಡಿರುವ ಎಲ್ಲಾ ಸಂಸ್ಥೆಗಳು/ ಕೇಂದ್ರಗಳ ಮೇಲ್ವಿಚಾರಣೆ ಹಾಗೂ ನಿಗಾವಣೆಯನ್ನು ಖಾತ್ರಿಪಡಿಸುವುದು.

viii. ರಾಜ್ಯ ಅಭಿಯಾನ ನಿರ್ದೇಶಕರಿಗೆ, ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹಣ ಬಿಡುಗಡೆಗೆ ಹಾಗೂ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಹಾಗೂ ರಾಜ್ಯಮಟ್ಟದಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸೇವೆಗಳಿಗೆ ಹಣ ಬಿಡುಗಡೆಗಾಗಿ ಎಲ್ಲಾ ಅಗತ್ಯ ಬೆಂಬಲವನ್ನು ಒದಗಿಸುವುದು.

ix. ಅಭಿಯಾನದ ಉದ್ದೇಶಗಳ ಈಡೇರಿಕೆಗಾಗಿ ರಾಜ್ಯ ಅಭಿಯಾನ ನಿರ್ದೇಶಕರು ವಹಿಸುವ ಮತ್ಯಾವುದಾದರೂ ಕೆಲಸ.

**2) ಕಾರ್ಯಕ್ರಮ ಅಧಿಕಾರಿ – Program Officer:**

i. ಕಾರ್ಯಕ್ರಮ ಅಧಿಕಾರಿಯ ಒಟ್ಟಾರೆ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುವುದು ಹಾಗೂ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ಯಿಂದ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳನ್ನು ಒಳಗೊಂಡಂತೆ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಮಕ್ಕಳ ರಕ್ಷಣಾ ಚಟುವಟಿಕೆಗಳಲ್ಲಿ ಕಾರ್ಯಕ್ರಮ ಅಧಿಕಾರಿಗೆ ಸಂಯೋಜನೆ ನೀಡಿ ನೆರವಾಗುವುದು.

ii. ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಎಲ್ಲಾ ತರಬೇತಿ ಮತ್ತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳು, ಐಇಸಿ ಹಾಗೂ ವಕಾಲತ್ತು ಚಟುವಟಿಕೆಗಳ ಅನುಷ್ಠಾನ ಹಾಗೂ ಯೋಜನೆ ರೂಪಿಸುವಿಕೆ, ಸಂಯೋಜನೆಯಲ್ಲಿ ಕಾರ್ಯಕ್ರಮ ವ್ಯವಸ್ಥಾಪಕರಿಗೆ ನೆರವಾಗುವುದು.

iii. ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಚಟುವಟಿಕೆಗಳ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ನಿಗಾವಣೆಗಾಗಿ ಇಡೀ ಜಿಲ್ಲೆಯೊಂದಿಗೆ ಸಂಯೋಜನೆ.

iv. ಅಭಿಯಾನದ ಉದ್ದೇಶಗಳ ಈಡೇರಿಕೆಗಾಗಿ ಕಾರ್ಯಕ್ರಮ ವ್ಯವಸ್ಥಾಪಕರು ವಹಿಸುವ ಮತ್ಯಾವುದಾದರೂ ಕೆಲಸ.

ಡಿಸಿಪಿಯುಗಳ ಕಾನೂನು–ಕಂ–ಪ್ರೊಬೇಷನ್ ಅಧಿಕಾರಿಗಳ ಸೇವೆಗಳನ್ನು ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ರಾಜ್ಯಮಟ್ಟದಲ್ಲಿ ಕಾನೂನು ವಿಷಯಗಳು ಹಾಗೂ ಇತರೆ ಸಂಬಂಧಿಸಿದ ವಿಷಯಗಳಿಗೆ ಅಗತ್ಯ ನೆರವಿಗಾಗಿ ಬಳಸಿಕೊಳ್ಳುವುದು.

## ಬಿ. ಎಸ್‌ಎಆರ್‌ಎ ದಲ್ಲಿನ ಕರ್ತವ್ಯ ನಿರ್ವಾಹಕರ ಪಾತ್ರಗಳು ಹಾಗೂ ಜವಾಬ್ದಾರಿಗಳು– Roles and Responsibilities of Duty holders in SARA

**1) ಕಾರ್ಯಕ್ರಮ ವ್ಯವಸ್ಥಾಪಕರು – Program Manager:**

i. ದತ್ತು ನಿಬಂಧನೆಗಳಲ್ಲಿ ನೀಡಿರುವಂತೆ ರಾಜ್ಯ ಮಟ್ಟದಲ್ಲಿ ದತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸಂಯೋಜನೆ ಹಾಗೂ ನೀತಿ ಮೇಲ್ವಿಚಾರಣೆ ಕೈಗೊಳ್ಳುವುದು ಹಾಗೂ ಪ್ರಮಾಣಿತ ಕ್ರಮಬದ್ಧಕಾರ್ಯಾವಿಧಾನ ಮತ್ತು ಶಿಷ್ಟಾಚಾರಗಳನ್ನು (ಎಸ್‌ಒಪಿ) ಅನುಸರಿಸುವುದು.

ii. ದತ್ತು ಹಾಗೂ ಸಾಂಸ್ಥಿಕೇತರ ಸೇವೆಗಳ ತಾಂತ್ರಿಕ ಸಲಹೆಗೆ ಸಂಬಂಧಪಟ್ಟಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಮಕ್ಕಳ ಕಲ್ಯಾಣ ಸಮಿತಿಗಳು, ಹಾಗೂ ಎಸ್‌ಎಎಗಳಿಗೆ ಸುಗಮಗಾರಿಕೆ ಒದಗಿಸುವುದು.

iii. ರಾಜ್ಯ ದತ್ತು ಸಂಪನ್ಮೂಲ ಕೇಂದ್ರಕ್ಕಾಗಿ ರೂಪಿಸಿರುವ ಜವಾಬ್ದಾರಿಗಳ ನಿರ್ವಹಣೆಯನ್ನು ಖಾತ್ರಿಪಡಿಸುವುದು.

iv. ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿಗಾಗಿ ರಾಷ್ಟ್ರೀಯ ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಅಭಿವೃದ್ಧಿ ಸಂಸ್ಥೆ (ಎನ್‌ಐಪಿಸಿಸಿಡಿ), ನಿಮ್ಹಾನ್ಸ್ ಹಾಗೂ ಕೇಂದ್ರ/ ರಾಜ್ಯ ಸರ್ಕಾರಗಳ ಇತರೆ ತರಬೇತಿ ಸಂಸ್ಥೆಗಳೊಂದಿಗೆ ಸಂಪರ್ಕ ಹಾಗೂ ಸಂಯೋಜನೆ ಹೊಂದುವುದು.

v. ಮಕ್ಕಳ ಕಲ್ಯಾಣ ಸಮಿತಿಗಳು, ಮಕ್ಕಳ ನ್ಯಾಯ ಮಂಡಳಿಗಳು, ಎಸ್‌ಜೆಪಿಯು, ಇತ್ಯಾದಿಯಂತಹ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015 ರಡಿ ಬರುವಂತಹ ಶಾಸನಬದ್ಧ ಸಂಸ್ಥೆಗಳ ಕಾರ್ಯನಿರ್ವಹಣೆಗಾಗಿ ಸುಗಮಗಾರಿಕೆ ಹಾಗೂ ಬೆಂಬಲ ಒದಗಿಸುವುದು.

vi. ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ದತ್ತು ಕಾರ್ಯಕ್ರಮಗಳು ಹಾಗೂ ಸೇವೆಗಳಿಗಾಗಿ ಹಣ ಬಿಡುಗಡೆಗಾಗಿ ಎಲ್ಲಾ ಅಗತ್ಯ ಬೆಂಬಲ ಒದಗಿಸುವುದು.

vii. ರಾಜ್ಯದಲ್ಲಿ ವಕಾಲತ್ತು ಹಾಗೂ ಅರಿವು ಮೂಡಿಸಲು ಐಇಸಿ (ಮಾಹಿತಿ, ಶಿಕ್ಷಣ ಮತ್ತು ಸಂವಹನ ಪ್ರಚಾರ) ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಹಂಚುವುದು.

**2) ಕಾರ್ಯಕ್ರಮ ಅಧಿಕಾರಿ – Program Officer:**

i. ದತ್ತು ನಿಬಂಧನೆಗಳ ಪ್ರಕಾರ ದತ್ತು ಪ್ರೋತ್ಸಾಹ ಹಾಗೂ ಸುಗಮಗಾರಿಕೆಗಾಗಿ ಕಾರ್ಯಕ್ರಮ ವ್ಯವಸ್ಥಾಪಕರ ಒಟ್ಟಾರೆ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸುವುದು.

ii. ರಾಜ್ಯದಲ್ಲಿ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಎಲ್ಲಾ ದತ್ತು ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ನಿಗಾವಣೆಗೆ ಸಹಾಯ ಮಾಡುವುದು.

iii. ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವಂತಹ ಮಕ್ಕಳ ದತ್ತುಗೆ ಸಮಬಂಧಪಟ್ಟ ಎಲ್ಲಾ ಚಟುವಟಿಕೆಗಳ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ನಿಗಾವಣೆಗಾಗಿ ಇಡೀ ಜಿಲ್ಲೆಯೊಂದಿಗೆ ಸಂಯೋಜನೆ.

iv. ಅಭಿಯಾನದ ಉದ್ದೇಶಗಳ ಈಡೇರಿಕೆಗಾಗಿ ಕಾರ್ಯಕ್ರಮ ವ್ಯವಸ್ಥಾಪಕರು ವಹಿಸುವ ಮತ್ಯಾವುದಾದರೂ ಕೆಲಸಗಳು.

## ಸಿ. ಎಸ್‌ಸಿಪಿಎಸ್ ಹಾಗೂ ಎಸ್‌ಎಆರ್‌ಎ ಅಡಿ ಸಿಬ್ಬಂದಿಗಳ ಆಯ್ಕೆ ಪ್ರಕ್ರಿಯೆ – Selection Process of Staff under SCPS and SARA:

i. ಎಸ್‌ಸಿಪಿಎಸ್ ಹಾಗೂ ರಾಜ್ಯ ದತ್ತು ಸಂಪನ್ಮೂಲ ಸಂಸ್ಥೆ (ಎಸ್‌ಎಆರ್‌ಎ) ಗಳ ತಾಂತ್ರಿಕ ಹಾಗೂ ಬೆಂಬಲ ಸಿಬ್ಬಂದಿಗಳನ್ನು ಒಳಗೊಳ್ಳುವಂತೆ ಮಾಡಲು ರಾಜ್ಯ ಮಿಷನ್ ನಿರ್ದೇಶಕರಿಂದ ರಚಿಸಲ್ಪಟ್ಟಿರುವ ಆಯ್ಕೆ ಸಮಿತಿಯಿಂದ ರಾಜ್ಯಮಟ್ಟದ ಸಿಬ್ಬಂದಿಗಳ ಸೇವೆಗಳನ್ನು ಪಡೆದುಕೊಳ್ಳುವುದು.

ii. ಮಿಷನ್ ವಾತ್ಸಲ್ಯದಡಿ ನೇಮಕಗೊಳ್ಳುವ ಎಲ್ಲಾ ಸಿಬ್ಬಂದಿಗಳೂ ಸಹ ನಿಗಧಿತ ಅರ್ಹತೆ ಹಾಗೂ ಅನುಭವಗಳ ಪ್ರಕಾರ ಇರಬೇಕು.

iii. ಸಿಬ್ಬಂದಿಗಳ ನೇಮಕಾತಿಗೆ ಮುಂಚೆ ಅವರ ವಿಶ್ವಾಸಾರ್ಹತೆ ಹಾಗೂ ಸಿಬ್ಬಂದಿಗಳ ಬದ್ಧತೆಯನ್ನು ಖಾತ್ರಿಪಡಿಸಲು ಪೊಲೀಸರಿಂದ ಸಿಬ್ಬಂದಿಗಳ ಹಿನ್ನೆಲೆ ತಪಾಸಣೆಯನ್ನು ನಡೆಸುವುದು ಕಡ್ಡಾಯ.

iv. ಎಸ್‌ಸಿಪಿಎಸ್ ಹಾಗೂ ಎಸ್‌ಎಆರ್‌ಎ ಅಡಿ ನೇಮಕಗೊಳ್ಳುವ ಎಲ್ಲಾ ಸಿಬ್ಬಂದಿಗಳೂ ಸಹ ತಪ್ಪದೇ ಎಲ್ಲಾ ದಾಖಲೆಪತ್ರಗಳ ಗೌಪ್ಯತೆಯನ್ನು ಕಾಪಾಡುವುದು, ತಪ್ಪಿದಲ್ಲಿ ಅಂತಹವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

v. ಸೂಕ್ತ ಹಾಗೂ ಸಮರ್ಥ ಸಿಬ್ಬಂದಿಗಳ ವಾರ್ಷಿಕ ಕೆಲಸದ ಪುನರ್‌ಮನನವನ್ನು ಆಧರಿಸಿ 2025–26ರ ಹಣಕಾಸು ವರ್ಷದವರೆಗೆ ಅಭಿಯಾನದ ಪೂರ್ಣ ಅವಧಿಯವರೆಗೆ ಈ ಯೋಜನೆಯಡಿ ನೇಮಕಾತಿ ಮಾಡಿಕೊಳ್ಳಲಾಗುವುದು.

vi. ವಿಸ್ತರಣೆಗಾಗಿ ಕಾರ್ಯಕ್ಷಮತೆಯ ಮಾನದಂಡಗಳಲ್ಲಿ ಆರೋಗ್ಯ, ಶಿಕ್ಷಣ ಹಾಗೂ ಯೋಗಕ್ಷೇಮ, ಇತರೆ ವಿಷಯಗಳ ಪೈಕಿ ಅವರ ಮೇಲ್ವಿಚಾರಣೆಯಡಿ ಇರುವ ಮಕ್ಕಳಿಗೆ ಸಂಬಂಧಪಟ್ಟ ಪುನರ್‌ಸ್ಥಾಪನೆ ಹಾಗೂ ಪುನರ್ವಸತಿ ಮಾನದಂಡಗಳೂ ಇರುತ್ತವೆ.

vii. ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಯು, ಬ್ಲಾಕ್‌ಗಳ ಸಂಖ್ಯೆ, ಪ್ರಕರಣಗಳ ಹೊರೆ ಹಾಗೂ ಆಡಳಿತಾತ್ಮಕ ಅಗತ್ಯತೆಗಳನ್ನು ಬಗೆಹರಿಸಲು ಅಂತರ್–ಜಿಲ್ಲಾ ವರ್ಗಾವಣೆಗಳ ಪ್ರಕಾರ ಸಂಪನ್ಮೂಲಗಳ ಅತ್ಯುತ್ತಮ ಬಳಕೆಗಾಗಿ ಅನುಷ್ಠಾನ ಸಂಸ್ಥೆಗಳಲ್ಲಿನ ಹಾಲಿ ಮಾನವ ಸಂಪನ್ಮೂಲವನ್ನು ಸುಧಾರಿಸಿಗೊಳ್ಳಬೇಕು.

viii. ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ತಮ್ಮ ಸ್ವಂತ ಸಂಪನ್ಮೂಲಗಳು ಹಾಗೂ ಅಗತ್ಯದ ಪ್ರಕಾರ ಹಾಲಿ ಮಾನವ ಸಂಪನ್ಮೂಲಕ್ಕೆ ಹೆಚ್ಚುವರಿ ಹಣಕಾಸಿನ ಬೆಂಬಲವನ್ನು ಒದಗಿಸಬೇಕು.

ix. 2023–24ರಿಂದ ಆರಂಭಗೊಂಡು 2025–26ನೇ ಹಣಕಾಸು ವರ್ಷದವರೆಗೆ ಅನ್ವಯವಾಗುವಂತೆ ತೃಪ್ತಿಕರ ನಿರ್ವಹಣೆಯನ್ನು ಆಧರಿಸಿ, ಎಸ್‌ಸಿಪಿಎಸ್ ಹಾಗೂ ಎಸ್‌ಎಆರ್‌ಎ ಅಡಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು/ ಸಿಬ್ಬಂದಿಗಳ ಒಟ್ಟಾರೆ ವೇತನವನ್ನು ವಾರ್ಷಿಕವಾಗಿ (ಸಂಚಿತ ಆಧಾರ) ಶೇ.3 ರಷ್ಟು ಹೆಚ್ಚಳಗೊಳಿಸಲಾಗುವುದು.

**ಡಿ. ಮಿಷನ್ ವಾತ್ಸಲ್ಯದಡಿ ಎಸ್‌ಸಿಪಿಎಸ್ (SCPS) ಹಾಗೂ ಎಸ್‌ಎಆರ್‌ಎ (SARA) ಸಿಬ್ಬಂದಿಗಳ ಸೂಚಕ ಅರ್ಹತೆ: Indicative Qualification of Staff of SCPC and SARA under Mission Vatsalya:**

| ಕ್ರ.ಸಂ. | ಹುದ್ದೆಗಳು | ಅರ್ಹತಾ ಮಾನದಂಡ |
|---|---|---|
| 1. | ಕಾರ್ಯಕ್ರಮ ವ್ಯವಸ್ಥಾಪಕರು/ ನಿರ್ವಾಹಕರು (ಎಸ್‌ಸಿಪಿಎಸ್)<br>Programme Manager (SCPS) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಮಕ್ಕಳ ಅಭಿವೃದ್ಧಿ/ ಮಾನವ ಹಕ್ಕುಗಳ ಸಾರ್ವಜನಿಕ ಆಡಳಿತ/ ಮನೋವಿಜ್ಞಾನ/ ಮನೋವೈದ್ಯಶಾಸ್ತ್ರ/ ಕಾನೂನು/ ಸಾರ್ವಜನಿಕ ಆರೋಗ್ಯ/ ಸಮುದಾಯ ಸಂಪನ್ಮೂಲ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಹೊಂದಿರಬೇಕು.<br>ಆದ್ಯತೆಯ ಮೇರೆಗೆ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ/ ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಯೋಜನೆ ರೂಪಿಸುವಿಕೆ/ ಅನುಷ್ಠಾನ, ನಿಗಾವಣೆ ಹಾಗೂ ಮೇಲ್ವಿಚಾರಣೆಯಲ್ಲಿ 3 ವರ್ಷಗಳ ಅನುಭವ<br>ಕಂಪ್ಯೂಟರ್‌ನಲ್ಲಿ ಪರಿಣತಿ |
| 2. | ಕಾರ್ಯಕ್ರಮ ವ್ಯವಸ್ಥಾಪಕರು/ ನಿರ್ವಾಹಕರು (ಎಸ್‌ಎಅರ್‌ಎ)<br>Programme Manager (SARA) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಮಕ್ಕಳ ಅಭಿವೃದ್ಧಿ/ ಮಾನವ ಹಕ್ಕುಗಳ ಸಾರ್ವಜನಿಕ ಆಡಳಿತ/ ಮನೋವಿಜ್ಞಾನ/ ಮನೋವೈದ್ಯಶಾಸ್ತ್ರ/ ಕಾನೂನು/ ಸಾರ್ವಜನಿಕ ಆರೋಗ್ಯ/ ಸಮುದಾಯ ಸಂಪನ್ಮೂಲ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಹೊಂದಿರಬೇಕು.<br>ಆದ್ಯತೆಯ ಮೇರೆಗೆ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ/ ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಯೋಜನೆ ರೂಪಿಸುವಿಕೆ/ ಅನುಷ್ಠಾನ, ನಿಗಾವಣೆ ಹಾಗೂ ಮೇಲ್ವಿಚಾರಣೆಯಲ್ಲಿ 3 ವರ್ಷಗಳ ಅನುಭವ<br>ಕಂಪ್ಯೂಟರ್‌ನಲ್ಲಿ ಪರಿಣತಿ |
| 3. | ಕಾರ್ಯಕ್ರಮ ಅಧಿಕಾರಿ (ಎಸ್‌ಸಿಪಿಎಸ್)<br>Programme Officer (SCPS) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಮನೋವಿಜ್ಞಾನ/ ಮನೋವೈದ್ಯಶಾಸ್ತ್ರ/ ಕಾನೂನು/ ಸಾರ್ವಜನಿಕ ಆರೋಗ್ಯ/ ಸಮುದಾಯ ಸಂಪನ್ಮೂಲ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಹೊಂದಿರಬೇಕು.<br>**ಅಥವಾ**<br>ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಲ್ಯಾಣ/ ಸಮಾಜ ವಿಜ್ಞಾನ/ ಮಕ್ಕಳ ಅಭಿವೃದ್ಧಿ/ ಮಾನವ ಹಕ್ಕುಗಳ ಸಾರ್ವಜನಿಕ ಆಡಳಿತ/ ಮನೋವಿಜ್ಞಾನ/ ಮನೋವೈದ್ಯಶಾಸ್ತ್ರ/ ಕಾನೂನು/ ಸಾರ್ವಜನಿಕ ಆರೋಗ್ಯ/ ಸಮುದಾಯ ಸಂಪನ್ಮೂಲ ನಿರ್ವಹಣೆಯಲ್ಲಿ ಪದವಿಯ ಜೊತೆಗೆ ಆದ್ಯತೆ ಮೇರೆಗೆ ಮಹಿಳೆಯರು ಹಾಗೂ ಮಕ್ಕಳ ಅಭಿವೃದ್ಧಿ/ ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಯೋಜನೆ ರೂಪಿಸುವಿಕೆ/ ಅನುಷ್ಠಾನ ನಿಗಾವಣೆ ಹಾಗೂ ಮೇಲ್ವಿಚಾರಣೆ ಕೆಲಸಗಳಲ್ಲಿ 2 ವರ್ಷಗಳ ಅನುಭವ<br>ಕಂಪ್ಯೂಟರ್ ಪರಿಣತಿ |
| 3. | ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್ (ಎಸ್‌ಸಿಪಿಎಸ್) | ಕಂಪ್ಯೂಟರ್‌ನಲ್ಲಿ ಡಿಪ್ಲೊಮಾ/ ಸರ್ಟಿಫಿಕೆಟ್‌ನೊಂದಿಗೆ ಮಾನ್ಯತೆಯುಳ್ಳ ಬೋರ್ಡ್/ ತತ್ಸಮಾನ ಬೋರ್ಡ್‌ನಿಂದ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.<br>ಸರ್ಕಾರ/ ಸರ್ಕಾರೇತರ ಸಂಸ್ಥೆಯಲ್ಲಿ ಕನಿಷ್ಠ 1 ವರ್ಷ ಕೆಲಸದ ಅನುಭವ. |

## ಇ. ಎಸ್‌ಸಿಪಿಎಸ್‌ಗಾಗಿ ಹಣಕಾಸಿನ ಬೆಂಬಲ–Financial Support for SCPS:

### i. 5 ಜಿಲ್ಲೆಗಳವರೆಗೆ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ಗಾಗಿ ಹಣಕಾಸಿನ ಬೆಂಬಲ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| (ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ) | | |
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಖುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಕಗಳು, ಕಪಾಟುಗಳು, ಜೆರಾಕ್ಸ್ ಕಂ–ಸ್ಕ್ಯಾನರ್ ಯಂತ್ರ, ಇತ್ಯಾದಿ) | 3,00,000 |
| 2. | ಕಚೇರಿಗೆ ಯುಪಿಎಸ್ ಹಾಗೂ ವೆಬ್ ಕ್ಯಾಂ ಜೊತೆಗೆ ನಾಲ್ಕು ಕಂಪ್ಯೂಟರ್‌ಗಳು/ ಲ್ಯಾಪ್‌ಟಾಪ್‌ಗಳು (ಸಾಫ್ಟ್‌ವೇರ್ ಪರವಾನಿಗೆಯೊಂದಿಗೆ) ಹಾಗೂ ಪ್ರಿಂಟರ್‌ಗಳು ಕಂ ಸ್ಕ್ಯಾನರ್. | 1,50,000 |
| | **ಒಟ್ಟು** | **4,50,000** |

**ಆವರ್ತಕ ವೆಚ್ಚ (ವಾರ್ಷಿಕ):**

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| (ಬಿ) ಸಿಬ್ಬಂದಿ ವೇತನ | | |
| 1. | ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು @ ರೂ.46,340/– ಮಾಸಿಕ | 5,56,080 |
| 2. | ಓರ್ವ ಲೆಕ್ಕಾಧಿಕಾರಿ @ ರೂ.23,170/– ಮಾಸಿಕ | 2,78,040 |
| 3. | ಇಬ್ಬರು ಸಹಾಯಕರು–ಕಂ–ಡೇಟಾ ಎಂಟ್ರಿ ಆಪರೇಟರ್‌ಗಳು @ ರೂ.13,240/– ಮಾಸಿಕ | 3,17,760 |
| | **ಒಟ್ಟು** | **11,51,880** |

*2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ಸಿಬ್ಬಂದಿಗಳ ತೃಪ್ತಿಕರ ಕೆಲಸವನ್ನು ಆಧರಿಸಿ ವಾರ್ಷಿಕ 3% ವೇತನ ಹೆಚ್ಚಳಕ್ಕೆ ಅವಕಾಶವಿರುತ್ತದೆ (ಸಂಚಿತ ಆಧಾರಿತ)*

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| (ಸಿ) ಆಡಳಿತಾತ್ಮಕ ವೆಚ್ಚ | | |
| 1 | ಆಡಳಿತಾತ್ಮಕ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ಸೌಲಭ್ಯದೊಂದಿಗೆ ದೂರವಾಣಿ, ಜೆರಾಕ್ಸ್), ಎಸ್‌ಸಿಪಿಎಸ್ ಸಿಬ್ಬಂದಿಗೆ ಪ್ರಯಾಣ & ದೈನಂದಿನ ಭತ್ಯೆ ಕಚೇರಿಗೆ ಬಾಡಿಗೆ, ಇಂಟರ್‌ನೆಟ್ ಸಂಪರ್ಕ, ಬಾಡಿಗೆ ವಾಹನ ಸೇವೆಗಳು, ಭದ್ರತಾ ಸಿಬ್ಬಂದಿ ಇತ್ಯಾದಿ ಒಳಗೊಂಡಂತೆ ಆಕಸ್ಮಿಕ ನಿಧಿ. | 6,00,000 |
| 2. | ಬ್ಲಾಕ್, ಜಿಲ್ಲೆ ಹಾಗೂ ರಾಜ್ಯಮಟ್ಟಗಳಲ್ಲಿ ವಿವಿಧ ವರ್ಗಗಳ ಕಾರ್ಯನಿರ್ವಾಹಕರಿಗಾಗಿ ಕಾರ್ಯಕ್ರಮಗಳನ್ನು ಆಯೋಜಿಸಲು, ಸಂಶೋಧನೆ ಹಾಗೂ ದಾಖಲೆಪತ್ರಗಳಿಗಾಗಿ, ಮುದ್ರಣ ಹಾಗೂ ಹಂಚಿಕೆ ಒಳಗೊಂಡಂತೆ ಐಇಸಿ ಹಾಗೂ ಮಾಧ್ಯಮ ಅಭಿಯಾನದ ಮೂಲಕ ತರಬೇತಿ ನಿಧಿ | 15,00,000 |
| | **ಒಟ್ಟು** | **28,00,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **39,51,880** |
| **ಒಟ್ಟು (ಎ+ಬಿ+ಸಿ) ಅನಾವರ್ತಕ + ಆವರ್ತಕ ಅನುದಾನ** | | **44,01,880** |

## ii. 6 ರಿಂದ 20 ಜಿಲ್ಲೆಗಳಿರುವ ರಾಜ್ಯಗಳಲ್ಲಿನ ಎಸ್‌ಸಿಪಿಎಸ್‌ಗೆ ಹಣಕಾಸಿನ ಬೆಂಬಲ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಪೀಠೋಪಕರಣ ಹಾಗೂ ಕಚೇರಿ ಉಪಕರಣ (ಮೇಜುಗಳು, ಖುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಕಗಳು, ಕಪಾಟುಗಳು, ಜೆರಾಕ್ಸ್–ಕಂ–ಸ್ಕ್ಯಾನರ್ ಯಂತ್ರ, ಇತ್ಯಾದಿ) | 5,00,000 |
| 2. | ಯುಪಿಎಸ್ ಹಾಗೂ ವೆಬ್ ಕ್ಯಾಮೆರಾ ಜೊತೆಗೆ ಏಳು ಕಂಪ್ಯೂಟರ್‌ಗಳು/ ಲ್ಯಾಪ್‌ಟಾಪ್‌ಗಳು (ಸಾಫ್ಟ್‌ವೇರ್ ಪರವಾನಗಿ ವೆಚ್ಚದೊಂದಿಗೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು | 3,15,000 |
| | **ಒಟ್ಟು** | **8,15,000** |

**ಆವರ್ತಕ ವೆಚ್ಚ (ವಾರ್ಷಿಕ)**

| **(ಬಿ) ಸಿಬ್ಬಂದಿ ವೇತನ** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು @ ರೂ.46,340/– ಮಾಸಿಕ | 5,56,080 |
| 2. | ಇಬ್ಬರು ಕಾರ್ಯಕ್ರಮ ಅಧಿಕಾರಿಗಳು @ ರೂ.34,755/– ಮಾಸಿಕ | 8,34,120 |
| 3. | ಓರ್ವ ಲೆಕ್ಕಾಧಿಕಾರಿ @ ರೂ.23,170/– ಮಾಸಿಕ | 2,78,040 |
| 4. | ಓರ್ವ ಅಕೌಂಟೆಂಟ್ @ 18,536/– ಮಾಸಿಕ | 2,22,432 |
| 5. | ಇಬ್ಬರು ಸಹಾಯಕರು–ಕಂ–ಡೇಟಾ ಎಂಟ್ರಿ ಆಪರೇಟರ್‌ಗಳು@ 13,240/– ಮಾಸಿಕ | 3,17,760 |
| | **ಒಟ್ಟು** | **22,08,432** |

*2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ಸಿಬ್ಬಂದಿಗಳ ತೃಪ್ತಿಕರ ಕೆಲಸವನ್ನು ಆಧರಿಸಿ ವಾರ್ಷಿಕ 3% ವೇತನ ಹೆಚ್ಚಳಕ್ಕೆ ಅವಕಾಶವಿರುತ್ತದೆ (ಸಂಚಿತ ಆಧಾರಿತ)*

| **(ಸಿ) ಆಡಳಿತಾತ್ಮಕ ವೆಚ್ಚಗಳು** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಆಡಳಿತಾತ್ಮಕ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ಸೌಲಭ್ಯದೊಂದಿಗೆ ದೂರವಾಣಿ, ಜೆರಾಕ್ಸ್), ಎಸ್‌ಸಿಪಿಎಸ್ ಸಿಬ್ಬಂದಿಗಾಗಿ ಪ್ರಯಾಣ ಹಾಗೂ ದೈನಂದಿನ ಭತ್ಯೆ, ಕಚೇರಿ ಆವರಣ ಬಾಡಿಗೆ, ಇಂಟರ್‌ನೆಟ್ ಸಂಪರ್ಕ, ಬಾಡಿಗೆ ವಾಹನ, ಭದ್ರತಾ ಸಿಬ್ಬಂದಿ, ಇತ್ಯಾದಿ ಒಳಗೊಂಡಂತೆ ಆಕಸ್ಮಿಕ ವೆಚ್ಚಗಳು. | 16,40,000 |
| 2. | ಬ್ಲಾಕ್, ಜಿಲ್ಲೆ ಹಾಗೂ ರಾಜ್ಯ ಮಟ್ಟಗಳಲ್ಲಿ ವಿವಿಧ ವರ್ಗಗಳ ಕಾರ್ಯನಿರ್ವಾಹಕರಿಗೆ ಕಾರ್ಯಕ್ರಮಗಳನ್ನು ಆಯೋಜಿಸಲು, ಸಂಶೋಧನೆ ಹಾಗೂ ದಾಖಲೆಪತ್ರಗಳ ನಿರ್ವಹಣೆ, ಐಇಸಿ ಸಾಮಗ್ರಿಗಳ ಮುದ್ರಣ ಹಾಗೂ ಹಂಚಿಕೆ ಒಳಗೊಂಡಂತೆ ಐಇಸಿ ಹಾಗೂ ಮಾಧ್ಯಮ ಅಭಿಯಾನದ ಮೂಲಕ ಅರಿವು ಮೂಡಿಸುವ ಚಟುವಟಿಕೆಗಳಿಗಾಗಿ ತರಬೇತಿ ನಿಧಿ | 25,00,000 |
| 3. | ಮಿಷನ್ ವಾತ್ಸಲ್ಯದ ನಿಯಮಿತ ಕಾರ್ಯಕ್ರಮ ಅಂಶಗಳಡಿ ಸೇರದಿರುವಂತಹ ನವೀನ ಯೋಜನೆಗಳು ಹಾಗೂ ವಿಷಯಗಳ ಬೆಂಬಲಕ್ಕಾಗಿ ಸಾಮಾನ್ಯ ಸಹಾಯಧನ (Grant-in-aid), ಜಿಲ್ಲೆಗಳ ಸನ್ನಿವೇಶ ವಿಶ್ಲೇಷಣೆ ಹಾಗೂ ಮ್ಯಾಪ್ಪಿಂಗ್, ಸಂಪನ್ಮೂಲ ಮ್ಯಾಪ್ಪಿಂಗ್ ಹಾಗೂ ಸಂಪನ್ಮೂಲ ಕೈಪಿಡಿ ಸಿದ್ಧತೆ, ಇತ್ಯಾಧಿ | 30,00,000 |
| | **ಒಟ್ಟು** | **71,40,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **93,48,432** |
| **ಒಟ್ಟು (ಎ+ಬಿ+ಸಿ) ಅನಾವರ್ತಕ ವೆಚ್ಚ+ಆವರ್ತಕ ಅನುದಾನ.** | | **1,01,63,432** |

## iii. 20ಕ್ಕಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳಿಗೆ ಹಣಕಾಸಿನ ಬೆಂಬಲ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಪೀಠೋಪಕರಣ ಹಾಗೂ ಕಚೇರಿ ಉಪಕರಣ (ಮೇಜುಗಳು, ಖುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಕಗಳು, ಕಪಾಟುಗಳು, ಜೆರಾಕ್ಸ್–ಕಂ–ಸ್ಕ್ಯಾನರ್ ಯಂತ್ರ, ಇತ್ಯಾದಿ). | 6,00,000 |
| 2. | ಯುಪಿಎಸ್ ಹಾಗೂ ವೆಬ್ ಕ್ಯಾಮೆರಾ ಜೊತೆಗೆ ಏಳು ಕಂಪ್ಯೂಟರ್‌ಗಳು/ ಲ್ಯಾಪ್‌ಟಾಪ್‌ಗಳು (ಸಾಫ್ಟ್‌ವೇರ್ ಪರವಾನಿಗೆ ವೆಚ್ಚದೊಂದಿಗೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು. | 5,85,000 |
| | **ಒಟ್ಟು** | **11,85,000** |

**ಆವರ್ತಕ ವೆಚ್ಚ (ವಾರ್ಷಿಕ)**

| **(ಬಿ) ಸಿಬ್ಬಂದಿ ವೇತನ** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಇಬ್ಬರು ಕಾರ್ಯಕ್ರಮ ವ್ಯವಸ್ಥಾಪಕರು @ ರೂ.46,340/– ಮಾಸಿಕ | 11,12,160 |
| 2. | ನಾಲ್ವರು ಕಾರ್ಯಕ್ರಮ ಅಧಿಕಾರಿಗಳು @ ರೂ.34,755/– ಮಾಸಿಕ | 16,68,240 |
| 3. | ಓರ್ವ ಲೆಕ್ಕಾಧಿಕಾರಿ @ ರೂ.23,170/– ಮಾಸಿಕ | 2,78,040 |
| 4. | ಓರ್ವ ಅಕೌಂಟೆಂಟ್ @ 18,536/– ಮಾಸಿಕ | 2,22,432 |
| 5. | ನಾಲ್ವರು ಸಹಾಯಕರು–ಕಂ–ಡೇಟಾ ಎಂಟ್ರಿ ಆಪರೇಟರ್‌ಗಳು@13,240/– ಮಾಸಿಕ | 6,35,520 |
| 6. | ಓರ್ವ ಲೆಕ್ಕ ಸಹಾಯಕರು @ 13,240/– ಮಾಸಿಕ | 1,58,880 |
| | **ಒಟ್ಟು** | **40,75,272** |

*2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ಸಿಬ್ಬಂದಿಗಳ ತೃಪ್ತಿಕರ ಕೆಲಸವನ್ನು ಆಧರಿಸಿ ವಾರ್ಷಿಕ 3% ವೇತನ ಹೆಚ್ಚಳಕ್ಕೆ ಅವಕಾಶವಿರುತ್ತದೆ (ಸಂಚಿತ ಆಧಾರಿತ)*

| **(ಸಿ) ಆಡಳಿತಾತ್ಮಕ ವೆಚ್ಚಗಳು** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಆಡಳಿತಾತ್ಮಕ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ಸೌಲಭ್ಯದೊಂದಿಗೆ ದೂರವಾಣಿ, ಜೆರಾಕ್ಸ್), ಎಸ್‌ಸಿಪಿಎಸ್ ಸಿಬ್ಬಂದಿಗಾಗಿ ಪ್ರಯಾಣ ಹಾಗೂ ದೈನಂದಿನ ಭತ್ಯೆ, ಕಚೇರಿ ಆವರಣ ಬಾಡಿಗೆ, (ಇಂಟರ್‌ನೆಟ್ ಸಂಪರ್ಕ, ಬಾಡಿಗೆ ವಾಹನ, ಭದ್ರತಾ ಸಿಬ್ಬಂದಿ, ಇತ್ಯಾದಿ ಒಳಗೊಂಡಂತೆ) ಆಕಸ್ಮಿಕ ವೆಚ್ಚಗಳು. | 28,50,000 |
| 2. | ಬ್ಲಾಕ್, ಜಿಲ್ಲೆ ಹಾಗೂ ರಾಜ್ಯ ಮಟ್ಟಗಳಲ್ಲಿ ವಿವಿಧ ವರ್ಗಗಳ ಕಾರ್ಯನಿರ್ವಾಹಕರಿಗೆ ಕಾರ್ಯಕ್ರಮಗಳನ್ನು ಆಯೋಜಿಸಲು, ಸಂಶೋಧನೆ ಹಾಗೂ ದಾಖಲೆಪತ್ರಗಳ ನಿರ್ವಹಣೆ, ಐಇಸಿ ಸಾಮಗ್ರಿಗಳ ಮುದ್ರಣ ಹಾಗೂ ಹಂಚಿಕೆ ಒಳಗೊಂಡಂತೆ ಐಇಸಿ ಹಾಗೂ ಮಾಧ್ಯಮ ಅಭಿಯಾನದ ಮೂಲಕ ಅರಿವು ಮೂಡಿಸುವ ಚಟುವಟಿಕೆಗಳಿಗಾಗಿ ತರಬೇತಿ ನಿಧಿ | 47,50,000 |
| 3. | ಮಿಷನ್ ವಾತ್ಸಲ್ಯದ ನಿಯಮಿತ ಕಾರ್ಯಕ್ರಮ ಅಂಶಗಳಡಿ ಸೇರದಿರುವಂತಹ ನವೀನ ಯೋಜನೆಗಳು ಹಾಗೂ ವಿಷಯಗಳ ಬೆಂಬಲಕ್ಕಾಗಿ ಸಾಮಾನ್ಯ ಸಹಾಯಧನ (Grant-in-aid), ಜಿಲ್ಲೆಗಳ ಸನ್ನಿವೇಶ ವಿಶ್ಲೇಷಣೆ ಹಾಗೂ ಮ್ಯಾಪ್ಪಿಂಗ್, ಸಂಪನ್ಮೂಲ ಮ್ಯಾಪ್ಪಿಂಗ್ ಹಾಗೂ ಸಂಪನ್ಮೂಲ ಕೈಪಿಡಿ ಸಿದ್ಧತೆ, ಇತ್ಯಾಧಿ | 50,00,000 |
| | **ಒಟ್ಟು** | **1,26,00,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **1,66,75,272** |
| **ಒಟ್ಟು (ಎ+ಬಿ+ಸಿ) ಅನಾವರ್ತಕ + ಆವರ್ತಕ ಅನುದಾನ.** | | **1,78,60,272** |

## ಎಫ್ಎಸ್ಎಆರ್ಎ ಗಾಗಿ ಹಣಕಾಸು ಸೂಚನೆಗಳು–Financial Implication for SARA:

**i. 5 ಜಿಲ್ಲೆಗಳವರೆಗಿನ ರಾಜ್ಯಗಳಿಗಾಗಿ ರಾಜ್ಯ ದತ್ತು ಸಂಪನ್ಮೂಲ ಕೇಂದ್ರ (ಎಸ್ಎಆರ್ಎ)ಗಾಗಿ ಹಣಕಾಸಿನ ಬೆಂಬಲ:**

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಖುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಕಗಳು, ಕಪಾಟುಗಳು, ಜೆರಾಕ್ಸ್–ಕಂ–ಸ್ಕ್ಯಾನರ್ ಯಂತ್ರ, ಇತ್ಯಾದಿ | 2,00,000 |
| 2. | ಯುಪಿಎಸ್ & ವೆಬ್ ಕ್ಯಾಮೆರಾ ಜೊತೆಗೆ ಮೂರು ಕಂಪ್ಯೂಟರ್‌ಗಳು (ಸಾಫ್ಟ್‌ವೇರ್ ಪರವಾನಗಿ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು | 1,35,000 |
| | **ಒಟ್ಟು** | **3,35,000** |

**ಆವರ್ತಕ ವೆಚ್ಚ (ವಾರ್ಷಿಕ):**

| | | |
|---|---|---|
| **(ಬಿ) ಸಿಬ್ಬಂದಿಗಳ ವೇತನ;** | | |
| 1. | ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು @ ರೂ.46,340/– ಮಾಸಿಕ | 5,56,080 |
| 2. | ಓರ್ವ ಕಾರ್ಯಕ್ರಮ ಅಧಿಕಾರಿ @ ರೂ.34,755/– ಮಾಸಿಕ | 4,17,060 |
| 3. | ಓರ್ವ ಕಾರ್ಯಕ್ರಮ ಸಹಾಯಕ @ ರೂ.13,240/– ಮಾಸಿಕ | 1,58,880 |
| | **ಒಟ್ಟು** | **11,32,020** |

*2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ಸಿಬ್ಬಂದಿಗಳ ತೃಪ್ತಿಕರ ಕೆಲಸವನ್ನು ಆಧರಿಸಿ ವಾರ್ಷಿಕ 3% ವೇತನ ಹೆಚ್ಚಳಕ್ಕೆ ಅವಕಾಶವಿರುತ್ತದೆ (ಸಂಚಿತ ಆಧಾರಿತ)*

| **(ಸಿ) ಆಡಳಿತಾತ್ಮಕ ವೆಚ್ಚಗಳು** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಆಡಳಿತಾತ್ಮಕ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ಸೌಲಭ್ಯದೊಂದಿಗೆ ದೂರವಾಣಿ, ಜೆರಾಕ್ಸ್), ಎಸ್ಎಆರ್ಎ ಸಿಬ್ಬಂದಿಗಾಗಿ ಪ್ರಯಾಣ ಹಾಗೂ ದೈನಂದಿನ ಭತ್ಯೆ, (ಇಂಟೆರ್‌ನೆಟ್ ಸಂಪರ್ಕ, ಬಾಡಿಗೆ ವಾಹನ, ಭದ್ರತಾ ಸಿಬ್ಬಂದಿ, ಇತ್ಯಾದಿ ಒಳಗೊಂಡಂತೆ) ಆಕಸ್ಮಿಕ ವೆಚ್ಚಗಳು. | 2,00,000 |
| 2. | ಐಇಸಿ ಸಾಮಗ್ರಿಗಳ ಮುದ್ರಣ ಹಾಗೂ ಹಂಚಿಕೆ ಒಳಗೊಂಡಂತೆ ಐಇಸಿ ಹಾಗೂ ಮಾಧ್ಯಮ ಅಭಿಯಾನದ ಮೂಲಕ ಅರಿವು ಮೂಡಿಸುವಿಕೆ | 1,50,000 |
| | **ಒಟ್ಟು** | **3,50,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **14,82,020** |
| **ಒಟ್ಟು (ಎ+ಬಿ+ಸಿ) ಅನಾವರ್ತಕ + ಆವರ್ತಕ ಅನುದಾನ.** | | **18,17,020** |

## ii. 6 ರಿಂದ 20 ಜಿಲ್ಲೆಗಳಿರುವ ರಾಜ್ಯಗಳಿಗೆ ಎಸ್‌ಎಆರ್‌ಎಗಾಗಿ ಹಣಕಾಸಿನ ಬೆಂಬಲ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಖುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಕಗಳು, ಕಪಾಟುಗಳು, ಜೆರಾಕ್ಸ್–ಕಂ–ಸ್ಕ್ಯಾನರ್ ಯಂತ್ರ, ಇತ್ಯಾದಿ | 2,00,000 |
| 2. | ಯುಪಿಎಸ್ & ವೆಬ್ ಕ್ಯಾಮೆರಾ ಜೊತೆಗೆ ಮೂರು ಕಂಪ್ಯೂಟರ್‌ಗಳು (ಸಾಫ್ಟ್‌ವೇರ್ ಪರವಾನಗಿ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು | 1,35,000 |
| | **ಒಟ್ಟು** | **3,35,000** |

**ಆವರ್ತಕ ವೆಚ್ಚ (ವಾರ್ಷಿಕ):**

| **(ಬಿ) ಸಿಬ್ಬಂದಿಗಳ ವೇತನ** | | |
|---|---|---|
| 1. | ಓರ್ವ ಕಾರ್ಯಕ್ರಮ ವ್ಯವಸ್ಥಾಪಕರು @ ರೂ.46,340/– ಮಾಸಿಕ | 5,56,080 |
| 2. | *ಓರ್ವ ಕಾರ್ಯಕ್ರಮ ಅಧಿಕಾರಿ @ ರೂ.34,755/– ಮಾಸಿಕ | 4,17,060 |
| 3. | ಓರ್ವ ಕಾರ್ಯಕ್ರಮ ಸಹಾಯಕ @ ರೂ.13,240/– ಮಾಸಿಕ | 1,58,880 |
| | **ಒಟ್ಟು** | **11,32,020** |

*2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ಸಿಬ್ಬಂದಿಗಳ ತೃಪ್ತಿಕರ ಕೆಲಸವನ್ನು ಆಧರಿಸಿ ವಾರ್ಷಿಕ 3% ವೇತನ ಹೆಚ್ಚಳಕ್ಕೆ ಅವಕಾಶವಿರುತ್ತದೆ (ಸಂಚಿತ ಆಧಾರಿತ– On Cumulative Basis)*

**ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಭೌಗೋಳಿಕ ಪ್ರದೇಶವ್ಯಾಪ್ತಿ ಹಾಗೂ ಜನಸಂಖ್ಯೆಯನ್ನು ಆಧರಿಸಿ ಕಾರ್ಯಕ್ರಮ ಅಧಿಕಾರಿಗಳ ಸಂಖ್ಯೆಯನ್ನು ಗರಿಷ್ಠ ಇಬ್ಬರಿಗೆ ಹೊಂದಬಹುದು*

| **(ಸಿ) ಆಡಳಿತಾತ್ಮಕ ವೆಚ್ಚಗಳು** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಆಡಳಿತಾತ್ಮಕ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ಸೌಲಭ್ಯದೊಂದಿಗೆ ದೂರವಾಣಿ, ಜೆರಾಕ್ಸ್), ಎಸ್‌ಎಆರ್‌ಎ ಸಿಬ್ಬಂದಿಗಾಗಿ ಪ್ರಯಾಣ ಹಾಗೂ ದೈನಂದಿನ ಭತ್ಯೆ, (ಇಂಟರ್‌ನೆಟ್ ಸಂಪರ್ಕ, ಬಾಡಿಗೆ ವಾಹನ, ಭದ್ರತಾ ಸಿಬ್ಬಂದಿ, ಇತ್ಯಾದಿ ಒಳಗೊಂಡಂತೆ) ಆಕಸ್ಮಿಕ ವೆಚ್ಚಗಳು. | 4,00,000 |
| 2. | ಐಇಸಿ ಸಾಮಗ್ರಿಗಳ ಮುದ್ರಣ ಹಾಗೂ ಹಂಚಿಕೆ ಒಳಗೊಂಡಂತೆ ಐಇಸಿ ಹಾಗೂ ಮಾಧ್ಯಮ ಅಭಿಯಾನದ ಮೂಲಕ ಅರಿವು ಮೂಡಿಸುವಿಕೆ | 3,00,000 |
| | **ಒಟ್ಟು** | **7,00,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **18,32,020** |
| **ಒಟ್ಟು (ಎ+ಬಿ+ಸಿ) ಅನಾವರ್ತಕ + ಆವರ್ತಕ ಅನುದಾನ.** | | **21,67,020** |

### iii. 20ಕ್ಕಿಂತ ಹೆಚ್ಚಿನ ಸಂಖ್ಯೆಯ ಜಿಲ್ಲೆಗಳಿರುವ ರಾಜ್ಯಗಳಲ್ಲಿ ಎಸ್‌ಎಆರ್‌ಎಗಾಗಿ ಹಣಕಾಸಿನ ಬೆಂಬಲ–(Financial Support to SARA for States more than 20 Districts):

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಪೀಠೋಪಕರಣ ಹಾಗೂ ಇತರೆ ಕಚೇರಿ ಉಪಕರಣಗಳು (ಮೇಜುಗಳು, ಖುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಕಗಳು, ಕಪಾಟುಗಳು, ಜೆರಾಕ್ಸ್–ಕಂ–ಸ್ಕ್ಯಾನರ್ ಯಂತ್ರ, ಇತ್ಯಾದಿ | 2,00,000 |
| 2. | ಯುಪಿಎಸ್ & ವೆಬ್ ಕ್ಯಾಮೆರಾ ಜೊತೆಗೆ ಮೂರು ಕಂಪ್ಯೂಟರ್‌ಗಳು (ಸಾಫ್ಟ್‌ವೇರ್ ಪರವಾನಗಿ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನರ್‌ಗಳು | 1,35,000 |
| | **ಒಟ್ಟು** | **3,35,000** |

**ಆವರ್ತಕ ವೆಚ್ಚ (ವಾರ್ಷಿಕ):**

| | | |
|---|---|---|
| **(ಬಿ) ಸಿಬ್ಬಂದಿಗಳ ವೇತನ** | | |
| 1. | ಓರ್ವ ಕಾರ್ಯಕ್ರಮ ವ್ಯವಸ್ಥಾಕರು @ ರೂ.46,340/– ಮಾಸಿಕ | 5,56,080 |
| 2. | *ಓರ್ವ ಕಾರ್ಯಕ್ರಮ ಅಧಿಕಾರಿ @ ರೂ.34,755/– ಮಾಸಿಕ | 4,17,060 |
| 3. | ಓರ್ವ ಕಾರ್ಯಕ್ರಮ ಸಹಾಯಕ @ ರೂ.13,240/– ಮಾಸಿಕ | 1,58,880 |
| | **ಒಟ್ಟು** | **11,32,020** |

2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ಸಿಬ್ಬಂದಿಗಳ ತೃಪ್ತಿಕರ ಕೆಲಸವನ್ನು ಆಧರಿಸಿ ವಾರ್ಷಿಕ 3% ವೇತನ ಹೆಚ್ಚಳಕ್ಕೆ ಅವಕಾಶವಿರುತ್ತದೆ (ಸಂಚಿತ ಆಧಾರಿತ)

**ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಭೌಗೋಳಿಕ ಪ್ರದೇಶ ವ್ಯಾಪ್ತಿ ಹಾಗೂ ಜನಸಂಖ್ಯೆಯನ್ನು ಆಧರಿಸಿ ಕಾರ್ಯಕ್ರಮ ಅಧಿಕಾರಿಗಳ ಸಂಖ್ಯೆ ಗರಿಷ್ಠ ಇಬ್ಬರು ಇರಬಹುದು.*

| **(ಸಿ) ಆಡಳಿತಾತ್ಮಕ ವೆಚ್ಚಗಳು** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಆಡಳಿತಾತ್ಮಕ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿ ಸೌಲಭ್ಯದೊಂದಿಗೆ ದೂರವಾಣಿ, ಜೆರಾಕ್ಸ್), ಎಸ್‌ಎಆರ್‌ಎ ಸಿಬ್ಬಂದಿಗಾಗಿ ಪ್ರಯಾಣ ಹಾಗೂ ದೈನಂದಿನ ಭತ್ಯೆ, (ಇಂಟರ್‌ನೆಟ್ ಸಂಪರ್ಕ, ಬಾಡಿಗೆ ವಾಹನ, ಭದ್ರತಾ ಸಿಬ್ಬಂದಿ, ಇತ್ಯಾದಿ ಒಳಗೊಂಡಂತೆ) ಆಕಸ್ಮಿಕ ವೆಚ್ಚಗಳು. | 6,00,000 |
| 2. | ಐಇಸಿ ಸಾಮಗ್ರಿಗಳ ಮುದ್ರಣ ಹಾಗೂ ಹಂಚಿಕೆ ಒಳಗೊಂಡಂತೆ ಐಇಸಿ ಹಾಗೂ ಮಾಧ್ಯಮ ಅಭಿಯಾನದ ಮೂಲಕ ಅರಿವು ಮೂಡಿಸುವಿಕೆ | 5,00,000 |
| | **ಒಟ್ಟು** | **11,00,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **22,32,020** |
| **ಒಟ್ಟು (ಎ+ಬಿ+ಸಿ) ಅನಾವರ್ತಕ + ಆವರ್ತಕ ಅನುದಾನ.** | | **25,67,020** |

# ಜಿಲ್ಲಾ ಅನುಬಂಧಗಳು – ANNEXURES-III

## ಎ. ಡಿಸಿಪಿಯು ನಲ್ಲಿ ಕರ್ತವ್ಯ ಹೊಂದಿರುವವರ ಪಾತ್ರಗಳು ಹಾಗೂ ಜವಾಬ್ದಾರಿಗಳು– Roles and Responsibilities of Duty holders in DCPU:

### 1) ರಕ್ಷಣಾ ಅಧಿಕಾರಿ (ಸಾಂಸ್ಥಿಕ ಪೋಷಣೆ) – Protection Officer (Institutional Care):

ಡಿಸಿಪಿಓ ಅವರ ಮೇಲ್ವಿಚಾರಣೆಯಡಿ, ರಕ್ಷಣಾ ಅಧಿಕಾರಿಯು (ಸಾಂಸ್ಥಿಕ ಪೋಷಣೆ) ಜಿಲ್ಲೆ ಹಾಗೂ ಸ್ಥಳೀಯ ಮಟ್ಟಗಳಲ್ಲಿ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವಂತಹ ಮಕ್ಕಳಿಗೆ ಸಂಬಂಧಪಟ್ಟ ಮಕ್ಕಳ ರಕ್ಷಣಾ ಕಾರ್ಯಕ್ರಮಗಳು ಹಾಗೂ ನೀತಿಗಳ ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಪಡಿಸಬೇಕು. ಆಕೆ/ಆತ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಎಲ್ಲಾ ಮಕ್ಕಳಿಗಾಗಿ ಜಿಲ್ಲಾ ಮಟ್ಟದಲ್ಲಿ ಪರಿಣಾಮಕಾರಿ ಸಾಂಸ್ಥಿಕ/ಮಕ್ಕಳ ಪೋಷಣಾ ಸೇವೆಗಳನ್ನು ಖಾತ್ರಿಪಡಿಸಲು ಜವಾಬ್ದಾರರಾಗಿರುತ್ತಾರೆ. ಪ್ರತಿ ಜಿಲ್ಲೆಯೂ ತಾಲ್ಲೂಕಗಳ ಸಂಖ್ಯೆ, ಭೌಗೋಳಿಕ ಪ್ರದೇಶ ಹಾಗೂ ಆಯಾ ಜಿಲ್ಲೆಯಲ್ಲಿನ ಪ್ರಕರಣಗಳ ಹೊರೆಯನ್ನು ಆಧರಿಸಿ ಕನಿಷ್ಠ ಓರ್ವ ರಕ್ಷಣಾ ಅಧಿಕಾರಿ, ಹಾಗೂ ಗರಿಷ್ಠ ಮೂವರು ರಕ್ಷಣಾ ಅಧಿಕಾರಿಗಳನ್ನು (ಸಾಂಸ್ಥಿಕ ಪೋಷಣೆ) ಹೊಂದಿರಬಹುದು. ಒಂದು ವೇಳೆ ಮಕ್ಕಳ ಕಲ್ಯಾಣ ಸಮಿತಿಗೆ ಹೆಚ್ಚಿನ ಕೆಲಸದ ಹೊರೆ ಇದ್ದರೆ, ರಾಜ್ಯ ಸರ್ಕಾರವು ಸಮಿತಿಗೆ ಓರ್ವ ಪೂರ್ಣಾವಧಿ ರಕ್ಷಣಾ ಅಧಿಕಾರಿಯನ್ನು ನೇಮಕ ಮಾಡಬಹುದು. ರಕ್ಷಣಾ ಅಧಿಕಾರಿಯ (ಸಾಂಸ್ಥಿಕ ಪೋಷಣೆ) ನಿರ್ಧಿಷ್ಟ ಪಾತ್ರಗಳು ಹಾಗೂ ಜವಾಬ್ದಾರಿಗಳು ಇವುಗಳನ್ನು ಒಳಗೊಂಡಿರಬೇಕು:–

i. ಮಕ್ಕಳು ದಿಕ್ಕಿಲ್ಲದಿರುವಂತಾಗುವುದನ್ನು ತಡೆಗಟ್ಟಲು ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸಿ, ಆತ/ಆಕೆಯ ಅಡಿ ಕೆಲಸ ನಿರ್ವಹಿಸುತ್ತಿರುವ ಔಟ್‌ರೀಚ್ ಕಾರ್ಯಕರ್ತರ ಬೆಂಬಲದೊಂದಿಗೆ, ಆಪ್ತಸಮಾಲೋಚನೆ, ಆರೋಗ್ಯ ಸೇವೆಗಳ ದೊರೆಯುವಿಕೆ, ಶಿಕ್ಷಣ, ವೃತ್ತಿಪರ ಕೌಶಲ್ಯಗಳು, ಇತ್ಯಾದಿಗಳಂತಹ ಸೇವೆಗಳ ಅಗತ್ಯ ಬೆಂಬಲವನ್ನು ಒದಗಿಸುವುದು/ ವ್ಯವಸ್ಥೆ ಒದಗಿಸುವುದು;

ii. ಸಂಕಷ್ಟದ ಸನ್ನಿವೇಶದಲ್ಲಿರುವ ಮಕ್ಕಳ ಸಾಂದರ್ಭಿಕ ವಿಶ್ಲೇಷಣೆಯನ್ನು ಕೈಗೊಳ್ಳುವುದು, ಬೆಂಬಲದ ಅಗತ್ಯವಿರುವ ಮಕ್ಕಳು, ಸಂಸ್ಥೆಗಳಲ್ಲಿರುವ ಮಕ್ಕಳ ಸಂಖ್ಯೆ ಹಾಗೂ ಅವರಿಗೆ ಯಾವ ಸೇವೆಗಳ ಅಗತ್ಯವಿದೆ ಎನ್ನುವ ಅಂಶಗಳಿಗೆ ಸಂಬಂಧಪಟ್ಟಂತೆ ಮಕ್ಕಳ ರಕ್ಷಣೆಯ ಸಮಸ್ಯೆಗಳ ವಿವಿಧ ಆಯಾಮಗಳ ಕುರಿತ ದತ್ತಾಂಶ ಸಂಗ್ರಹ ಹಾಗೂ ಕ್ರೋಢೀಕರಣ;

iii. ಸಂಗ್ರಹಿಸಲ್ಪಟ್ಟ ದತ್ತಾಂಶವನ್ನು ಆಧರಿಸಿ ಜಿಲ್ಲಾ ಮಟ್ಟದಲ್ಲಿ ಸಂಪನ್ಮೂಲ ಮ್ಯಾಪಿಂಗ್ ಚಟುವಟಿಕೆ ಕೈಗೊಳ್ಳುವುದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ ಹಾಗೂ ಮಕ್ಕಳ ಸಂಬಂಧಿತ ಸೇವೆಗಳ ಸಂಪನ್ಮೂಲ ಕೈಪಿಡಿಯನ್ನು ಅಭಿವೃದ್ಧಿಪಡಿಸುವುದು;

iv. ಜಿಲ್ಲೆಯಲ್ಲಿ ಮುಕ್ತ ತಂಗುದಾಣ ಒಳಗೊಂಡಂತೆ ಎಲ್ಲಾ ಸಾಂಸ್ಥಿಕ ಸೇವಾ ಕಾರ್ಯಕ್ರಮಗಳಲ್ಲಿ ಮಕ್ಕಳ ನಿಗಾವಣಾ ವ್ಯವಸ್ಥೆಯ ರಚನೆ ಹಾಗೂ ನಿರ್ವಹಣೆಯನ್ನು ಖಾತ್ರಿಪಡಿಸುವುದು;

v. ಮಕ್ಕಳ ವಿಚಾರಣೆ ಹಾಗೂ ಪುನರ್‌ಸ್ಥಾಪನೆಗಾಗಿ ಆ ಪ್ರಕ್ರಿಯೆಯಲ್ಲಿ ಸಿಡಬ್ಲ್ಯೂಸಿಗೆ ಬೆಂಬಲ ಒದಗಿಸುವುದು;

vi. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕಣೆ) ಕಾಯ್ದೆ, 2015 ರಡಿ ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳು/ ಸಂಘಟನೆಗಳು/ ಕೇಂದ್ರಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ ಮಾಡುವುದು;

vii. ಮಕ್ಕಳಿಗೆ ಆಶ್ರಯ ನೀಡಿರುವ ಸರ್ಕಾರಿ ಹಾಗೂ ಸರ್ಕಾರೇತರ (ಬೆಂಬಲಸಹಿತ ಹಾಗೂ ರಹಿತ) ಎರಡೂ ರೀತಿಯ ಮಕ್ಕಳ ಪೋಷಣಾ ಸಂಸ್ಥೆಗಳು/ ಸಂಘಟನೆಗಳು/ ಕೇಂದ್ರಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ, ಹಾಗೂ ಕನಿಷ್ಠ ಪೋಷಣೆ ಮಾನಕಗಳ ಅನುಷ್ಠಾನವನ್ನು ಖಾತ್ರಿಪಡಿಸುವುದು;

viii. ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳ್ಳುತ್ತಿರುವ ಇತರೆ ಮಕ್ಕಳ ಕಲ್ಯಾಣ ಮತ್ತು ರಕ್ಷಣಾ ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ;

ix. ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯ ಸಂಯೋಜನೆಯೊಂದಿಗೆ ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕ ಪೋಷಣಾ ಸೇವೆಗಳನ್ನು ಒದಗಿಸುತ್ತಿರುವ ಸಿಬ್ಬಂದಿಗಳ (ಸರ್ಕಾರಿ ಹಾಗೂ ಸರ್ಕಾರೇತರ ಎರಡೂ) ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿಗಾಗಿ ತರಬೇತಿಯ ಅಗತ್ಯವನ್ನು ಗುರುತಿಸುವುದು ಹಾಗೂ ಆಯೋಜಿಸುವುದು;

x. ಎಲ್ಲಾ ಮಕ್ಕಳಿಗೆ, ಮಕ್ಕಳ ಜನನ ಪ್ರಮಾಣಪತ್ರ, ಆಧಾರ್ ಕಾರ್ಡ್, ಶಾಲೆಗೆ ಹೋಗುತ್ತಿರುವ ಪ್ರಮಾಣಪತ್ರ, ಲಸಿಕೆ ಪ್ರಮಾಣಪತ್ರಗಳು, ಆರೋಗ್ಯ ತಪಾಸಣಾ ಚೀಟಿಗಳು, ಇತ್ಯಾದಿಗಳಂತಹ ಎಲ್ಲಾ ದಾಖಲೆಪತ್ರಗಳನ್ನು ಸಿಸಿಐಗೆ ಲಭ್ಯಗೊಳಿಸುವುದನ್ನು ಖಾತ್ರಿಪಡಿಸುವುದು;

xi. ಸಿಸಿಐಗಳು ಹಾಗೂ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರಡಿ ನೋಂದಣಿ ಪ್ರಮಾಣಪತ್ರಗಳು ಪರಿಶೀಲಿಸಲ್ಪಟ್ಟಿರುವುದು ಹಾಗೂ ಕಾಲಕಾಲಕ್ಕೆ ಅಪ್‌ಡೇಟ್ ಆಗಿರುವುದನ್ನು ಖಾತ್ರಿಪಡಿಸುವುದು ಹಾಗೂ ಮಕ್ಕಳ ನ್ಯಾಯ ಕಾಯ್ದೆ/ ನಿಯಮಾವಳಿಗಳಡಿ ನಿಗಧಿಪಡಿಸಿರುವ ಮಾನಕಗಳ/ ಪ್ರಮಾಣಿತ ಗುಣಮಟ್ಟದ ಕ್ರಮಬದ್ಧ ಕಾರ್ಯವಿಧಾನಗಳ ಪ್ರಕಾರ ಹೊಸ ಸಿಸಿಐಗಳ ನೋಂದಣಿಯನ್ನು ಕೈಗೊಳ್ಳುವುದು;

xii. ಸಿಸಿಐಗಳನ್ನು ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳು ನೀತಿ ಆಯೋಗ ನಿರ್ವಹಿಸುತ್ತಿರುವ ದರ್ಪಣ್ ಪೋರ್ಟಲ್‌ನಲ್ಲಿ ನೋಂದಣಿ ಆಗುವುದನ್ನು ಖಾತ್ರಿಪಡಿಸುವುದು ಹಾಗೂ ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ–FCRA) ಒಳಗೊಂಡಂತೆ ಎಲ್ಲಾ ಸರ್ಕಾರಿ ನಿಬಂಧನೆಗಳ ಅನುಸರಣೆಯನ್ನು ಮಾಡುತ್ತಿರುವುದನ್ನು ಖಾತ್ರಿಪಡಿಸುವುದು;

xiii. ಎಲ್ಲಾ ಸರ್ಕಾರೇತರ ಸಂಸ್ಥೆಗಳು ಹಾಗೂ ಸಿಸಿಐ (ಅನುದಾನಿತ ಹಾಗೂ ಅನುದಾನರಹಿತ) ಸಿಬ್ಬಂದಿಗಳ ದಾಖಲೆಪತ್ರಗಳನ್ನು ಖಾತ್ರಿಪಡಿಸಲು ಅವರ ಹಿನ್ನೆಲೆಯನ್ನು ಖಾತ್ರಿಪಡಿಸುವುದು;

xiv. ಡಿಸಿಪಿಓಗೆ ಒದಗಿಸುವ ಜಿಲ್ಲಾ ವರದಿಯಲ್ಲಿ ಸಿಸಿಐಗಳ ಮಾಸಿಕ ಅಂದಾಜಿಸುವಿಕೆಯನ್ನು ಸಿದ್ಧಪಡಿಸುವುದು ಹಾಗೂ ಸಲ್ಲಿಸುವುದು;

xv. ಅಭಿಯಾನ ಉದ್ದೇಶಗಳ ಈಡೇರಿಕೆಯ ಸಂಬಂಧ ಡಿಸಿಪಿಓ ನಿಯೋಜಿಸುವ ಮತ್ಯಾವುದಾದರೂ ಕೆಲಸ.

**2) ರಕ್ಷಣಾ ಅಧಿಕಾರಿ (ಸಾಂಸ್ಥಿಕೇತರ ಪೋಷಣೆ) – Protection Officer (Non-Institutional Care:**

ಡಿಸಿಪಿಓ ಮೇಲ್ವಿಚಾರಣೆಯಡಿ, ರಕ್ಷಣಾ ಅಧಿಕಾರಿಯು (ಸಾಂಸ್ಥಿಕೇತರ ಪೋಷಣೆ), ಪ್ರಾಯೋಜಕತ್ವ, ಫಾಸ್ಟರ್ ಕೇರ್, ದತ್ತು, ಅನುಪಾಲನೆ ಹಾಗೂ ತೊಟ್ಟಿಲ ಮಗು ಯೋಜನೆಗೆ ಸಂಬಂಧಪಟ್ಟ ಮಿಷನ್ ವಾತ್ಸಲ್ಯದ ಸಾಂಸ್ಥಿಕೇತರ ಅಂಶಗಳ ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಪಡಿಸಬೇಕು. ಪ್ರತಿ ಜಿಲ್ಲೆಯಲ್ಲೂ, ತಾಲ್ಲೂಕುಗಳು, ಭೌಗೋಳಿಕ ಪ್ರದೇಶ ಹಾಗೂ ಜಿಲ್ಲೆಯ ಮಕ್ಕಳ ಜನಸಂಖ್ಯೆಯನ್ನು ಅಧರಿಸಿ ಗರಿಷ್ಠ ಮೂರು ರಕ್ಷಣಾ ಅಧಿಕಾರಿಗಳನ್ನು (ಸಾಂಸ್ಥಿಕೇತರ ಪೋಷಣೆ) ಹೊಂದಿರಬೇಕು. ಈ ರಕ್ಷಣಾ ಅಧಿಕಾರಿಯ (ಸಾಂಸ್ಥಿಕೇತರ ಪೋಷಣೆ) ನಿರ್ಧಿಷ್ಟ ಪಾತ್ರಗಳು ಹಾಗೂ ಜವಾಬ್ದಾರಿಗಳಲ್ಲಿ ಇವುಗಳು ಒಳಗೊಂಡಿವೆ:–

i. ಮಕ್ಕಳು ದಿಕ್ಕಿಲ್ಲದಿರುವಂತಾಗುವುದನ್ನು ತಡೆಗಟ್ಟಲು ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸಿ, ಅಗತ್ಯವಿರುವ ಕಡೆ ಸಾಂಸ್ಥಿಕೇತರ ಪೋಷಣೆಗಾಗಿ ಅಗತ್ಯ ಬೆಂಬಲವನ್ನು ಒದಗಿಸುವುದು/ ವ್ಯವಸ್ಥೆ ಮಾಡುವುದು;

ii. ಜಿಲ್ಲೆಯಿಂದ ದತ್ತುಗೆ ಅರ್ಹವಿರುವ ಮಕ್ಕಳನ್ನು ಗುರುತಿಸುವಲ್ಲಿ ಜಿಲ್ಲಾ ದಂಡಾಧಿಕಾರಿಗೆ ಬೆಂಬಲ ನೀಡುವುದು ಹಾಗೂ ದತ್ತುಗೆ ಸಿದ್ಧವಾಗಿರುವ ಮಕ್ಕಳ ಜಿಲ್ಲಾಮಟ್ಟದ ಡೇಟಾಬೇಸನ್ನು ಸಿದ್ಧಪಡಿಸುವುದು;

iii. ಎಸ್‌ಎಎ–SAA ನೆರವಿನೊಂದಿಗೆ ಜಿಲ್ಲೆಯಲ್ಲಿ ದತ್ತುಗೆ ಪ್ರೋತ್ಸಾಹ ನೀಡುವುದು ಹಾಗೂ ಸುಗಮಗಾರಿಕೆ (Facilitate) ಮಾಡುವುದು:

a) ರಾಷ್ಟ್ರದೊಳಗಿನ ದತ್ತುಗಾಗಿ (In-Country) ಪಿಎಪಿಗಳು ಹಾಗೂ ದತ್ತುಗೆ ಅರ್ಹವಿರುವ ಮಕ್ಕಳ ಡೇಟಾಬೇಸ್ ನಿರ್ವಹಣೆ ಹಾಗೂ ನೋಂದಣಿ;

b) ಜಿಲ್ಲೆಯೊಳಗೆ ರಾಷ್ಟ್ರದೊಳಗಿನ ದತ್ತುಗೆ ಪ್ರೋತ್ಸಾಹ;

c) ದತ್ತು ಪ್ಲೇಸ್‌ಮೆಂಟ್ ನಿಗಾವಣೆ ಹಾಗೂ ಎಸ್‌ಎಎಗಳು ಪ್ಲೇಸ್‌ಮೆಂಟ್ ನಂತರದ ಬೆಂಬಲ ಒದಗಿಸುವುದನ್ನು ಮಾಡುವುದು ಹಾಗೂ ಅನುಸರಣೆ ಮಾಡುವುದು.

iv. ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ (ಸಿಸಿಐ ಗಳಲ್ಲಿ) ದತ್ತುಗೆ ಸಿದ್ಧವಾಗಿರುವ ಎಲ್ಲಾ ಮಕ್ಕಳನ್ನೂ ಸಹ ದತ್ತು ವ್ಯವಸ್ಥೆಯಡಿ ತರುವುದನ್ನು ಖಾತ್ರಿಪಡಿಸುವುದು;

v. ಫಾಸ್ಟರ್ ಕೇರ್, ಪ್ರಾಯೋಜಕತ್ವ ಹಾಗೂ ಅನುಪಾಲನಾ ಸೇವೆ ಕಾರ್ಯಕ್ರಮಗಳ ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಯನ್ನು ಕೈಗೊಳ್ಳುವುದು;

vi. ಸಂಪನ್ಮೂಲ ಮ್ಯಾಪಿಂಗ್ ನಡೆಸುವುದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ ಅಭಿವೃದ್ಧಿಗೆ ಕೊಡುಗೆ ನೀಡುವುದು ಮತ್ತು ದತ್ತಾಂಶ ಸಂಗ್ರಹ ಆಧಾರದ ಮೇಲೆ ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕೇತರ ಪೋಷಣೆಗಾಗಿ ಮಕ್ಕಳ ಸಂಬಂಧಿ ಸೇವೆಗಳ ಸಂಪನ್ಮೂಲ ಕೈಪಿಡಿಯನ್ನು ಅಭಿವೃದ್ಧಿಪಡಿಸುವುದು;

vii. ಜಿಲ್ಲೆಯಲ್ಲಿ ವಾತ್ಸಲ್ಯ ಪೋರ್ಟಲ್‌ನಲ್ಲಿ ಮಕ್ಕಳ ವಿವರಗಳನ್ನು ಅಪ್‌ಲೋಡ್ ಮಾಡಲು ನೋಡಲ್ ಅಧಿಕಾರಿಯಂತೆ ಕಾರ್ಯನಿರ್ವಹಿಸುವುದು;

viii. ಮಕ್ಕಳ ವಿಚಾರಣೆ ಹಾಗೂ ಪುನರ್‌ಸ್ಥಾಪನೆಯ ಪ್ರಕ್ರಿಯೆಯಲ್ಲಿ ಸಿಡಬ್ಲ್ಯೂಸಿಗೆ ಬೆಂಬಲ ನೀಡುವುದು;

ix. ಜಿಲ್ಲೆಯಲ್ಲಿ ಎಸ್‌ಎಎಗಳು ಒಳಗೊಂಡಂತೆ ಮಕ್ಕಳ ಪೋಷಣಾ ಸಂಸ್ಥೆಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ;

x. ಮಕ್ಕಳಿಗೆ ಸಾಂಸ್ಥಿಕೇತರ ಪೋಷಣೆ ಒದಗಿಸುತ್ತಿರುವ ಎಲ್ಲಾ ಸಿಬ್ಬಂದಿಗಳ (ಸರ್ಕಾರಿ ಹಾಗೂ ಸರ್ಕಾರೇತರ) ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿಗಾಗಿ ಎಸ್‌ಎಆರ್‌ಎ ಹಾಗೂ ಎಸ್‌ಸಿಪಿಎಸ್ ನೊಂದಿಗೆ ಸಂಯೋಜನೆ; ಹಾಗೂ

xi. ಜಿಲ್ಲೆಯಲ್ಲಿ ದತ್ತು ಕಾರ್ಯಕ್ರಮದ ಸ್ಥಿತಿಗತಿ ಕುರಿತು ಎಸ್‌ಎಆರ್‌ಎ ಗೆ ತ್ರೈಮಾಸಿಕ ವರದಿ ಸಲ್ಲಿಸುವುದು;

xii. ಅಭಿಯಾನದ ಉದ್ದೇಶಗಳ ಪೂರೈಕೆಗಾಗಿ ಡಿಸಿಪಿಓ ವಹಿಸುವ ಮತ್ಯಾವುದಾದರೂ ಕೆಲಸವನ್ನು ನಿರ್ವಹಿಸುವುದು.

**3) ಕಾನೂನು–ಕಂ–ಪರಿವೀಕ್ಷಣಾಧಿಕಾರಿ –Legal-cum-Probation Officer:**

ಕಾನೂನು–ಕಂ–ಪರಿವೀಕ್ಷಣಾಧಿಕಾರಿಯವರು ಡಿಸಿಪಿಓ ಮೇಲ್ವಿಚಾರಣೆಯಡಿ ಕಾರ್ಯನಿರ್ವಹಿಸಬೇಕು. ಆತ/ಆಕೆ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳೊಂದಿಗೆ ಸಂಯೋಜನೆ ಹಾಗೂ ಮೇಲ್ವಿಚಾರಣೆಯನ್ನು ನಡೆಸಬೇಕು. ಆತ/ಆಕೆ ಜಿಲ್ಲಾ ಮಟ್ಟದಲ್ಲಿ ಜೆಜೆಬಿ–JJB ಹಾಗೂ ಸಿಡಬ್ಲ್ಯೂಸಿ–CWC ಗೆ ಬೆಂಬಲ ಒದಗಿಸಬೇಕು. ಪ್ರತಿ ಜಿಲ್ಲೆಯೂ ಸಹ ತಾಲ್ಲೂಕುಗಳೂ, ಭೌಗೋಳಿಕ ಪ್ರದೇಶ ಹಾಗೂ ಆಯಾ ಜಿಲ್ಲೆಯ ಪ್ರಕರಣಗಳ ಹೊರೆಯನ್ನು ಆಧರಿಸಿ ಕನಿಷ್ಠ ಒಬ್ಬರು ಹಾಗೂ ಗರಿಷ್ಠ ಮೂವರು ಕಾನೂನು–ಕಂ–ಪರಿವೀಕ್ಷಣಾಧಿಕಾರಿಗಳನ್ನು ಹೊಂದಿರಬೇಕು. Probation of Offenders Act ಯಡಿ ನೇಮಕಗೊಂಡಿರುವ ಪರಿವೀಕ್ಷಣಾಧಿಕಾರಿಗಳು ಲಭ್ಯವಿರುವ ಕಡೆ ಕಾನೂನು–ಕಂ–ರಕ್ಷಣಾ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಬಹುದು. ಒಂದು ವೇಳೆ ಮಕ್ಕಳ ನ್ಯಾಯ ಮಂಡಳಿಗೆ ಹೆಚ್ಚಿನ ಕೆಲಸದ ಹೊರೆ ಇದ್ದರೆ ರಾಜ್ಯ ಸರ್ಕಾರವು ಮಂಡಳಿಗೆ ಓರ್ವ ಪೂರ್ಣಾವಧಿ ಕಾನೂನು–ಕಂ–ಪರಿವೀಕ್ಷಣಾಧಿಕಾರಿಯನ್ನು ನೇಮಕ ಮಾಡಬಹುದು. ಅವರ ಪಾತ್ರಗಳು ಹಾಗೂ ಜವಾಬ್ದಾರಿಗಳು ಇವುಗಳನ್ನು ಒಳಗೊಂಡಿರಬೇಕು:

i. ಜಿಲ್ಲೆಯಲ್ಲಿ ಕಾನೂನಿನ ಸಂಘರ್ಷಕ್ಕೆ ಒಳಗಾದ ಮಕ್ಕಳ ವಿವಿಧ ಆಯಾಮಗಳ ದತ್ತಾಂಶ ಸಂಗ್ರಹ ಹಾಗೂ ಕ್ರೋಢೀಕರಣ.

ii. ಮಕ್ಕಳ ನ್ಯಾಯ ಮಂಡಳಿಯ ಸಭೆಗಳಿಗೆ ಹಾಜರಾಗುವುದು.

iii. ವಿಚಾರಣೆಗಳನ್ನು ನಡೆಸಲು ಜೆಜೆಬಿಗೆ ಬೆಂಬಲ ನೀಡುವುದು.

iv. ಸಾಮಾಜಿಕ ತಪಾಸಣಾ ವರದಿಗಳನ್ನು (SIR- Social Investigation Report) ಸಿದ್ಧಪಡಿಸುವುದು ಹಾಗೂ ಸಲ್ಲಿಸುವುದು.

v. ಪ್ರಕರಣ ಕಡತಗಳು ಹಾಗೂ ಇತರೆ ವಹಿಗಳ ನಿರ್ವಹಣೆ.

vi. ಸಿಸಿಎಲ್ (ಕಾನೂನು ಸಂಘರ್ಷಕ್ಕೆ ಒಳಗಾದ ಮಗು) ಅನ್ನು ಜೆಜೆಬಿಯಿಂದ ಮನೆಗೆ/ ಫಿಟ್ ವ್ಯಕ್ತಿಯಲ್ಲಿಗೆ/ ಫಿಟ್ ಸಂಸ್ಥೆಗೆ ಕರೆದುಕೊಂಡು ಹೋಗುವುದು.

vii. ಮೇಲ್ವಿಚಾರಣೆ ಹಾಗೂ ಬಿಡುಗಡೆಯ ನಂತರದಲ್ಲಿ ಬಿಡುಗಡೆಗೊಂಡಿರುವ ಸಿಸಿಎಲ್ CCL- Children in Conflict with Law) ಗಳ ಅನುಸರಣಾ ಭೇಟಿಗಳನ್ನು ಕೈಗೊಳ್ಳುವುದು.

viii. ಸಿಸಿಎಲ್ ಮಗುವಿನ/ಮಕ್ಕಳ ಪುನರ್ವಸತಿ ಹಾಗೂ ಸಾಮಾಜಿಕ ಮರುಏಕೀಕರಣಕ್ಕಾಗಿ ಸ್ವಯಂಸೇವಾ ಕ್ಷೇತ್ರದೊಂದಿಗೆ ಸಂಪರ್ಕಗಳನ್ನು ಸ್ಥಾಪಿಸುವುದು.

ix. ಅಭಿಯಾನದ ಉದ್ದೇಶಗಳ ಈಡೇರಿಕೆಗಾಗಿ ಡಿಸಿಪಿಓ ನಿಯೋಜಿಸುವ ಮತ್ಯಾವುದಾದರೂ ಕೆಲಸವನ್ನು ನಿರ್ವಹಿಸುವುದು.

ಕಾನೂನು–ಕಂ–ಪರಿವೀಕ್ಷಣಾಧಿಕಾರಿ ಉತ್ತಮ ಕಾನೂನು ಹಿನ್ನೆಲೆಯನ್ನು ಹೊಂದಿರಬೇಕು ಹಾಗೂ ಮಕ್ಕಳ ಹಕ್ಕುಗಳು ಹಾಗೂ ರಕ್ಷಣೆಯ ವಿಷಯಗಳ ಕುರಿತು ಚೆನ್ನಾಗಿ ಅರಿವನ್ನು ಹೊಂದಿರಬೇಕು. ಆತ/ಆಕೆ ಮಕ್ಕಳಿಗೆ/ ಸಿಸಿಎಲ್‌ಗೆ ಉಚಿತವಾಗಿ ಕಾನೂನು ನೆರವಿನ ಸೇವೆಗಳನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ. ಆತ/ಆಕೆ, ಅಗತ್ಯವಿರುವಾಗ, ಮಕ್ಕಳ ನ್ಯಾಯ ಕಾಯ್ದೆಯಡಿ ಬರುವ ಮಕ್ಕಳ ಸಂಬಂಧಿತ ಕಾನೂನು ವಿಷಯಗಳಲ್ಲಿ ಸಿಡಬ್ಲ್ಯೂಸಿ ಹಾಗೂ ಜೆಜೆಬಿಗೆ ಅಗತ್ಯ ಬೆಂಬಲವನ್ನು ಒದಗಿಸಬೇಕು.

### 4) ಆಪ್ತಸಮಾಲೋಚಕ –Counsellor:

ಜಿಲ್ಲಾ ಮಟ್ಟದಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಹಾಗೂ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವಂತಹ ಮಕ್ಕಳಿಗೆ ಹಾಗೂ ಅವರ ಪೋಷಕರು ಹಾಗೂ ಕುಟುಂಬಗಳಿಗೆ ಆಪ್ತಸಮಾಲೋಚನೆ ಸೇವೆಗಳನ್ನು ಒದಗಿಸಲು ಪ್ರತಿ ಮಕ್ಕಳ ರಕ್ಷಣಾ ಘಟಕವೂ ಸಹ ಓರ್ವ ಆಪ್ತಸಮಾಲೋಚಕರನ್ನು ಹೊಂದಿರಬೇಕು. ಡಿಸಿಪಿಯುದಲ್ಲಿರುವ ಆಪ್ತಸಮಾಲೋಚಕರು, ಸಂಸ್ಥೆಗಳಲ್ಲಿರುವ ಆಪ್ತಸಮಾಲೋಚಕರ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುತ್ತಾರೆ ಹಾಗೂ ಡಿಸಿಪಿಯುದೊಂದಿಗೆ ಸಂಪರ್ಕಕ್ಕೆ ಬರುವಂತಹ ಮಕ್ಕಳು ಹಾಗೂ ಕುಟುಂಬಗಳಿಗೆ ಆಪ್ತಸಮಾಲೋಚನೆ ಒದಗಿಸಲು ಜವಾಬ್ದಾರರಾಗಿರುತ್ತಾರೆ.

### 5) ಸಾಮಾಜಿಕ ಕಾರ್ಯಕರ್ತ – Social Worker:

ಪ್ರತಿ ಮಕ್ಕಳ ರಕ್ಷಣಾ ಘಟಕವೂ ಸಹ ಇಬ್ಬರು ಸಾಮಾಜಿಕ ಕಾರ್ಯಕರ್ತರನ್ನು (ಕನಿಷ್ಠ ಓರ್ವ ಮಹಿಳೆ) ಹೊಂದಿರಬೇಕು ಹಾಗೂ ಅವರು ಡಿಸಿಪಿಓ ನಿಯೋಜಿಸುವ ಪ್ರಕಾರ ಉಪ–ವಿಭಾಗಗಳ ಸಂಬಂಧಪಟ್ಟ ಕ್ಲಸ್ಟರ್‌ಗಳಲ್ಲಿನ ಕ್ಷೇತ್ರ ಮಟ್ಟದ ಚಟುವಟಿಕೆಗಳ ಸಂಯೋಜನೆಯ ಜವಾಬ್ದಾರರಾಗಿರುತ್ತಾರೆ. ಈ ಸಾಮಾಜಿಕ ಕಾರ್ಯಕರ್ತರಿಗೆ ಕ್ಷೇತ್ರಮಟ್ಟದಲ್ಲಿ ಮಧ್ಯಸ್ಥಿಕೆಗಳನ್ನು ಕೈಗೊಳ್ಳಲು ಔಟ್‌ರೀಚ್ ಕಾರ್ಯಕರ್ತರು ಸಹಾಯ ಮಾಡುತ್ತಾರೆ.

**6) ದತ್ತಾಂಶ ವಿಶ್ಲೇಷಕ – Data Analyst:**

ಜಿಲ್ಲಾ ಮಟ್ಟದಲ್ಲಿ ಪ್ರತಿ ಮಕ್ಕಳ ರಕ್ಷಣಾ ಘಟಕದಲ್ಲಿಯೂ ಸಹ ಓರ್ವ ದತ್ತಾಂಶ ವಿಶ್ಲೇಷಕರು (Data Analyst) ಇರಬೇಕು. ದತ್ತಾಂಶ ವಿವರಣೆ, ಸಾಂಖ್ಯಿಕ ತಂತ್ರಗಳನ್ನು ಬಳಸಿ ಫಲಿತಾಂಶಗಳ ವಿಶ್ಲೇಷಣೆ ಮಾಡುವುದು ಇವರ ಜವಾಬ್ದಾರಿಯಾಗಿರುತ್ತದೆ. ಆತ/ಆಕೆ, ಸಾಂಖ್ಯಿಕ ಸಾಮರ್ಥ್ಯ ಹಾಗೂ ಗುಣಮಟ್ಟವನ್ನು ವೃದ್ಧಿಸುವಂತಹ ದತ್ತಾಂಶ ವಿಶ್ಲೇಷಣೆ, ದತ್ತಾಂಶ ಸಂಗ್ರಹ ವ್ಯವಸ್ಥೆಗಳು ಹಾಗೂ ಇತರೆ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಬೇಕು. ಈ ದತ್ತಾಂಶ ವಿಶ್ಲೇಷಕರು ಪ್ರಾಥಮಿಕ ಅಥವಾ ಮಾಧ್ಯಮಿಕ ದತ್ತಾಂಶ ಮೂಲಗಳಿಂದ ದತ್ತಾಂಶ ಸಂಗ್ರಹಿಸಿ, ಜಿಲ್ಲೆಯ ಡಿಸಿಪಿಯುದಲ್ಲಿ ಆ ಡೇಟಾಬೇಸ್ ಅನ್ನು ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ದತ್ತಾಂಶ ವಿಶ್ಲೇಷಕರು ಆಯಾ ಜಿಲ್ಲೆಯ ನಿರ್ಧಿಷ್ಟ ದತ್ತಾಂಶ ಅಗತ್ಯಗಳ ರೂಪರೇಶೆಯನ್ನು ಹಾಗೂ ಅಭಿಯಾನದಡಿ ಜಿಲ್ಲೆಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಡಿಸಿಪಿಓ ಜೊತೆಗೆ ಕೆಲಸ ನಿರ್ವಹಿಸಬೇಕು.

**7) ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್ – Assistant-cum-Data Entry Opertor:**

ಜಿಲ್ಲಾ ಮಟ್ಟದಲ್ಲಿರುವ ಪ್ರತಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಹ ಓರ್ವ ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್ (ADEO) ಹೊಂದಿರಬೇಕು. ನಿಗಧಿತ ಸಮಯದೊಳಗೆ ಡಿಸಿಪಿಯುನ ದತ್ತಾಂಶವನ್ನು ಕಂಪ್ಯೂಟರ್‌ನಲ್ಲಿ ಎಂಟ್ರಿ ಮಾಡುವುದು ಹಾಗೂ ನಿರ್ವಹಿಸುವುದು ಅವರ ಕರ್ತವ್ಯವಾಗಿರುತ್ತದೆ. ಪ್ರತಿ ADEO ಸಹ ಕಂಪ್ಯೂಟರ್ ಎಂಟ್ರಿಗಾಗಿ ಮೂಲ ದತ್ತಾಂಶ ಸಿದ್ಧಪಡಿಸುವುದು ಹಾಗೂ ಯಾವುದೇ ರೀತಿಯ ತಪ್ಪುಗಳಿರದಂತೆ ದತ್ತಾಂಶವನ್ನು ಪುನರ್‌ಮನನ/ಪರಿಶೀಲಿಸಿ ಮಾಡುವುದು, ದೋಷಗಳಿದ್ದಲ್ಲಿ ಅದನ್ನು ಸರಿಪಡಿಸುವುದು ಹಾಗೂ ಔಟ್‌ಪುಟ್ ಅನ್ನು ಪರಿಶೀಲಿಸಲು ಸಂಗ್ರಹ, ನಿಖರತೆಯ ಪರಿಶೀಲನೆ ಹಾಗೂ ಮಾಹಿತಿಯ ವಿಂಗಡಣೆಯನ್ನು ಖಾತ್ರಿಪಡಿಸಬೇಕು. ADEO ವರದಿಗಳನ್ನು ರಚಿಸಲು ಡೇಟಾ ಪ್ರೋಗ್ರಾಂ ತಂತ್ರಗಳು ಹಾಗೂ ವಿಧಾನಗಳನ್ನು ಅನ್ವಯ ಪಡಿಸಬೇಕು, ಪೂರ್ಣಗೊಳಿಸಿದ ಕೆಲಸವನ್ನು ನಿಗಧಿತ ಸ್ಥಳಗಳಲ್ಲಿ ಇಡುವುದು ಹಾಗೂ ಬ್ಯಾಕ್‌ಅಪ್ ಕಾರ್ಯಾಚರಣೆಗಳನ್ನು ನಡೆಸುವುದು, ದಾಖಲೆಗಳನ್ನು ಸ್ಕ್ಯಾನ್ ಮಾಡುವುದು, ಫೈಲ್‌ಗಳ ಮುದ್ರಣ, ಅಗತ್ಯವಿದ್ದಾಗ, ಮಾಹಿತಿಯನ್ನು ಗೌಪ್ಯವಾಗಿಡಲು ಜವಾಬ್ದಾರರಾಗಿರುತ್ತಾರೆ.

**8) ಲೆಕ್ಕಾಧಿಕಾರಿ – Accountant:**

ಜಿಲ್ಲಾ ಮಟ್ಟದಲ್ಲಿನ ಪ್ರತಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವೂ ಸಹ ಜಿಲ್ಲಾ ಮಟ್ಟದಲ್ಲಿ ಡಿಸಿಪಿಯು, ಸಿಡಬ್ಲ್ಯೂಸಿ, ಹಾಗೂ ಜೆಜೆಬಿ ಒಳಗೊಂಡಂತೆ ಅಭಿಯಾನದಡಿಯ ಎಲ್ಲಾ ರಚನೆಗಳ ಲೆಕ್ಕಗಳ ನಿರ್ವಹಣೆಗಾಗಿ ಓರ್ವ ಲೆಕ್ಕಾಧಿಕಾರಿಯನ್ನು ಹೊಂದಿರಬೇಕು.

**9) ಔಟ್‌ರೀಚ್ ಕಾರ್ಯಕರ್ತ – Outreach Worker:**

ಪ್ರತಿ ಜಿಲ್ಲೆಯಲ್ಲೂ ಸಹ ಪ್ರತಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲೂ ಸಹ ಇಬ್ಬರು ಔಟ್‌ರೀಚ್ ಕಾರ್ಯಕರ್ತರಿರಬೇಕು ಹಾಗೂ ಅವರು ರಕ್ಷಣಾ ಅಧಿಕಾರಿಗಳು ಹಾಗೂ ಕಾನೂನು–ಕಂ–ಪರಿವೀಕ್ಷಣಾಧಿಕಾರಿಗಳಿಗೆ ವರದಿ ಮಾಡಿಕೊಳ್ಳಬೇಕು. ಪ್ರತಿ ಔಟ್‌ರೀಚ್ ಕಾರ್ಯಕರ್ತರೂ ಸಹ ತಮಗೆ ಸಂಬಂಧಪಟ್ಟ ಮೇಲಧಿಕಾರಿಗೆ ಅವರ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ಕೈಗೊಳ್ಳಲು ನೆರವಾಗಬೇಕು. ಜಿಲ್ಲೆಯಲ್ಲಿರುವ ಬ್ಲಾಕ್‌ಗಳು, ಭೌಗೋಳಿಕ ಪ್ರದೇಶ, ಜನಸಂಖ್ಯೆ ಹಾಗೂ ಪ್ರಕರಣಗಳ ಹೊರೆಯನ್ನು ಅಧರಿಸಿ ಈ ಔಟ್‌ರೀಚ್ ಕಾರ್ಯಕರ್ತರ ಸಂಖ್ಯೆಯನ್ನು ಗರಿಷ್ಠ ಐದರವರೆಗೆ (05) ಹೆಚ್ಚಿಸಬಹುದು.

ಅವರು ಸಮುದಾಯ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನಡುವೆ ಸಂಪರ್ಕಕೊಂಡಿಯಾಗಿ ಕಾರ್ಯನಿರ್ವಹಿಸುವರು ಹಾಗೂ ಗಂಡಾಂತರದಲ್ಲಿರುವ ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸಲು

ಹಾಗೂ ಅಗತ್ಯ ಬೆಂಬಲ ಸೇವೆಗಳನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ. ಈ ಔಟ್‌ರೀಚ್ ಕಾರ್ಯಕರ್ತರು ಅಂಗನವಾಡಿ ಕಾರ್ಯಕರ್ತರು ಹಾಗೂ ಸಮುದಾಯ/ ಬ್ಲಾಕ್ ಮಟ್ಟಗಳಲ್ಲಿ ಪಂಚಾಯತ್/ ಸ್ಥಳೀಯ ಸಂಸ್ಥೆಗಳ ಸದಸ್ಯರೊಂದಿಗೆ ಸಂಪರ್ಕ ಹಾಗೂ ನೆಟ್‌ವರ್ಕಿಂಗ್ ಅಭಿವೃದ್ಧಿಪಡಿಸಲು ಜವಾಬ್ದಾರರಾಗಿರುತ್ತಾರೆ. ಜೊತೆಗೆ ಅವರು ಸ್ಥಳೀಯ ಯುವಜನರಿಗೆ ಸ್ವಯಂಸೇವೆಯನ್ನು ಕೈಗೊಳ್ಳಲು ಪ್ರೋತ್ಸಾಹ ನೀಡಿ, ಬ್ಲಾಕ್ ಹಾಗೂ ಸಮುದಾಯ ಮಟ್ಟಗಳಲ್ಲಿ ಅವರು ಮಕ್ಕಳ ರಕ್ಷಣಾ ಕಾರ್ಯಕ್ರಮಗಳಲ್ಲಿ ಒಳಗೊಳ್ಳುವಂತೆ ಕಾರ್ಯನಿರ್ವಹಿಸಬೇಕು.

## ಬಿ. ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸಿಪಿಯು) ಅಡಿ ಸಿಬ್ಬಂದಿ ಆಯ್ಕೆ ಪ್ರಕ್ರಿಯೆ–

## Selection Process of staff under District Child Protection Unit (DCPU):

i. ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರು ಜಿಲ್ಲಾ ದಂಡಾಧಿಕಾರಿಗಳ ಮುಂದಾಳತ್ವದಲ್ಲಿ ಒಂದು ಆಯ್ಕೆ ಸಮಿತಿಯನ್ನು ರಚಿಸಬೇಕು. ಆ ಸಮಿತಿಯು ಡಿಸಿಪಿಯು ಸಿಬ್ಬಂದಿ ಆಯ್ಕೆ ಹಾಗೂ ನೇಮಕಾತಿಯ ಜವಾಬ್ದಾರಿಯನ್ನು ವಹಿಸಬೇಕು. ಜಿಲ್ಲಾ ಆಯ್ಕೆ ಸಮಿತಿಯು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಒಳಗೊಂಡಿರಬೇಕು, ಉದಾಹರಣೆಗೆ: ಜಿಲ್ಲಾ ಕಾರ್ಯಕ್ರಮ ಅಧಿಕಾರಿ (ಐಸಿಡಿಎಸ್), ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಸಿಡಬ್ಲ್ಯೂಸಿ ಅಧ್ಯಕ್ಷರು/ ಸದಸ್ಯರು, ಜೆಜೆಬಿ ಸದಸ್ಯರು, ಇತ್ಯಾದಿ. ಒಮ್ಮೆ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸಿಪಿಓ) ನೇಮಕಾತಿ ಆದ ನಂತರ, ನಿಯೋಜನೆ ಅಥವಾ ಗುತ್ತಿಗೆ ಆಧಾರದ ಮೇಲೆ, ಆತ/ಆಕೆ ಡಿಸಿಪಿಯುನ ಇತರೆ ಸಿಬ್ಬಂದಿಗಳ ನೇಮಕಾತಿಗಾಗಿ ಆಯ್ಕೆ ಸಮಿತಿಯ ಭಾಗವಾಗಿರಬೇಕು.

ii. ಡಿಸಿಪಿಓ ಅಥವಾ ಜಿಲ್ಲಾ ರಕ್ಷಣಾ ಅಧಿಕಾರಿಗಳಂತಹ ಮೇಲ್ವಿಚಾರಕರ ಹುದ್ದೆಗಳಿಗೆ ಸಾಧ್ಯವಾದಷ್ಟೂ ರಾಜ್ಯ ಸರ್ಕಾರ/ ಜಿಲ್ಲಾಡಳಿತ ಆದ್ಯತೆಯ ಮೇರೆಗೆ ಕ್ರಮಬದ್ಧ ಸಿಬ್ಬಂದಿಯನ್ನು ನೇಮಕ ಮಾಡುವುದು.

iii. ಮಿಷನ್ ವಾತ್ಸಲ್ಯದ ಅಡಿ ಒಳಗೊಳ್ಳುವ ಇಡೀ ಮಾನವ ಸಂಪನ್ಮೂಲ ನೇಮಕಾತಿಯೂ ಸಹ ನಿಗಧಿತ ಅರ್ಹತೆ ಹಾಗೂ ಅನುಭವಗಳ ಪ್ರಕಾರ ಆಗಬೇಕು.

iv. ಸಿಬ್ಬಂದಿಗಳ ನೇಮಕಾತಿಗೆ ಮುಂಚೆ, ಸಿಬ್ಬಂದಿಗಳ ವಿಶ್ವಾಸಾರ್ಹತೆ ಹಾಗೂ ಬದ್ಧತೆಯನ್ನು ಖಾತ್ರಿಪಡಿಸುವ ಸಲುವಾಗಿ ಪೊಲೀಸರಿಂದ ಹಿನ್ನೆಲೆ ಪರಿಶೀಲನೆ ಕಡ್ಡಾಯವಾಗಿ ಆಗಬೇಕು.

v. ಡಿಸಿಪಿಯು ಅಡಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಗಳೂ ಸಹ ಕಚೇರಿಯ ಕಡತಗಳ ಗೌಪ್ಯತೆಯನ್ನು ನಿರ್ವಹಿಸಬೇಕು, ಇಲ್ಲದಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

vi. ವಾರ್ಷಿಕ ಕಾರ್ಯಕ್ಷಮತೆಯ ಪರಿಷ್ಕರಣೆಯ ಷರತ್ತಿಗೆ ಒಳಪಟ್ಟಂತೆ, 2025–26ನೇ ಹಣಕಾಸು ವರ್ಷದವರೆಗೆ ಅಭಿಯಾನದ ಇಡೀ ಅವಧಿಗೆ ಯೋಜನೆಯಡಿ ಸೂಕ್ತ ಹಾಗೂ ಸಮರ್ಥ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು.

vii. ಕೆಲಸದ ಅವಧಿ ವಿಸ್ತರಣೆಯ ಮಾನದಂಡಗಳ ಪೈಕಿ, ಆರೋಗ್ಯ, ಶಿಕ್ಷಣ ಹಾಗೂ ಯೋಗಕ್ಷೇಮ, ಮೇಲ್ವಿಚಾರಣೆಯ ಇರುವ ಮಕ್ಕಳಿಗೆ ಸಂಬಂಧಪಟ್ಟ ಪುನರ್‌ಸ್ಥಾಪನೆ ಹಾಗೂ ಪುನರ್ವಸತಿಯ, ಇತ್ಯಾದಿ ಮಾನದಂಡಗಳಿರಬೇಕು.

viii. ಆಡಳಿತಾತ್ಮಕ ಅಗತ್ಯತೆಗಳನ್ನು ಬಗೆಹರಿಸಲು ಅಗತ್ಯದ ಆಧಾರದ ಮೇಲೆ ಅಂತರ್–ಜಿಲ್ಲಾ ವರ್ಗಾವಣೆಗಳು ಹಾಗೂ ಪ್ರಕರಣ ಹೊರೆ, ಬ್ಲಾಕ್‌ಗಳ ಸಂಖ್ಯೆಯ ಪ್ರಕಾರ ಸಂಪನ್ಮೂಲಗಳ ಗರಿಷ್ಠ ಬಳಕೆಗಾಗಿ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು, ಅನುಷ್ಠಾನಗೊಳಿಸುವ ಸಂಸ್ಥೆಗಳಲ್ಲಿರುವ ಹಾಲಿ ಮಾನವಸಂಪನ್ಮೂಲವನ್ನು ಸುಧಾರಿಸಿಕೊಳ್ಳಬೇಕು.

ix. ಕೆಲಸ ತೃಪ್ತಿಕರವಾಗಿರುವುದನ್ನು ಆಧರಿಸಿ, 2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ಅನ್ವಯವಾಗುವಂತೆ, ಡಿಸಿಪಿಯುದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು/ ಸಿಬ್ಬಂದಿಗಳ ಒಟ್ಟಾರೆ ವೇತನವನ್ನು ವಾರ್ಷಿಕವಾಗಿ ಶೇ.3ರಷ್ಟು (ಸಂಚಿತ ಆಧಾರಿತ–On Cumulative Basis) ಹೆಚ್ಚಳ ಮಾಡಲು ಅವಕಾಶವಿರುತ್ತದೆ.

x. ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆಗಳನ್ನು ಪಡೆಯಲು ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ; ಆದಾಗ್ಯೂ, ರಾಜ್ಯಗಳು ಖಾಯಂ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಬಹುದು ಅಥವಾ ಈ ಯೋಜನೆಯಡಿ ನೀಡುವುದಕ್ಕಿಂತ ಹೆಚ್ಚಿನ ವೇತನ ನೀಡಿ ಸಿಬ್ಬಂದಿಗಳನ್ನು ನೇಮಕ ಮಾಡಬಹುದು, ಆದರೆ ಹೆಚ್ಚುವರಿ ವೆಚ್ಚಗಳನ್ನು ರಾಜ್ಯಗಳೇ ಭರಿಸಬೇಕು.

**ಸಿ. ಮಿಷನ್ ವಾತ್ಸಲ್ಯ ಅಡಿ ಡಿಸಿಪಿಯು ನ ಸಿಬ್ಬಂದಿಗಳ ಸೂಚಕ (ಕಡ್ಡಾಯವಾಗಿ ಇರಬೇಕಾದ) ಅರ್ಹತೆ:**

## C. Indicative Qualification of staff of DCPU under Mission Vatsalya:

| ಕ್ರ.ಸಂ. | ಹುದ್ದೆಗಳು | ಅರ್ಹತಾ ಮಾನದಂಡ |
|---|---|---|
| 1. | ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸಿಪಿಓ)<br>District Child Protection Officer (DCPO) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಮಕ್ಕಳ ಅಭಿವೃದ್ಧಿ/ ಮಾನವ ಹಕ್ಕುಗಳ ಸಾರ್ವಜನಿಕ ಆಡಳಿತ/ ಮನೋವಿಜ್ಞಾನ/ ಮನ:ಶಾಸ್ತ್ರ/ ಕಾನೂನು/ ಸಾರ್ವಜನಿಕ ಆರೋಗ್ಯ/ ಸಮುದಾಯ ಸಂಪನ್ಮೂಲ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಹೊಂದಿರಬೇಕು.<br>ದಾಖಲೆಗಳ ನಿರ್ವಹಣೆ, ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿ, ಯೋಜನೆ ರೂಪಿಸುವಿಕೆ, ಅನುಷ್ಠಾನ, ನಿಗಾವಣೆ ಹಾಗೂ ಮೇಲ್ವಿಚಾರಣೆಯ ಕ್ಷೇತ್ರದಲ್ಲಿ ಆದ್ಯತೆಯ ಮೇರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ/ ಸಮಾಜ ಕಲ್ಯಾಣ ವಿಭಾಗಗಳಲ್ಲಿ, ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳಲ್ಲಿ ಕನಿಷ್ಠ 3 ವರ್ಷ ಅನುಭವ.<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ. |
| 2. | ರಕ್ಷಣಾ ಅಧಿಕಾರಿಗಳು (ಸಾಂಸ್ಥಿಕ ಪೋಷಣೆ)<br>Protection Officer (Institutional Care) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಮಕ್ಕಳ ಅಭಿವೃದ್ಧಿ/ ಮಾನವ ಹಕ್ಕುಗಳ ಸಾರ್ವಜನಿಕ ಆಡಳಿತ/ ಮನೋವಿಜ್ಞಾನ/ ಮನ:ಶಾಸ್ತ್ರ/ ಕಾನೂನು/ ಸಾರ್ವಜನಿಕ ಆರೋಗ್ಯ/ ಸಮುದಾಯ ಸಂಪನ್ಮೂಲ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಹೊಂದಿರಬೇಕು.<br>**ಅಥವಾ**<br>ದಾಖಲೆಗಳ ನಿರ್ವಹಣೆ, ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿ, ಯೋಜನೆ ರೂಪಿಸುವಿಕೆ, ಅನುಷ್ಠಾನ, ನಿಗಾವಣೆ ಹಾಗೂ ಮೇಲ್ವಿಚಾರಣೆಯ ಕ್ಷೇತ್ರದಲ್ಲಿ ಆದ್ಯತೆಯ ಮೇರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ/ ಸಮಾಜ ಕಲ್ಯಾಣ ವಿಭಾಗಗಳಲ್ಲಿ, ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳಲ್ಲಿ ಕನಿಷ್ಠ 2 ವರ್ಷ ಅನುಭವ.<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ. |
| 3. | ರಕ್ಷಣಾ ಅಧಿಕಾರಿ (ಸಾಂಸ್ಥಿಕೇತರ ಪೋಷಣೆ)<br>Protection Officer (Non-Institutional Care) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಮಕ್ಕಳ ಅಭಿವೃದ್ಧಿ/ ಮಾನವ ಹಕ್ಕುಗಳ ಸಾರ್ವಜನಿಕ ಆಡಳಿತ/ ಮನೋವಿಜ್ಞಾನ/ ಮನ:ಶಾಸ್ತ್ರ/ ಕಾನೂನು/ ಸಾರ್ವಜನಿಕ ಆರೋಗ್ಯ/ ಸಮುದಾಯ ಸಂಪನ್ಮೂಲ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಹೊಂದಿರಬೇಕು. **ಅಥವಾ**<br>ದಾಖಲೆಗಳ ನಿರ್ವಹಣೆ, ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿ, ಯೋಜನೆ ರೂಪಿಸುವಿಕೆ, ಅನುಷ್ಠಾನ, ನಿಗಾವಣೆ ಹಾಗೂ ಮೇಲ್ವಿಚಾರಣೆಯ ಕ್ಷೇತ್ರದಲ್ಲಿ ಆದ್ಯತೆಯ ಮೇರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ/ ಸಮಾಜ ಕಲ್ಯಾಣ ವಿಭಾಗಗಳಲ್ಲಿ, ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳಲ್ಲಿ ಕನಿಷ್ಠ 2 ವರ್ಷ ಕೆಲಸದ ಅನುಭವ.<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ. |

| | | |
|---|---|---|
| 4. | ಕಾನೂನು–ಕಂ–ಪರಿವೀಕ್ಷಣಾಧಿಕಾರಿ (ಎಲ್‌ಸಿಪಿಓ)<br>Legal-cum Probation Officer (LCPO) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಎಲ್‌ಎಲ್‌ಬಿ ಪದವಿ ಇರಬೇಕು.<br>ಆದ್ಯತಾಪೂರ್ವಕವಾಗಿ ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳಲ್ಲಿ ಕಾನೂನು ವಿಷಯಗಳಲ್ಲಿ ಕನಿಷ್ಠ 2 ವರ್ಷಗಳು ಕೆಲಸ ಮಾಡಿರುವ ಅನುಭವ.<br>ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳು ಹಾಗೂ ರಕ್ಷಣೆಯ ವಿಷಯಗಳ ಕುರಿತು ಉತ್ತಮ ಅರಿವಿರಬೇಕು. |
| 5. | ಆಪ್ತಸಮಾಲೋಚಕ<br>Counselor | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಮನೋವಿಜ್ಞಾನ/ ಸಾರ್ವಜನಿಕ ಆರೋಗ್ಯ/ ಆಪ್ತಸಮಾಲೋಚನೆ ಕುರಿತು ಪದವಿ ಹೊಂದಿರಬೇಕು.<br>**ಅಥವಾ**<br>ಆಪ್ತಸಮಾಲೋಚನೆ ಹಾಗೂ ಸಂವಹನೆಯಲ್ಲಿ ಪಿಜಿ ಡಿಪ್ಲೊಮಾ<br>ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಯ ಕ್ಷೇತ್ರದಲ್ಲಿ ಆದ್ಯತಾಪೂರ್ವಕವಾಗಿ ಸರ್ಕಾರಿ/ ಸರ್ಕಾರೇತರ ಸಂಸ್ಥೆಯಲ್ಲಿ ಕನಿಷ್ಠ 1 ವರ್ಷದ ಕೆಲಸದ ಅನುಭವ.<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ. |
| 6. | ಸಾಮಾಜಿಕ ಕಾರ್ಯಕರ್ತ<br>Social Worker | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಸಮಾಜ ವಿಜ್ಞಾನಗಳಲ್ಲಿ ಬಿ.ಎ. ಪದವಿಧರರಾಗಿರಬೇಕು<br>ಅನುಭವವುಳ್ಳ ಅಭ್ಯರ್ಥಿಗೆ ಆದ್ಯತೆ.<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ. |
| 7. | ಅಕೌಂಟೆಂಟ್<br>Accountant | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ವಾಣಿಜ್ಯ/ ಗಣಿತದಲ್ಲಿ ಪದವಿ ಪಡೆದಿರಬೇಕು.<br>ಅಪೇಕ್ಷಿತ ಕ್ಷೇತ್ರದಲ್ಲಿ ಕನಿಷ್ಠ 1 ವರ್ಷ ಅನುಭವವಿರಬೇಕು.<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ ಹೊಂದಿರಬೇಕು. |
| 8. | ದತ್ತಾಂಶ ವಿಶ್ಲೇಷಕರು<br>(Data Analyst) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಂಖ್ಯಾಶಾಸ್ತ್ರ/ ಗಣಿತ/ ಅರ್ಥಶಾಸ್ತ್ರ/ ಕಂಪ್ಯೂಟರ್ (ಬಿಸಿಎ) ಪದವಿ ಹೊಂದಿರಬೇಕು.<br>ಅನುಭವವುಳ್ಳ ಅಭ್ಯರ್ಥಿಗೆ ಆದ್ಯತೆ.<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ. |
| 9. | ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್ (ಎಸಿಡಿಇಓ)<br>Assistant CumData Entry Operator(ACDEO) | ಮಾನ್ಯತೆಯುಳ್ಳ ಬೋರ್ಡ್‌ನಿಂದ 12ನೇ ತರಗತಿಯಲ್ಲಿ ಉತ್ತೀರ್ಣ/ ಸಮಾನ ಬೋರ್ಡ್‌ನಿಂದ ಡಿಪ್ಲೊಮಾ/ ಕಂಪ್ಯೂಟರ್ ಸರ್ಟಿಫಿಕೆಟ್ ಕೋರ್ಸ್ ಪಡೆದಿರಬೆಕು.<br>ಅನುಭವವುಳ್ಳ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು. |
| 10. | ಔಟ್‌ರೀಚ್ ಕಾರ್ಯಕರ್ತ (ಓಆರ್‌ಡಬ್ಲ್ಯೂ)<br>Outreach Worker (ORW) | ಮಾನ್ಯತೆಯುಳ್ಳ ಬೋರ್ಡ್/ ಸಮಾನ ಬೋರ್ಡ್‌ನಿಂದ 12ನೇ ತರಗತಿ ಉತ್ತೀರ್ಣರಾಗಿರಬೇಕು.<br>ಉತ್ತಮ ಸಂವಹನಾ ಕೌಶಲ್ಯಗಳು.<br>ಅನುಭವವುಳ್ಳ ಅಭ್ಯರ್ಥಿಗೆ ಆದ್ಯತೆ. |

## ಡಿ. ಡಿಸಿಪಿಯು ಗೆ ಹಣಕಾಸಿನ ಬೆಂಬಲ–Financial Support for DCPU:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಪೀಠೋಪಕರಣ ಹಾಗೂ ಕಚೇರಿ ಉಪಕರಣ (ಮೇಜುಗಳು, ಕುರ್ಚಿಗಳು, ಕಂಪ್ಯೂಟರ್ ಮೇಜುಗಳು, ಹವಾನಿಯಂತ್ರಕ ಯಂತ್ರ, ಕಪಾಟುಗಳು, ಜೆರಾಕ್ಸ್–ಕಂ–ಸ್ಕ್ಯಾನ್ನರ್ ಯಂತ್ರ, ಇತ್ಯಾದಿ) | 3,00,000 |
| 2. | ಯುಪಿಎಸ್ & ವೆಬ್ ಕ್ಯಾಮೆರಾದೊಂದಿಗೆ ಐದು ಕಂಪ್ಯೂಟರ್‌ಗಳು/ ಲ್ಯಾಪ್‌ಟಾಪ್‌ಗಳು (ಸಾಫ್ಟ್‌ವೇರ್ ಪರವಾನಗಿ ವೆಚ್ಚ ಒಳಗೊಂಡಂತೆ) ಹಾಗೂ ಪ್ರಿಂಟರ್‌ಗಳು–ಕಂ–ಸ್ಕ್ಯಾನ್ನರ್‌ಗಳು | 2,25,000 |
| | **ಒಟ್ಟು** | **5,25,000** |

**ಆವರ್ತಕ ವೆಚ್ಚ (ವಾರ್ಷಿಕ)**

| **(ಬಿ) ಸಿಬ್ಬಂದಿ ವೇತನ** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಓರ್ವ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸಿಪಿಓ) @ ರೂ.44,023/–ಮಾಸಿಕ ವೇತನ | 5,28,276 |
| 2. | ಓರ್ವ ರಕ್ಷಣಾ ಅಧಿಕಾರಿ – ಸಾಂಸ್ಥಿಕ ಪೋಷಣೆ @ ರೂ.27,804/– ಮಾಸಿಕ | 3,33,648 |
| 3. | ಓರ್ವ ರಕ್ಷಣಾ ಅಧಿಕಾರಿ – ಸಾಂಸ್ಥಿಕೇತರ ಪೋಷಣೆ @ರೂ.27,804/– ಮಾಸಿಕ | 3,33,648 |
| 4. | ಓರ್ವ ಕಾನೂನು–ಕಂ–ಪರಿವೀಕ್ಷಣಾಧಿಕಾರಿ @ ರೂ.27,804/– ಮಾಸಿಕ | 3,33,648 |
| 5. | ಓರ್ವ ಆಪ್ತಸಮಾಲೋಚಕ @ ರೂ.18,536/– ಮಾಸಿಕ | 2,22,432 |
| 6. | ** ಇಬ್ಬರು ಸಾಮಾಜಿಕ ಕಾರ್ಯಕರ್ತರು @ ರೂ.18,536/– ಮಾಸಿಕ | 4,44,864 |
| 7. | ಓರ್ವ ಅಕೌಂಟೆಂಟ್ @ ರೂ. 18,536/– ಮಾಸಿಕ | 2,22,432 |
| 8. | ಓರ್ವ ದತ್ತಾಂಶ ವಿಶ್ಲೇಷಕ (ಡೇಟಾ ಅನಾಲಿಸ್ಟ್) @ ರೂ.18,536/– ಮಾಸಿಕ | 2,22,432 |
| 9. | ಓರ್ವ ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್ @ ರೂ.13,240/– ಮಾಸಿಕ | 1,58,880 |
| 10. | * ಇಬ್ಬರು ಔಟ್‌ರೀಚ್ ಕಾರ್ಯಕರ್ತರು @ ರೂ.10,592/– ಮಾಸಿಕ | 2,54,208 |
| | **ಒಟ್ಟು** | **30,54,468** |

*2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ತೃಪ್ತಿಕರ ಕಾರ್ಯಪ್ರದರ್ಶನವನ್ನು ಆಧರಿಸಿ 3% (ಸಂಚಿತ ಆಧಾರಿತ) ವಾರ್ಷಿಕ ವೇತನ ಹೆಚ್ಚಳವಿರುತ್ತದೆ.*

** ಜಿಲ್ಲೆಯ ಜನಸಂಖ್ಯೆ ಹಾಗೂ ಭೌಗೋಳಿಕ ಪ್ರದೇಶ ವ್ಯಾಪ್ತಿಯನ್ನು ಆಧರಿಸಿ ಔಟ್‌ರೀಚ್ ಕಾರ್ಯಕರ್ತರ ಸಂಖ್ಯೆಯನ್ನು ಗರಿಷ್ಠ ಐದಕ್ಕೆ ಹೆಚ್ಚಿಸಬಹುದು*

*** ಜನಸಂಖ್ಯೆ ಹಾಗೂ ಅಗತ್ಯತೆಯನ್ನು ಆಧರಿಸಿ ಸಾಮಾಜಿಕ ಕಾರ್ಯಕರ್ತರ ಸಂಖ್ಯೆಯನ್ನು ಗರಿಷ್ಠ ಮೂರಕ್ಕೆ ಹೆಚ್ಚಿಸಬಹುದು*

ಕೆಲಸದ ಹೊರೆ/ ಜಿಲ್ಲೆಯಲ್ಲಿರುವ ತಾಲ್ಲೂಕುಗಳ ಸಂಖ್ಯೆಯನ್ನು ಆಧರಿಸಿ ಪ್ರತಿ ಡಿಸಿಪಿಯುನ ಮಾನವ ಸಂಪನ್ಮೂಲವನ್ನು ರಾಜ್ಯಗಳು ತರ್ಕಬದ್ಧಗೊಳಿಸಬಹುದು/ಸುಧಾರಿಸಿಕೊಳ್ಳಬಹುದಾಗಿದೆ.

| (ಸಿ) **ಆಡಳಿತಾತ್ಮಕ ವೆಚ್ಚಗಳು** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಆಡಳಿತಾತ್ಮಕ ವೆಚ್ಚಗಳು (ನೀರು, ವಿದ್ಯುತ್, ಅಂಚೆ, ಸ್ಟೇಷನರಿ, ಎಸ್‌ಟಿಡಿಯೊಂದಿಗೆ ದೂರವಾಣಿ, ಜೆರಾಕ್ಸ್, ಡಿಸಿಪಿಯು ಸಿಬ್ಬಂದಿಗೆ ಪ್ರಯಾಣ & ದೈನಂದಿನ ಭತ್ಯೆ, ಜಿಲ್ಲಾ ಮಟ್ಟದಲ್ಲಿ ಸ್ಥಳಕ್ಕೆ ಬಾಡಿಗೆ (ಜಿಲ್ಲಾಡಳಿತದಿಂದ ಒದಗಿಸದಿದ್ದರೆ), ಇಂಟರ್‌ನೆಟ್ ಸಂಪರ್ಕ, ಭದ್ರತಾ ಸಿಬ್ಬಂದಿ ನೇಮಕ, ಗೃಹಗಳಲ್ಲಿ ವೃತ್ತಿಪರ ತರಬೇತಿ, ಇತ್ಯಾದಿ ಒಳಗೊಂಡಂತೆ ಆಕಸ್ಮಿಕ ನಿಧಿ | 15,00,000 |
| 2. | ಮಕ್ಕಳನ್ನು ಕುಟುಂಬಕ್ಕೆ ಪುನಃಸ್ಥಾಪನೆಗಾಗಿ ಹಿಂದುರಿಗಿಸಿ ಕಳುಹಿಸಲು ನಿಧಿ (ವಾಸ್ತವ ವೆಚ್ಚಗಳಿಗೆ ತಕ್ಕಂತೆ) | 4,00,000 |
| 3. | ವಕಾಲತ್ತು ಹಾಗೂ ಅರಿವು ಮೂಡಿಸುವಿಕೆ – ಶಿಬಿರಗಳು, ಸಮುದಾಯ ಅರಿವಿಗಾಗಿ ಊಟದ ವ್ಯವಸ್ಥೆ, ಪೊಲೀಸರು, ಪಿಆರ್‌ಐ ಸದಸ್ಯರು, ಇತ್ಯಾದಿಗಳಂತಹ ಎಲ್ಲಾ ಭಾಗೀದಾರರಲ್ಲಿ ಸಂವೇದನಾಶೀಲತೆ ಹಾಗೂ ಸಾಮರ್ಥ್ಯ ಅಭಿವೃದ್ಧಿ, ಇತ್ಯಾದಿ | 5,00,000 |
| | **ಒಟ್ಟು** | **24,00,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **54,54,468** |
| **ಒಟ್ಟು (ಎ+ಬಿ+ಸಿ) ಅನಾವರ್ತಕ + ಆವರ್ತಕ ಅನುದಾನ.** | | **59,79,468** |

**ಇ. ಮಿಷನ್ ವಾತ್ಸಲ್ಯದಡಿ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಕ್ಕಳ ನ್ಯಾಯ ಮಂಡಳಿಗಳ ಸಿಬ್ಬಂದಿಗಳ ಸೂಚಕ (ಕಡ್ಡಾಯವಾಗಿ ಇರಬೇಕಾದ) ಅರ್ಹತೆ: Indicative Qualification of Staff for Child Welfare Committee and Juvenile Justice Board under Mission Vatsalya:**

| ಕ್ರ.ಸಂ. | ಹುದ್ದೆಗಳು | ಅರ್ಹತೆ ಮಾನದಂಡ |
|---|---|---|
| 1. | ಸಹಾಯಕರು–ಕಂ–ಡೇಟಾ ಎಂಟ್ರಿ ಆಪರೇಟರ್<br>Assistant Cum Data Entry Operator | ಮಾನ್ಯತೆ ಪಡೆದಿರುವ ಬೋರ್ಡ್‌ನಿಂದ 12ನೇ ತರಗತಿ ಉತ್ತೀರ್ಣ/ ತತ್ಸಮಾನ ಬೋರ್ಡ್‌ನಿಂದ ಡಿಪ್ಲೊಮಾ/ ಸರ್ಟಿಫಿಕೆಟ್ ಇನ್ ಕಂಪ್ಯೂಟರ್ಸ್ ಆಗಿರಬೇಕು.<br>ಅನುಭವವುಳ್ಳ ಅಭ್ಯರ್ಥಿಗೆ ಆದ್ಯತೆ |

**ಮಕ್ಕಳ ನ್ಯಾಯ ಮಂಡಳಿಗಾಗಿ ಹಣಕಾಸು ಬೆಂಬಲ – Financial Support for Juvenile Justice Board:**

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಪೀಠೋಪಕರಣ. | 50,000 |
| 2. | ವೆಬ್ ಕ್ಯಾಮೆರಾ ಮತ್ತು ಯುಪಿಎಸ್ ಜೊತೆಗೆ ಒಂದು ಕಂಪ್ಯೂಟರ್ (ಸಾಫ್ಟ್‌ವೇರ್ ಪರವಾನಗಿ ವೆಚ್ಚ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್–ಕಂ–ಸ್ಕ್ಯಾನ್ನರ್. | 45,000 |
| 3. | ಕೊಠಡಿಗಳಿಗೆ ಬಣ್ಣ, ಒಳಾಂಗಣ ಆಟಗಳು, ಇತ್ಯಾದಿ ಒಳಗೊಂಡಂತೆ ಮಕ್ಕಳ–ಸ್ನೇಹಿ ಪರಿಸರ ಸೃಷ್ಟಿ ಹಾಗೂ ನಿರ್ವಹಣೆ. | 7,500 |
| | **ಒಟ್ಟು** | **1,02,500** |

**ಆವರ್ತಕ ವೆಚ್ಚ (ವಾರ್ಷಿಕ)**

| | (ಬಿ) ಗೌರವಧನ/ ವೇತನ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಇಬ್ಬರು ಸದಸ್ಯರಿಗೆ 20 ಸಭೆಗಳಿಗೆ ಹಾಜರಾಗಲು ಪ್ರಯಾಣ/ ಸಭಾ ಭತ್ಯೆ ಅಥವಾ ಗೌರವಧನ (ರೂ.2,000 x ಮಾಸಿಕ 20 ಸಭೆಗಳು x 12 ತಿಂಗಳು x 2 ಸದಸ್ಯರು) | 9,60,000 |
| 2. | ಒರ್ವ ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್ @ ರೂ.11,916 ಮಾಸಿಕ* | 1,42,992 |
| | **ಒಟ್ಟು** | **11,02,992** |

** 2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ತೃಪ್ತಿಕರ ಕಾರ್ಯನಿರ್ವಹಣೆಯನ್ನು ಆಧರಿಸಿ ವೇತನವನ್ನು ವಾರ್ಷಿಕ (ಸಂಚಿತ ಆಧಾರಿತ) 3% ರಷ್ಟು ಹೆಚ್ಚಳ ಮಾಡಲಾಗುವುದು.*

| (ಸಿ) ಆಡಳಿತಾತ್ಮಕ ವೆಚ್ಚಗಳು: | | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಆಡಳಿತಾತ್ಮಕ ವೆಚ್ಚಗಳು – ಮಕ್ಕಳ ಪೋಷಣಾ ಕೇಂದ್ರದ ಕಟ್ಟಡದ ಬಾಡಿಗೆ ಹಾಗೂ ಆಕಸ್ಮಿಕ ವೆಚ್ಚಗಳು (ನೀರು, ವಿದ್ಯುತ್, ದೂರವಾಣಿ, ಸ್ಟೇಷನರಿ, ಜೆರಾಕ್ಸ್, ಅಂಚೆ, ಸ್ಥಳೀಯ ಪ್ರಯಾಣ, ಇತ್ಯಾದಿ) ಮಾಸಿಕ @ ರೂ.15,000/– | 1,80,000 |
| 2. | ಔಷಧಗಳು, ಸಾರಿಗೆ ವ್ಯವಸ್ಥೆ ಒಳಗೊಂಡಂತೆ ಮಕ್ಕಳಿಗೆ ಸಂಬಂಧಿಸಿದ ವೆಚ್ಚಗಳು, ಮಗುವನ್ನು ಸಮಿತಿಯ ಮುಂದೆ ಹಾಜರುಪಡಿಸುವಾಗ ತಗಲುವ ಆಹಾರ, ಸಾರಿಗೆ ವೆಚ್ಚಗಳಿಗೆ ಮಾಸಿಕ @ ರೂ.7,000/– | 84,000 |
| | **ಒಟ್ಟು** | **2,64,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **13,66,992** |
| **ಒಟ್ಟು (ಎ+ಬಿ+ಸಿ) ಅನಾವರ್ತಕ+ಆವರ್ತಕ ಅನುದಾನ** | | **14,69,492** |

**ಮಕ್ಕಳ ನ್ಯಾಯ ಮಂಡಳಿಯ ಕೊಠಡಿ (ಕಟ್ಟಡ) ನಿರ್ಮಾಣಕ್ಕಾಗಿ ಅನುದಾನ:**

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಪ್ರತಿ ಚದರಡಿಗೆ *ರೂ.1,543/– ರಂತೆ 300 ಚದರಡಿ ಅಳತೆಯ ಎರಡು ಕೊಠಡಿಗಳ ನಿರ್ಮಾಣ, ಅಗತ್ಯ ಬಿದ್ದಾಗ (ರೂ.1543/– x 600 ಚದರಡಿ) | 9,25,800 |

** 2019ರ ಸಿಪಿಡಬ್ಲ್ಯೂಡಿ ಷೆಡ್ಯೂಲ್ ಪ್ರಕಾರ ಅಂದಾಜು ದರಗಳು*

## ಎಫ್. ಮಕ್ಕಳ ಕಲ್ಯಾಣ ಸಮಿತಿಗೆ ಹಣಕಾಸು ಬೆಂಬಲ –Financial Support for Child Welfare Committee:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| (ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ) | | |
| 1. | ಪೀಠೋಪಕರಣ. | 50,000 |
| 2. | ವೆಬ್ ಕ್ಯಾಮೆರಾ ಮತ್ತು ಯುಪಿಎಸ್ ಜೊತೆಗೆ ಒಂದು ಕಂಪ್ಯೂಟರ್ (ಸಾಫ್ಟ್‌ವೇರ್ ಪರವಾನಗಿ ವೆಚ್ಚ ಒಳಗೊಂಡಂತೆ) ಹಾಗೂ ಒಂದು ಪ್ರಿಂಟರ್–ಕಂ–ಸ್ಕ್ಯಾನ್ನರ್. | 45,000 |
| 3. | ಕೊಠಡಿಗಳಿಗೆ ಬಣ್ಣ, ಒಳಾಂಗಣ ಆಟಗಳು, ಇತ್ಯಾದಿ ಒಳಗೊಂಡಂತೆ ಮಕ್ಕಳ–ಸ್ನೇಹಿ ಪರಿಸರ ಸೃಷ್ಟಿ ಹಾಗೂ ನಿರ್ವಹಣೆ. | 7,500 |
| | **ಒಟ್ಟು** | **1,02,500** |

**ಆವರ್ತಕ ವೆಚ್ಚ (ವಾರ್ಷಿಕ)**

| (ಬಿ) ಗೌರವಧನ/ ವೇತನ | | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಐವರು ಸದಸ್ಯರಿಗೆ 20 ಸಭೆಗಳಿಗೆ ಹಾಜರಾಗಲು ಪ್ರಯಾಣ/ ಸಭಾ ಭತ್ಯೆ ಅಥವಾ ಗೌರವಧನ (ರೂ.2,000 x ಮಾಸಿಕ 20 ಸಭೆಗಳು x 12 ತಿಂಗಳು x 5 ಸದಸ್ಯರು) | 24,00,000 |
| 2. | ಒರ್ವ ಸಹಾಯಕ–ಕಂ–ಡೇಟಾ ಎಂಟ್ರಿ ಆಪರೇಟರ್ @ ರೂ.11,916 ಮಾಸಿಕ* | 1,42,992 |
| | **ಒಟ್ಟು** | **25,42,992** |

** 2023–24 ರಿಂದ 2025–26ನೇ ಹಣಕಾಸು ವರ್ಷದವರೆಗೆ ತೃಪ್ತಿಕರ ಕಾರ್ಯನಿರ್ವಹಣೆಯನ್ನು ಆಧರಿಸಿ ವೇತನವನ್ನು ವಾರ್ಷಿಕ (ಸಂಚಿತ ಆಧಾರಿತ) 3% ರಷ್ಟು ಹೆಚ್ಚಳ ಮಾಡಲಾಗುವುದು.*

| (ಸಿ) ಆಡಳಿತಾತ್ಮಕ ವೆಚ್ಚಗಳು | | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಆಡಳಿತಾತ್ಮಕ ವೆಚ್ಚಗಳು – ಮಕ್ಕಳ ಪೋಷಣಾ ಕೇಂದ್ರದ ಕಟ್ಟಡದ ಬಾಡಿಗೆ ಹಾಗೂ ಆಕಸ್ಮಿಕ ವೆಚ್ಚಗಳು (ನೀರು, ವಿದ್ಯುತ್, ದೂರವಾಣಿ, ಸ್ಟೇಷನರಿ, ಜೆರಾಕ್ಸ್, ಅಂಚೆ, ಸ್ಥಳೀಯ ಪ್ರಯಾಣ, ಇತ್ಯಾದಿ) ಮಾಸಿಕ @ ರೂ.15,000/– | 1,80,000 |
| 2. | ಔಷಧಗಳು, ಸಾರಿಗೆ ವ್ಯವಸ್ಥೆ ಒಳಗೊಂಡಂತೆ ಮಕ್ಕಳಿಗೆ ಸಂಬಂಧಿಸಿದ ವೆಚ್ಚಗಳು, ಮಗುವನ್ನು ಸಮಿತಿಯ ಮುಂದೆ ಹಾಜರುಪಡಿಸುವಾಗ ತಗಲುವ ಆಹಾರ, ಸಾರಿಗೆ ವೆಚ್ಚಗಳಿಗೆ ಮಾಸಿಕ @ ರೂ.7,000/– | 84,000 |
| | **ಒಟ್ಟು** | **2,64,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **28,06,992** |
| **ಒಟ್ಟು (ಎ+ಬಿ+ಸಿ) ಅನಾವರ್ತಕ+ಆವರ್ತಕ ಅನುದಾನ.** | | **29,09,492** |

**ಸಿಡಬ್ಲ್ಯೂಸಿಗಾಗಿ ಕೊಠಡಿ (ಕಟ್ಟಡ) ನಿರ್ಮಾಣ ಅನುದಾನ:**

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| 1. | *ಪ್ರತಿ ಚದರಡಿಗೆ *ರೂ.1,543/– ರಂತೆ 300 ಚದರಡಿ ಅಳತೆಯ ಎರಡು ಕೊಠಡಿಗಳ ನಿರ್ಮಾಣ, ಅಗತ್ಯ ಬಿದ್ದಾಗ (ರೂ.1543/– x 600 ಚದರಡಿ) | 9,25,800 |

** 2019ರ ಸಿಪಿಡಬ್ಲ್ಯೂಡಿ ಷೆಡ್ಯೂಲ್ ಪ್ರಕಾರ ಅಂದಾಜು ದರಗಳು*

# ಅನುಬಂಧ – ANNEXURE- IV

## ಎ. ಮಿಷನ್ ವಾತ್ಸಲ್ಯದಡಿ ಮಕ್ಕಳ ಪೋಷಣಾ ಸಂಸ್ಥೆಗಳಿಗೆ (ಸಿಸಿಐ ಗಳು) ಮಾನವ ಸಂಪನ್ಮೂಲಗಳ ಸೂಚಕ (ಕಡ್ಡಾಯವಾಗಿ ಇರಬೇಕಾದ) ಅರ್ಹತೆ – Indicative Qualification of Human Resources for Child Care Institutions (CCIs) under Mission Vatsalya:

| ಕ್ರ ಸಂ. | ಹುದ್ದೆಗಳು | ಅರ್ಹತಾ ಮಾನದಂಡ |
|---|---|---|
| 1. | ಪ್ರಭಾರ ಅಧಿಕಾರಿ (ಮೇಲ್ವಿಚಾರಕರು)<br>Officer –in-Charge (Superintendent) | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಮಕ್ಕಳ ಅಭಿವೃದ್ಧಿ/ ಮಾನವ ಹಕ್ಕುಗಳು ಸಾರ್ವಜನಿಕ ಆಡಳಿತ/ ಮನೋವಿಜ್ಞಾನ/ ಮನ:ಶಾಸ್ತ್ರ/ ಕಾನೂನು/ ಸಾರ್ವಜನಿಕ ಆರೋಗ್ಯ/ಸಮುದಾಯ ಸಂಪನ್ಮೂಲ ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು.<br>ಯಾವುದಾದರೂ ಸರ್ಕಾರ/ಸರ್ಕಾರೇತರ ಸಂಸ್ಥೆಯಲ್ಲಿ, ದಾಖಲೆಗಳ ನಿರ್ವಹಣೆ, ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿ, ಯೋಜನೆ ರೂಪಿಸುವಿಕೆ/ ಅನುಷ್ಠಾನ, ಆದ್ಯತಾಪೂರ್ವಕವಾಗಿ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ/ ಸಮಾಜ ಕಲ್ಯಾಣ ಕ್ಷೇತ್ರಗಳಲ್ಲಿ ನಿಗಾವಣೆ ಹಾಗೂ ಮೇಲ್ವಿಚಾರಣೆಯಲ್ಲಿ ಕನಿಷ್ಠ 3 ವರ್ಷಗಳ ಅನುಭವ.<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ. |
| 2. | ಆಪ್ತಸಮಾಲೋಚಕ<br>Counselor | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಮನೋವಿಜ್ಞಾನ/ ಸಾರ್ವಜನಿಕ ಆರೋಗ್ಯ/ ಆಪ್ತಸಮಾಲೋಚನೆಯಲ್ಲಿ ಪದವಿ ಪಡೆದಿರಬೇಕು.<br>**ಅಥವಾ**<br>ಆಪ್ತಸಮಾಲೋಚನೆ ಹಾಗೂ ಸಂವಹನೆಯಲ್ಲಿ ಪಿಜಿ ಡಿಪ್ಲೊಮಾ.<br>ಆದ್ಯತೆಯ ಮೇರೆಗೆ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ, ಸರ್ಕಾರಿ/ಸರ್ಕಾರೇತರ ಸಂಸ್ಥೆಯಲ್ಲಿ ಕನಿಷ್ಠ 1 ವರ್ಷ ಕೆಲಸದ ಅನುಭವ<br>ಕಂಪ್ಯೂಟರ್ ಬಳಕೆಯಲ್ಲಿ ಪರಿಣತಿ. |
| 3. | ಪರಿವೀಕ್ಷಣಾಧಿಕಾರಿ/ ಮಕ್ಕಳ ಕಲ್ಯಾಣ ಅಧಿಕಾರಿ/ ಕೇಸ್ ವರ್ಕರ್.<br>Protection Officer Child Welfare Officer/ Case Worker | ಮಾನ್ಯತೆಯುಳ್ಳ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯ/ ಸಮಾಜ ವಿಜ್ಞಾನ/ ಸಮಾಜ ವಿಜ್ಞಾನಗಳಲ್ಲಿ ಬಿ.ಎ. ಪದವಿ.<br>ಆದ್ಯತೆಯ ಮೇರೆಗೆ ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಸರ್ಕಾರಿ/ ಸರ್ಕಾರೇತರ/ ಕಾನೂನು ವಿಷಯಗಳಲ್ಲಿ ಕನಿಷ್ಠ 2 ವರ್ಷಗಳ ಕೆಲಸದ ಅನುಭವ.<br>ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳು ಹಾಗೂ ರಕ್ಷಣೆಯ ವಿಚಾರಗಳಲ್ಲಿ ಉತ್ತಮ ಜ್ಞಾನ.<br>ಅನುಭವವುಳ್ಳ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು.<br>ಕಂಪ್ಯೂಟರ್ ಬಳಕೆಯಲ್ಲಿ ಅನುಭವವಿರಬೇಕು. |

## ಬಿ. ಮಕ್ಕಳ ಪೋಷಣಾ ಸಂಸ್ಥೆಗಳಿಗೆ ಹಣಕಾಸಿನ ಬೆಂಬಲ –

## Financial Support to Child Care Institutions:

### i) 50 ಮಕ್ಕಳಿಗೆ ವಸತಿ ಸೌಕರ್ಯ ಕಲ್ಪಿಸುವ ಸಾಮರ್ಥ್ಯವಿರುವ ಮಕ್ಕಳ ಪೋಷಣಾ ಸಂಸ್ಥೆಗೆ ಹಣಕಾಸಿನ ಬೆಂಬಲ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ರಚನಾತ್ಮಕ ಬದಲಾವಣೆಗಳು, ವಸತಿ ಸೌಕರ್ಯಗಳ ಉನ್ನತೀಕರಣ ಹಾಗೂ ನಿರ್ವಹಣೆ (ವಾಸ್ತವಕ್ಕೆ ಒಳಪಟ್ಟು). | 10,00,000 |
| 2. | ಟಿವಿ, ಕಂಪ್ಯೂಟರ್‌ಗಳು, ಪುಸ್ತಕಗಳು ಹಾಗೂ ಪೀಠೋಪಕರಣ, ಅಡುಗೆ ಮನೆ ಉಪಕರಣಗಳು, ಇತ್ಯಾದಿಗಳಂತಹ ಸೌಕರ್ಯಗಳ ಉನ್ನತೀಕರಣ. | 10,00,000 |
| | **ಒಟ್ಟು** | **20,00,000** |

**ಆವರ್ತಕ ವೆಚ್ಚ (ವಾರ್ಷಿಕ):**

| **(ಬಿ) ಸಿಬ್ಬಂದಿ ಗೌರವಧನ** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಓರ್ವ ಪ್ರಭಾರ ಅಧಿಕಾರಿ (ಮೇಲ್ವಿಚಾರಕರು) @ ರೂ.33,100/- ಮಾಸಿಕ ವೇತನ | 3,97,200 |
| 2. | ಓರ್ವ ಆಪ್ತಸಮಾಲೋಚಕ @ ರೂ.23,170/- ಮಾಸಿಕ | 2,78,040 |
| 3. | ಓರ್ವ ಪರಿವೀಕ್ಷಣಾಧಿಕಾರಿ/ ಮಕ್ಕಳ ಕಲ್ಯಾಣ ಅಧಿಕಾರಿ/ ಕೇಸ್ ವರ್ಕರ್ @ ರೂ.23,170/- ಮಾಸಿಕ (Probation Officer/ Child Welfare Officer/Case worker) | 2,78,040 |
| 4. | ಇಬ್ಬರು ಗೃಹ ಪೋಷಕಿ ಅಥವಾ ಗೃಹ ಪೋಷಕ @ ರೂ.14,564/- x 2 ಮಾಸಿಕ. (House Mother or House Father) | 3,49,536 |
| 5. | ಓರ್ವ ಪ್ಯಾರಾಮೆಡಿಕಲ್ ಸಿಬ್ಬಂದಿ @ ರೂ.11,916/- ಮಾಸಿಕ | 1,42,992 |
| 6. | ಓರ್ವ ಸ್ಟೋರ್-ಕೀಪರ್ ಕಂ ಅಕೌಂಟೆಂಟ್ @ ರೂ.18,536/- ಮಾಸಿಕ | 2,22,432 |
| 7. | ಓರ್ವ ಶಿಕ್ಷಕರು @ ರೂ.10,000/- ಮಾಸಿಕ | 1,20,000 |
| 8. | ಓರ್ವ ಕಲೆ ಹಾಗೂ ಕರಕುಶಲ-ಕಂ-ಸಂಗೀತ ಶಿಕ್ಷಕರು @ ರೂ.10,000/- ಮಾಸಿಕ | 1,20,000 |
| 9. | ಓರ್ವ ಪಿಟಿ ತರಬೇತುದಾರರು ಕಂ ಯೋಗಾ ತರಬೇತುದಾರರು @ ರೂ.10,000/- ಮಾಸಿಕ ವೇತನ | 1,20,000 |
| 10. | ಇಬ್ಬರು ಅಡುಗೆ ತಯಾರಕರು @ ರೂ.9,930/- ಮಾಸಿಕ | 2,38,320 |
| 11. | ಇಬ್ಬರು ಸಹಾಯಕರು-ಕಂ-ನೈಟ್ ವಾಚ್‌ಮನ್‌ಗಳು ಆದ್ಯತೆಯ ಮೇರೆಗೆ ಹೆಣ್ಣುಮಕ್ಕಳಿರುವ ಸಿಸಿಐಗೆ ಮಹಿಳೆಯರು @ ರೂ.7,944/- ಮಾಸಿಕ | 1,90,656 |
| 12. | ಓರ್ವ ಹೌಸಕೀಪರ್ @ ರೂ.7,944/- ಮಾಸಿಕ | 95,328 |
| | **ಒಟ್ಟು** | **25,52,544** |

*2023-24 ರಿಂದ 2025-26ನೇ ವರ್ಷದವರೆಗೆ ತೃಪ್ತಿಕರ ಕಾರ್ಯನಿರ್ವಹಣೆಯನ್ನು ಆಧರಿಸಿ ವೇತನವನ್ನು ವಾರ್ಷಿಕವಾಗಿ (ಸಂಚಿತ ಆಧಾರದ ಮೇಲೆ) 3% ರಷ್ಟು ಹೆಚ್ಚಿಸಲಾಗುವುದು.*

| (ಸಿ) ಆಡಳಿತಾತ್ಮಕ ವೆಚ್ಚಗಳು | | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಪ್ರತಿ ತಿಂಗಳು ಪ್ರತಿ ಮಗುವಿಗೆ ರೂ.3,000/– ನಿರ್ವಹಣಾ ವೆಚ್ಚಗಳು (ಆಹಾರ, ಬಟ್ಟೆ, ಔಷಧಗಳು, ಸೋಪು, ಎಣ್ಣೆ ಇತ್ಯಾದಿ ಹಾಗೂ ಪೂರಕ ಶಿಕ್ಷಣ, ಇತ್ಯಾದಿ) | 18,00,000 |
| 2. | ಹಾಸಿಗೆ, ಬೆಡ್‌ಶೀಟ್‌ಗಳು, ದಿಂಬು, ಕಂಬಳಿ, ದರಿ/ ಮ್ಯಾಟ್‌ಗಳು, ಇತ್ಯಾದಿ ಒಳಗೊಂಡಂತೆ ಬೆಡ್ಡಿಂಗ್‌ಗೆ ರೂ.1,000/– ಪ್ರತಿ ಮಗುವಿಗೆ ವರ್ಷಕ್ಕೆ | 50,000 |
| 3. | ಆಡಳಿತಾತ್ಮಕ ವೆಚ್ಚಗಳು – ನೀರು ವಿದ್ಯುತ್, ಸಾರಿಗೆ (ಮಕ್ಕಳಿಗೆ ವೃತ್ತಿಪರ ತರಬೇತಿ/ ಶಾಲೆ, ಕ್ಷೇತ್ರ ಭೇಟಿ, ಸಿಡಬ್ಲ್ಯೂಸಿ ಹಾಗೂ ಜೆಜೆಬಿ ಮುಂದೆ ಮಕ್ಕಳನ್ನು ಹಾಜರುಪಡಿಸಲು, ವಿಶೇಷ ಅಗತ್ಯವಿರುವ ಮಕ್ಕಳಿಗೆ ಆದ್ಯತೆ ನೀಡುವುದು), ಮಕ್ಕಳ ಗೃಹ (Children's Home) ನಡೆಸಲು ಕಟ್ಟಡದ ಬಾಡಿಗೆ, ಔಟಿಂಗ್, ಗ್ರಂಥಾಲಯಕ್ಕೆ ಪುಸ್ತಕಗಳು/ ಮ್ಯಾಗಜಿನ್‌ಗಳು, ಕ್ರೀಡಾ ಸಾಮಗ್ರಿಗಳು, ಇತ್ಯಾದಿ ಒಳಗೊಂಡಂತೆ ಇತರೆ, ಇಂಟೆರ್‌ನೆಟ್ ಸಂಪರ್ಕ ಹಾಗೂ ಡೇಟಾ ಎಂಟ್ರಿ ಆಪರೇಟರ್‌ಗಳು ಇತ್ಯಾದಿ ಒಳಗೊಂಡಂತೆ ಆಕಸ್ಮಿಕ ವೆಚ್ಚಗಳು | 10,00,000 |
| | **ಒಟ್ಟು** | **28,50,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **54,02,544** |
| **ಒಟ್ಟು (ಎ+ಬಿ+ಸಿ) ಅನಾವರ್ತಕ + ಆವರ್ತಕ ಅನುದಾನ** | | **74,02,544** |

***ಗಮನಿಸಿ:***

a) ಯೋಜನೆಯಡಿ ಬೆಂಬಲ ಪಡೆದಿರುವ ಸರ್ಕಾರ/ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಸಂಸ್ಥೆಗಳಲ್ಲಿ, ಮೇಲೆ ತಿಳಿಸಿರುವ ಸಂಭಾವನೆಗಳಿಗೆ ನಿಯಮಾವಳಿಗಳು ಅನ್ವಯಿಸುತ್ತವೆ.

b) ಅಗತ್ಯದ ಪ್ರಕಾರ ಆಕಸ್ಮಿಕ ನಿಧಿಯಡಿ ವಾಹನ ಚಾಲಕರ ಸೇವೆಯನ್ನು ಪಡೆದುಕೊಳ್ಳಬಹುದು.

c) ಅಗತ್ಯವಿದ್ದರೆ, ಆಕಸ್ಮಿಕ ನಿಧಿಯನ್ನು ಬಳಸಿಕೊಂಡು ಹೋಂ ಗಾರ್ಡ್‌ಗಳಿಂದ ಹೆಚ್ಚುವರಿ ಭದ್ರತಾ / ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಬಹುದು.

d) ಆಪ್ತಸಮಾಲೋಚಕ, ಮಕ್ಕಳ ಕಲ್ಯಾಣ ಅಧಿಕಾರಿ, ಪರಿವೀಕ್ಷಣಾಧಿಕಾರಿ, ಗೃಹ ಪೋಷಕಿ ಅಥವಾ ಗೃಹ ಪೋಷಕ ಹುದ್ದೆಗಳ ಸಂಖ್ಯೆ, ಗೃಹದ ವಾಸ್ತವ ಅಥವಾ ಮಂಜೂರು ಮಾಡಿರುವ ಸಾಮರ್ಥ್ಯದಲ್ಲಿನ ಏರಿಕೆ/ ಇಳಿಕೆಯ ಪ್ರಕಾರ ಹೆಚ್ಚಿಸಬಹುದು/ ಕಡಿಮೆಗೊಳಿಸಬಹುದು.

e) ಬಾಲಕಿಯರ ಗೃಹಕ್ಕೆ ಸಿಬ್ಬಂದಿಗಳನ್ನು ಆಯ್ಕೆ ಮಾಡುವಾಗ, ಮಹಿಳಾ ಸಿಬ್ಬಂದಿಗಳ ನೇಮಕಾತಿಗೆ ಪ್ರಯತ್ನಿಸಬೇಕು, ವಿಶೇಷವಾಗಿ ನಾಯಕತ್ವ ಹಾಗೂ ನಿರ್ಧಾರ–ಕೈಗೊಳ್ಳುವ ಮಟ್ಟಗಳಲ್ಲಿ ಹಾಗೂ ಹೆಣ್ಣು ಮಕ್ಕಳೊಂದಿಗೆ ಸಂವಾದಿಸುವ ಹುದ್ದೆಗಳಿಗೆ.

f) ವಿಶೇಷ ಅಗತ್ಯಗಳಿರುವ ಮಕ್ಕಳಿಗಾಗಿ ಇರುವ ವಿಶೇಷ ಘಟಕಕ್ಕೆ ಒದಗಿಸುವ ಹಣಕಾಸಿನ ಬೆಂಬಲ ಈ ಮಾರ್ಗಸೂಚಿಗಳಲ್ಲಿ ಮೇಲೆ ನೀಡಿರುವ ನಿಯಮಾವಳಿಗಳ ಪ್ರಕಾರ ಅನ್ವಯವಾಗುತ್ತದೆ.

## ii) ವಿಶೇಷ ಅಗತ್ಯಗಳಿರುವ 10 ಮಕ್ಕಳಿರುವ ವಿಶೇಷ ಘಟಕದೊಂದಿಗೆ 50 ಮಕ್ಕಳ ಸಿಸಿಐಗೆ (Child Care Institution’s) ಹಣಕಾಸಿನ ಬೆಂಬಲ:

| ಕ್ರ.ಸಂ. | ವೆಚ್ಚ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **ಆವರ್ತಕ ವೆಚ್ಚ (ವಾರ್ಷಿಕ)** | | |
| 1. | ಮನೊವೈಜ್ಞಾನಿಕ ಪರೀಕ್ಷಾ ಸಾಮಗ್ರಿಗಳು, ವಾಕ್ ಮತ್ತು ಭಾಷೆಗಾಗಿ ತರಬೇತಿ ಸಾಮಗ್ರಿಗಳು, ಬೋಧನಾ ಸಾಮಗ್ರಿಗಳು, ಗಾಲಿ ಖುರ್ಚಿಗಳು, ಕ್ರೆಷ್‌ಗಳು, ಇತ್ಯಾದಿಗಳಂತಹ ವಿಶೇಷ ಉಪಕರಣ ಹಾಗೂ ಸಾಮಗ್ರಿಗಳು @ ರೂ.10,000/– ಪ್ರತಿ ಮಗುವಿಗೆ 10 ಮಕ್ಕಳಿಗೆ. | 1,00,000 |
| 2. | ಪೌಷ್ಠಿಕ ಆಹಾರದ ವೆಚ್ಚಗಳನ್ನು ಭರಿಸಲು ಮಾಸಿಕ ಪ್ರತಿ ಮಗುವಿಗೆ ರೂ.400/–, ಹತ್ತು (10) ಮಕ್ಕಳಿಗೆ ಹೆಚ್ಚುವರಿ ಅನುದಾನ. | 48,000 |
| 3. | 10 ಮಕ್ಕಳೀಗೆ ವಿಶೇಷ ವೈದ್ಯಕೀಯ ನೆರವು ಆ್ಯಂಟಿರೆಟ್ರೊವೈರಲ್ ಚಿಕಿತ್ಸೆ (ಎಆರ್‌ಟಿ)[1] ಹಾಗೂ ಇತರೆ ವೈದ್ಯಕೀಯ ಅಗತ್ಯಗಳು, ಡೀಟಾಕ್ಸಿಫಿಕೇಷನ್ ಹಾಗೂ ಚಿಕಿತ್ಸೆ[2] @ ರೂ.4,000/– ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ (ವಾಸ್ತವದ ಪ್ರಕಾರ)[3] | 4,80,000 |
| 4. | **ಸಿಬ್ಬಂದಿ ಸಂಭಾವನೆ:** | |
| | ಓರ್ವ ವಿಶೇಷ ಶಿಕ್ಷಕ/ಚಿಕಿತ್ಸಕ @ ರೂ.23,170/– ಮಾಸಿಕ | 2,78,000 |
| | ಓರ್ವ ಶುಶ್ರೂಷಕಿ (ಮಹಿಳೆ) @ ರೂ.13,240/– ಮಾಸಿಕ | 1,58,880 |
| | ಓರ್ವ ಕೇರ್‌ಟೇಕರ್ ಕಂ ವೃತ್ತಿಪರ ತರಬೇತುದಾರ @ ರೂ.9,930/– ಮಾಸಿಕ | 1,19,160 |
| | **ಒಟ್ಟು** | **11,84,080** |

*2023–24 ರಿಂದ 2025–26ನೇ ವರ್ಷದವರೆಗೆ ತೃಪ್ತಿಕರ ಕಾರ್ಯನಿರ್ವಹಣೆಯನ್ನು ಆಧರಿಸಿ ವೇತನವನ್ನು ವಾರ್ಷಿಕವಾಗಿ (ಸಂಚಿತ ಆಧಾರದ ಮೇಲೆ) 3% ರಷ್ಟು ಹೆಚ್ಚಿಸಲಾಗುವುದು.*

*[1] ಮೊದಲು ಸಂಬಂಧಪಟ್ಟ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿಗಳಿಂದ ಆ್ಯಂಟಿರೆಟ್ರೊವೈರಲ್ ಚಿಕಿತ್ಸೆ (ಎಆರ್‌ಟಿ) ದೊರೆಯುವಂತೆ ಮಾಡಬೇಕು, ಒಂದು ವೇಳೆ ಅದು ಲಭ್ಯವಿಲ್ಲದಿದ್ದರೆ, ಕ್ರ. ಸಂ. 3ರಡಿ ಇರುವ ಹಣವನ್ನು ಬಳಸಿಕೊಳ್ಳಬಹುದು.*

*[2] ಮಾದಕವಸ್ತು ಸೇವನೆಗೆ ಒಳಗಾಗಿರುವ ಮಕ್ಕಳನ್ನು ರಾಜ್ಯ ಸರ್ಕಾರದ ಸ್ವಾಮ್ಯದ ಡೀಟಾಕ್ಸಿಫಿಕೇಷನ್ ಹಾಗೂ ಚಿಕಿತ್ಸಾ ಕೇಂದ್ರಗಳಿಗೆ ಮಕ್ಕಳನ್ನು ಕಳುಹಿಸಲು ಮೊದಲ ಆದ್ಯತೆ ನೀಡಬೇಕು. ಒಂದು ವೇಳೆ ಅದು ಲಭ್ಯವಿಲ್ಲದಿದ್ದರೆ ಕ್ರ. ಸಂ. 3ರಡಿ ಒದಗಿಸಿರುವ ಹಣವನ್ನು ಬಳಸಿಕೊಳ್ಳಬಹುದು.*

*[3] ಗೃಹದಲ್ಲಿರುವ ವಿಶೇಷ ಅಗತ್ಯಗಳಿರುವ ಮಕ್ಕಳ ಅಗತ್ಯಗಳ ಪ್ರಕಾರ ಕ್ರ. ಸಂ. 1 ಹಾಗೂ 3 ರಡಿ ಒದಗಿಸಲಾಗಿರುವ ಹಣವನ್ನು ಬಳಸಿಕೊಳ್ಳಲು ಡಿಸಿಪಿಓಗೆ ಅಧಿಕಾರ ನೀಡಲಾಗಿರುತ್ತದೆ.*

## iii) 25 ಮಕ್ಕಳಿಗೆ ವಸತಿ ಕಲ್ಪಿಸುವ ಸಾಮರ್ಥ್ಯವಿರುವ ಮಕ್ಕಳ ಪೋಷಣಾ ಸಂಸ್ಥೆಗೆ (Child Care Institution's) ಹಣಕಾಸಿನ ಬೆಂಬಲ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ರಚನಾತ್ಮಕ ಬದಲಾವಣೆಗಳು, ವಸತಿ ಸೌಕರ್ಯಗಳ ಉನ್ನತೀಕರಣ ಹಾಗೂ ನಿರ್ವಹಣೆ (ವಾಸ್ತವ ವೆಚ್ಚಕ್ಕೆ ತಕ್ಕಂತೆ). | 6,00,000 |
| 2. | ಟಿವಿ, ಕಂಪ್ಯೂಟರ್‌ಗಳು, ಪುಸ್ತಕಗಳು ಹಾಗೂ ಪೀಠೋಪಕರಣ, ಅಡುಗೆ ಮನೆ ಉಪಕರಣ, ಇತ್ಯಾದಿಗಳ ಖರೀದಿ/ನಿರ್ವಹಣೆಯಂತಹ ಉನ್ನತೀಕರಣ. | 6,00,000 |
| | **ಒಟ್ಟು** | **12,00,000** |

**ಆವರ್ತಕ ವೆಚ್ಚ (ವಾರ್ಷಿಕ):**

| **(ಬಿ) ಸಿಬ್ಬಂದಿ ಸಂಭಾವನೆ** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಓರ್ವ ಪ್ರಭಾರ ಅಧಿಕಾರಿ (ಮೇಲ್ವಿಚಾರಕರು) @ ರೂ.33,100/– ಮಾಸಿಕ ವೇತನ | 3,97,200 |
| 2. | ಓರ್ವ ಆಪ್ತಸಮಾಲೋಚಕ @ ರೂ.23,170/– ಮಾಸಿಕ | 2,78,040 |
| 3. | ಓರ್ವ ಪರಿವೀಕ್ಷಣಾಧಿಕಾರಿ/ ಮಕ್ಕಳ ಕಲ್ಯಾಣ ಅಧಿಕಾರಿ/ ಕೇಸ್ ವರ್ಕರ್ @ ರೂ.23,170/–ಮಾಸಿಕ. (Probation Officer/ Child Welfare Officer/Case worker) | 2,78,040 |
| 4. | ಓರ್ವಗೃಹ ಪೋಷಕಿ ಅಥವಾ ಪೋಷಕ @ ರೂ.14,564/– ಮಾಸಿಕ | 1,74,768 |
| 5. | ಓರ್ವ ಪ್ಯಾರಾಮೆಡಿಕಲ್ ಸಿಬ್ಬಂದಿ @ ರೂ.11,916/– ಮಾಸಿಕ | 1,42,992 |
| 6. | ಓರ್ವ ಸ್ಟೋರ್‌ಕೀಪರ್–ಕಂ–ಅಕೌಂಟೆಂಟ್ @ ರೂ.18,563/– ಮಾಸಿಕ | 2,22,432 |
| 7. | ಓರ್ವ ದೈಹಿಕ ಶಿಕ್ಷಕರು–ಕಂ–ಯೋಗಾ ತರಬೇತುದಾರರು @ ರೂ.10,000/– ಮಾಸಿಕ. | 1,20,000 |
| 8. | ಓರ್ವ ಅಡುಗೆ ತಯಾರಕರು @ ರೂ.9,930/– ಮಾಸಿಕ | 1,19,160 |
| 9. | ಓರ್ವ ಸಹಾಯಕರು–ಕಂ–ಇರುಳು ಭದ್ರತಾ ಸಿಬ್ಬಂದಿ @ ರೂ.7,944/– ಮಾಸಿಕ | 95,328 |
| 10. | ಓರ್ವ ಹೌಸ್‌ಕೀಪರ್ @ ರೂ.7,944/– ಮಾಸಿಕ. | 95,328 |
| | **ಒಟ್ಟು** | **19,23,288** |

*2023–24 ರಿಂದ 2025–26ನೇ ವರ್ಷದವರೆಗೆ ತೃಪ್ತಿಕರ ಕಾರ್ಯನಿರ್ವಹಣೆಯನ್ನು ಆಧರಿಸಿ ವೇತನವನ್ನು ವಾರ್ಷಿಕವಾಗಿ (ಸಂಚಿತ ಆಧಾರದ ಮೇಲೆ) 3% ರಷ್ಟು ಹೆಚ್ಚಿಸಲಾಗುವುದು.*

| (ಸಿ) ಆಡಳಿತಾತ್ಮಕ ವೆಚ್ಚಗಳು | | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಪ್ರತಿ ಮಗುವಿಗೆ ಮಾಸಿಕ ರೂ.3,000/– ನಿರ್ವಹಣಾ ವೆಚ್ಚ (ಆಹಾರ, ಬಟ್ಟೆಗಳು, ಔಷಧಗಳು, ಸೋಪು, ಎಣ್ಣೆ ಇತ್ಯಾದಿ ಹಾಗೂ ಪೂರಕ ಶಿಕ್ಷಣ ಇತ್ಯಾದಿ) | 9,00,000 |
| 2. | ಹಾಸಿಗೆ, ಬೆಡ್‌ಶಿಟುಗಳು, ದಿಂಬು, ಕಂಬಳಿ, ದರಿ/ಮ್ಯಾಟುಗಳು, ಇತ್ಯಾದಿ ಒಳಗೊಂಡಂತೆ ಬೆಡ್ಡಿಂಗ್‌ಗೆ @ ರೂ.1,000/– ಪ್ರತಿ ತಿಂಗಳಿಗೆ ಒಂದು ಮಗುವಿಗೆ. | 25,000 |
| 3. | ಆಡಳಿತಾತ್ಮಕ ವೆಚ್ಚಗಳು – ನೀರು, ವಿದ್ಯುತ್, ಸಾರಿಗೆ (ಮಕ್ಕಳಿಗೆ ವೃತ್ತಿಪರ ತರಬೇತಿ/ ಶಾಲೆ, ಕ್ಷೇತ್ರ ಭೇಟಿ, ಸಿಡಬ್ಲ್ಯೂಸಿ ಹಾಗೂ ಜೆಜೆಬಿ ಮುಂದೆ ಮಗುವನ್ನು ಹಾಜರುಪಡಿಸುವುದು, ವಿಶೇಷ ಅಗತ್ಯವಿರುವ ಮಕ್ಕಳಿಗೆ ಆದ್ಯತೆ ನೀಡಬೇಕು), ಮಕ್ಕಳ ಗೃಹ ನಡೆಸಲು ಕಟ್ಟಡ ಬಾಡಿಗೆ, ಹೊರಗೆ ಹೋಗಲು, ಗ್ರಂಥಾಲಯಕ್ಕೆ ಪುಸ್ತಕಗಳು/ ಮ್ಯಾಗಜಿನ್‌ಗಳು, ಕ್ರೀಡಾ ಉಪಕರಣಗಳು, ಇತ್ಯಾದಿಗಳು. ಇಂಟರ್‌ನೆಟ್ ಸಂಪರ್ಕ ಹಾಗೂ ಡೇಟಾ ಎಂಟ್ರಿ ಆಪರೇಟರ್‌ಗಳು, ಇತ್ಯಾದಿ ಒಳಗೊಂಡಂತೆ ಆಕಸ್ಮಿಕ ವೆಚ್ಚ (ವಾಸ್ತವದ ಪ್ರಕಾರ). | 6,00,000 |
| | **ಒಟ್ಟು** | **15,25,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **34,48,288** |
| **ಒಟ್ಟು (ಎ+ಬಿ+ಸಿ) ಅನಾವರ್ತಕ ವೆಚ್ಚ + ಆವರ್ತಕ ಅನುದಾನ** | | **46,48,288** |

***ಗಮನಿಸಿ:***

*a) ಯೋಜನೆಯಡಿ ಬೆಂಬಲ ಪಡೆದಿರುವ ಸರ್ಕಾರ/ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಸಂಸ್ಥೆಗಳಲ್ಲಿ, ಮೇಲೆ ತಿಳಿಸಿರುವ ಸಂಭಾವನೆ ನಿಯಮಾವಳಿಗಳು ಅನ್ವಯಿಸುತ್ತವೆ.*

*b) ಅಗತ್ಯದ ಪ್ರಕಾರ ಆಕಸ್ಮಿಕ ನಿಧಿಯಡಿ ವಾಹನ ಚಾಲಕರ ಸೇವೆಯನ್ನು ಪಡೆದುಕೊಳ್ಳಬಹುದು.*

*c) ಅಗತ್ಯವಿದ್ದರೆ, ಆಕಸ್ಮಿಕ ನಿಧಿಯನ್ನು ಬಳಸಿಕೊಂಡು ಹೋಂ ಗಾರ್ಡ್‌ಗಳಿಂದ ಹೆಚ್ಚುವರಿ ಭದ್ರತಾ / ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಬಹುದು.*

*d) ಆಪ್ತಸಮಾಲೋಚಕ, ಮಕ್ಕಳ ಕಲ್ಯಾಣ ಅಧಿಕಾರಿ, ಪರಿವೀಕ್ಷಣಾಧಿಕಾರಿ, ಗೃಹ ಪೋಷಕಿ ಅಥವಾ ಗೃಹ ಪೋಷಕ ಹುದ್ದೆಗಳ ಸಂಖ್ಯೆ, ಗೃಹದ ವಾಸ್ತವ ಅಥವಾ ಮಂಜೂರು ಮಾಡಿರುವ ಸಾಮರ್ಥ್ಯದಲ್ಲಿನ ಏರಿಕೆ/ ಇಳಿಕೆಯ ಪ್ರಕಾರ ಹೆಚ್ಚಿಸಬಹುದು/ ಕಡಿಮೆಗೊಳಿಸಬಹುದು.*

*e) ಬಾಲಕಿಯರ ಗೃಹಕ್ಕೆ ಸಿಬ್ಬಂದಿಗಳನ್ನು ಆಯ್ಕೆ ಮಾಡುವಾಗ, ಮಹಿಳಾ ಸಿಬ್ಬಂದಿಗಳ ನೇಮಕಾತಿಗೆ ಪ್ರಯತ್ನಿಸಬೇಕು, ವಿಶೇಷವಾಗಿ ನಾಯಕತ್ವ ಹಾಗೂ ನಿರ್ಧಾರ–ಕೈಗೊಳ್ಳುವ ಮಟ್ಟಗಳಲ್ಲಿ ಹಾಗೂ ಹೆಣ್ಣು ಮಕ್ಕಳೊಂದಿಗೆ ಸಂವಾದಿಸುವ ಹುದ್ದೆಗಳಿಗೆ.*

*f) ವಿಶೇಷ ಅಗತ್ಯಗಳಿರುವ ಮಕ್ಕಳಿಗಾಗಿ ಇರುವ ವಿಶೇಷ ಘಟಕಕ್ಕೆ ಒದಗಿಸುವ ಹಣಕಾಸಿನ ಬೆಂಬಲ ಈ ಮಾರ್ಗಸೂಚಿಗಳಲ್ಲಿ ಮೇಲೆ ನೀಡಿರುವ ನಿಯಮಾವಳಿಗಳ ಪ್ರಕಾರ ಅನ್ವಯವಾಗುತ್ತದೆ.*

## iv) ವಿಶೇಷ ಅಗತ್ಯಗಳಿರುವ 05 ಮಕ್ಕಳ ವಿಶೇಷ ಘಟಕವಿರುವ 25 ಮಕ್ಕಳ ಸಿಸಿಐಗೆ ಹಣಕಾಸಿನ ಬೆಂಬಲ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **ಆವರ್ತಕ ವೆಚ್ಚ (ವಾರ್ಷಿಕ)** | | |
| 1. | ಮನೋವೈಜ್ಞಾನಿಕ ಪರೀಕ್ಷಾ ಸಾಮಗ್ರಿಗಳು, ವಾಕ್ ಮತ್ತು ಭಾಷೆಯ ತರಬೇತಿ ಸಾಮಗ್ರಿಗಳು, ಬೋಧನಾ ಸಾಮಗ್ರಿಗಳು, ಗಾಲಿ ಖುರ್ಚಿಗಳು, ಕ್ರೆಷ್‌ಗಳು, ಇತ್ಯಾದಿಗಳಂತಹ ವಿಶೇಷ ಉಪಕರಣ ಹಾಗೂ ಸಾಮಗ್ರಿಗಳು @ ರೂ.10,000/– ಪ್ರತಿ ಮಗುವಿಗೆ ಐದು (05) ಮಕ್ಕಳಿಗೆ | 50,000 |
| 2. | ಪೌಷ್ಠಿಕ ಆಹಾರದ ವೆಚ್ಚಗಳನ್ನು ಭರಿಸಲು ಐದು (5) ಮಕ್ಕಳಿಗೆ @ ರೂ.400/– ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ಹೆಚ್ಚುವರಿ ಅನುದಾನ | 24,000 |
| 3. | ಆ್ಯಂಟಿರೆಟ್ರೋವೈರಲ್ ಚಿಕಿತ್ಸೆ (ಎಆರ್‌ಟಿ)[1] ಹಾಗೂ ಇತರೆ ವೈದ್ಯಕೀಯ ಅಗತ್ಯಗಳು, ಡೀಟಾಕ್ಸಿಫಿಕೇಷನ್ ಹಾಗೂ ಚಿಕಿತ್ಸೆ[2] @ರೂ.4,000/– ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ (ವಾಸ್ತವದ ಪ್ರಕಾರ)[3] | 2,40,000 |
| 4. | ಸಿಬ್ಬಂದಿ ಸಂಭಾವನೆ | |
| | ಓರ್ವ ವಿಶೇಷ ಶಿಕ್ಷಕ/ಚಿಕಿತ್ಸಕ @ ರೂ.23,170/– ಮಾಸಿಕ. | 2,78,000 |
| | ಓರ್ವ ಶುಶ್ರೂಷಕಿ (ಮಹಿಳೆ) @ ರೂ.13,240/– ಮಾಸಿಕ. | 1,58,880 |
| | ಓರ್ವ ಕೇರ್‌ಟೇಕರ್ ಕಂ ವೃತ್ತಿಪರ ತರಬೇತುದಾರ @ ರೂ.9,930/– ಮಾಸಿಕ. | 1,19,160 |
| | **ಒಟ್ಟು** | **8,70,080** |

*2023–24 ರಿಂದ 2025–26ನೇ ವರ್ಷದವರೆಗೆ ತೃಪ್ತಿಕರ ಕಾರ್ಯನಿರ್ವಹಣೆಯನ್ನು ಆಧರಿಸಿ ವೇತನವನ್ನು ವಾರ್ಷಿಕವಾಗಿ (ಸಂಚಿತ ಆಧಾರದ ಮೇಲೆ) 3% ರಷ್ಟು ಹೆಚ್ಚಿಸಲಾಗುವುದು.*

*[1] ಮೊದಲು ಸಂಬಂಧಪಟ್ಟ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿಗಳಿಂದ ಆ್ಯಂಟಿರೆಟ್ರೋವೈರಲ್ ಚಿಕಿತ್ಸೆ (ಎಆರ್‌ಟಿ) ದೊರೆಯುವಂತೆ ಮಾಡಬೇಕು, ಒಂದು ವೇಳೆ ಅದು ಲಭ್ಯವಿಲ್ಲದಿದ್ದರೆ, ಕ್ರ. ಸಂ. 3 ರಡಿ ಇರುವ ಹಣವನ್ನು ಬಳಸಿಕೊಳ್ಳಬಹುದು.*

*[2] ಮಾದಕವಸ್ತು ಸೇವನೆಗೆ ಒಳಗಾಗಿರುವ ಮಕ್ಕಳನ್ನು ರಾಜ್ಯ ಸರ್ಕಾರದ ಸ್ವಾಮ್ಯದ ಡೀಟಾಕ್ಸಿಫಿಕೇಷನ್ ಹಾಗೂ ಚಿಕಿತ್ಸಾ ಕೇಂದ್ರಗಳಿಗೆ ಮಕ್ಕಳನ್ನು ಕಳುಹಿಸಲು ಮೊದಲ ಆದ್ಯತೆ ನೀಡಬೇಕು. ಒಂದು ವೇಳೆ ಅದು ಲಭ್ಯವಿಲ್ಲದಿದ್ದರೆ ಕ್ರ.ಸಂ. 3 ರಡಿ ಒದಗಿಸಿರುವ ಹಣವನ್ನು ಬಳಸಿಕೊಳ್ಳಬಹುದು.*

*[3] ಗೃಹದಲ್ಲಿರುವ ವಿಶೇಷ ಅಗತ್ಯಗಳಿರುವ ಮಕ್ಕಳ ಅಗತ್ಯಗಳ ಪ್ರಕಾರ ಕ್ರ.ಸಂ. 1 ಹಾಗೂ 3ರಡಿ ಒದಗಿಸಲಾಗಿರುವ ಹಣವನ್ನು ಬಳಸಿಕೊಳ್ಳಲು ಡಿಸಿಪಿಓಗೆ ಅಧಿಕಾರ ನೀಡಲಾಗಿರುತ್ತದೆ.*

## ಸಿ. ಎಸ್ಎಎ ಗೆ ಹಣಕಾಸಿನ ಬೆಂಬಲ (10 ಮಕ್ಕಳ ಒಂದು ಘಟಕಕ್ಕೆ)–

## Financial support to SAA ( a unit of 10 Children):

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| (ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ) | | |
| 1. | ಯುಪಿಎಸ್ ಹಾಗೂ ವೆಬ್ ಕ್ಯಾಮೆರಾದೊಂದಿಗೆ ಒಂದು ಕಂಪ್ಯೂಟರ್ (ಸಾಫ್ಟ್‌ವೇರ್ ಪರವಾನಗಿ ಒಳಗೊಂಡಂತೆ) ಹಾಗೂ ಪ್ರಿಂಟರ್–ಕಂ–ಸ್ಕ್ಯಾನ್ನರ್ | 45,000 |
| 2. | 10 ತೊಟ್ಟಿಲುಗಳು ಒಳಗೊಂಡಂತೆ ಪೀಠೋಪಕರಣ | 1,50,000 |
| 3. | ಅಡುಗೆ ತಯಾರಿಸಲು ಉಪಕರಣಗಳು (ಗ್ಯಾಸ್ ಸಂಪರ್ಕದೊಂದಿಗೆ ಸ್ಟೌ, ಪಾತ್ರೆಗಳು, ವಾಟರ್ ಫಿಲ್ಟರ್, ಇತ್ಯಾದಿ) | 50,000 |
| | **ಒಟ್ಟು** | **2,45,000** |

**ಆವರ್ತಕ ವೆಚ್ಚ (ವಾರ್ಷಿಕ):**

| (ಬಿ) ಸಿಬ್ಬಂದಿ ಸಂಭಾವನೆ | | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಓರ್ವ ನಿರ್ವಾಹಕರು/ ಸಂಯೋಜಕರು @ ರೂ.23,170/– ಮಾಸಿಕ | 2,78,040 |
| 2. | ಓರ್ವ ಸಾಮಾಜಿಕ ಕಾರ್ಯಕರ್ತ ಕಂ ಪೂರ್ವ ಪ್ರಾಥಮಿಕ ಶಿಕ್ಷಣದ ಶಿಕ್ಷಕರು @ ರೂ.18,536/– ಮಾಸಿಕ | 2,22,432 |
| 3. | ಓರ್ವ ಶುಶ್ರೂಷಕ @ ರೂ.11,916/– ಮಾಸಿಕ | 1,42,992 |
| 4. | ಓರ್ವ ವೈದ್ಯರು (ಅಲ್ಪಾವಧಿ) @ ರೂ.9,930/– ಮಾಸಿಕ | 1,19,160 |
| 5. | ಆರು ಆಯಾಗಳು @ ರೂ.7,944/– ಮಾಸಿಕ | 5,71,968 |
| 6. | ಓರ್ವ ಚೌಕಿದಾರ @ ರೂ.7,944/– ಮಾಸಿಕ | 95,328 |
| | **ಒಟ್ಟು** | **14,29,920** |

*2023–24 ರಿಂದ 2025–26ನೇ ವರ್ಷದವರೆಗೆ ತೃಪ್ತಿಕರ ಕಾರ್ಯನಿರ್ವಹಣೆಯನ್ನು ಆಧರಿಸಿ ವೇತನವನ್ನು ವಾರ್ಷಿಕವಾಗಿ (ಸಂಚಿತ ಆಧಾರದ ಮೇಲೆ) 3% ರಷ್ಟು ಹೆಚ್ಚಿಸಲಾಗುವುದು.*

| (ಸಿ) ಆಡಳಿತಾತ್ಮಕ ವೆಚ್ಚಗಳು | | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಹತ್ತು (10) ಮಕ್ಕಳಿಗೆ ಆಹಾರ, ಹಾಲಿನ ಪುಡಿ, ಫೀಡಿಂಗ್ ಬಾಟಲ್‌ಗಳು, ಬಟ್ಟೆಗಳು, ಔಷಧಗಳು, ಸೋಪು, ಎಣ್ಣೆ, ಆಟಿಕೆಗಳು, ಇತ್ಯಾದಿಗಳ ವೆಚ್ಚಗಳಿಗಾಗಿ ಪ್ರತಿ ತಿಂಗಳಿಗೆ ಪ್ರತಿ ಮಗುವಿಗೆ ರೂ.2,500/– ನಿರ್ವಹಣಾ ವೆಚ್ಚ | 3,00,000 |
| 2. | ಆಡಳಿತಾತ್ಮಕ ವೆಚ್ಚಗಳು – ಕಟ್ಟಡದ ಬಾಡಿಗೆ ಹಾಗೂ ಆಕಸ್ಮಿಕಗಳು (ನೀರು, ವಿದ್ಯುತ್, ದೂರವಾಣಿ, ಸ್ಟೇಷನರಿ, ಜೆರಾಕ್ಸ್, ಅಂಚೆ, ಇತ್ಯಾದಿ) | 2,25,000 |
| 3. | ಒಂದು ವೇಳೆ ದತ್ತು ಪಡೆಯುವ ಪೋಷಕರು ಭಾರತೀಯರಾಗಿದ್ದು, ದತ್ತು ಪ್ರಕರಣದಲ್ಲಿ ಭಾಗವಹಿಸುವ ವಕೀಲರ ಕಾನೂನು ವೆಚ್ಚಗಳನ್ನು ಪಾವತಿಸುವುದು ಅವರಿಗೆ ಸಾಧ್ಯವಾಗದಿದ್ದಲ್ಲಿ, ಅದನ್ನು ಪಾವತಿಸುವುದು | |
| | **ಒಟ್ಟು** | **5,25,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **19,54,920** |
| **ಒಟ್ಟು (ಎ+ಬಿ+ಸಿ) ಅನಾವರ್ತಕ ವೆಚ್ಚ + ಆವರ್ತಕ ಅನುದಾನ.** | | **21,99,920** |

*ಗಮನಿಸಿ: ಯೋಜನಾ ಅನುಮೋದನಾ ಮಂಡಳಿ (ಪಿಎಬಿ) ಅನುಮೋದನೆಯ ಮೇರೆಗೆ, ಮಧ್ಯಂತರ ಅವಧಿಯಲ್ಲಿ, ಅನಾವರ್ತಕ ಅಂಶಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಬೇಡಿಕೆ ಇದ್ದರೆ ಒದಗಿಸಬಹುದು.*

## ಡಿ. ಮುಕ್ತ ತಂಗುದಾಣಕ್ಕೆ ಹಣಕಾಸಿನ ಬೆಂಬಲ (25 ಮಕ್ಕಳಿರುವ ಘಟಕ) –

## Financial Support for Open Shelter (a unit of 25 Children):

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| **(ಎ) ಅನಾವರ್ತಕ ವೆಚ್ಚ (ಐದು ವರ್ಷಗಳಿಗೊಮ್ಮೆ)** | | |
| 1. | ಮಕ್ಕಳಿಗಾಗಿ ಹಾಸಿಗೆಗಳು, 25 ಸ್ಟೀಲ್ ಲಾಕರ್‌ಗಳು, ಕಪಾಟುಗಳು, ಮೇಜುಗಳು ಹಾಗೂ ಖುರ್ಚಿಗಳು, ಇತ್ಯಾದಿ ಒಳಗೊಂಡಂತೆ ಪೀಠೋಪಕರಣ. | 1,50,000 |
| 2. | ಯುಪಿಎಸ್ ಜೊತೆಗೆ ಎರಡು ಕಂಪ್ಯೂಟರ್‌ಗಳು (ಸಾಫ್ಟ್‌ವೇರ್ ಪರವಾನಗಿ ವೆಚ್ಚ ಒಳಗೊಂಡಂತೆ) ಹಾಗೂ ಪ್ರಿಂಟರ್–ಕಂ–ಸ್ಕ್ಯಾನ್ನರ್. | 85,000 |
| 3. | ಒಂದು ಬಣ್ಣದ ಟಿವಿ. | 50,000 |
| 4. | ಕ್ರೀಡೆಗಳು, ಮನರಂಜನೆ, ವೃತ್ತಿಪರ ತರಬೇತಿ ಉಪಕರಣಗಳು, ಹಾಗೂ ಅಡುಗೆ ತಯಾರಿಕೆಗೆ ಪಾತ್ರೆಗಳು, ಗ್ಯಾಸ್ ಸ್ಟೌ, ವಾಟರ್ ಫಿಲ್ಟರ್, ಇತ್ಯಾದಿ. | 2,00,00 |
| | **ಒಟ್ಟು** | **4,35,000** |

**ಆವರ್ತಕ ವೆಚ್ಚ (ವಾರ್ಷಿಕ):**

| **(ಬಿ) ಸಿಬ್ಬಂದಿ ಸಂಭಾವನೆ** | | **ಮೊತ್ತ (ರೂ.ಗಳಲ್ಲಿ)** |
|---|---|---|
| 1. | ಓರ್ವ ಯೋಜನಾ ಸಂಯೋಜಕರು–ಕಂ–ಆಪ್ತಸಮಾಲೋಚಕರು @ ರೂ.23,170/– ಮಾಸಿಕ | 2,78,040 |
| 2. | ಓರ್ವ ಸಾಮಾಜಿಕ ಕಾರ್ಯಕರ್ತ @ ರೂ.18,536/– ಮಾಸಿಕ | 2,22,432 |
| 3. | ಇಬ್ಬರು ಕೇರ್ ಗಿವರ್‌ಗಳು–ಕಂ–ಸೇತುಬಂಧ ಕೋರ್ಸ್ ಶಿಕ್ಷಕರು @ ರೂ.11,916 ಮಾಸಿಕ. | 2,85,984 |
| 4. | *ಮೂವರು ಔಟ್‌ರೀಚ್ ಕಾರ್ಯಕರ್ತರು @ ರೂ.10,592 ಮಾಸಿಕ | 3,81,984 |
| 5. | ಸ್ವಚ್ಛಗೊಳಿಸಲು ಹಾಗೂ ಅಡುಗೆ ತಯಾರಿಸಲು ಓರ್ವ ಸಹಾಯಕರು @ ರೂ.7,944/– ಮಾಸಿಕ | 95,328 |
| | **ಒಟ್ಟು** | **12,63,096** |

*2023–24 ರಿಂದ 2025–26ನೇ ವರ್ಷದವರೆಗೆ ತೃಪ್ತಿಕರ ಕಾರ್ಯನಿರ್ವಹಣೆಯನ್ನು ಆಧರಿಸಿ ವೇತನವನ್ನು ವಾರ್ಷಿಕವಾಗಿ (ಸಂಚಿತ ಆಧಾರದ ಮೇಲೆ) 3% ರಷ್ಟು ಹೆಚ್ಚಿಸಲಾಗುವುದು*

** ಜಿಲ್ಲೆಯ ಭೌಗೋಳಿಕ ಪ್ರದೇಶ, ಜನಸಂಖ್ಯೆಯನ್ನು ಆಧರಿಸಿ ಔಟ್‌ರೀಚ್ ಕಾರ್ಯಕರ್ತರ ಸಂಖ್ಯೆಯನ್ನು ಗರಿಷ್ಠ ಐದಕ್ಕೆ ಹೆಚ್ಚಿಸಬಹುದು.*

| (ಸಿ) ಆಡಳಿತಾತ್ಮಕ ವೆಚ್ಚಗಳು | | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಒಂದು ಮಗುವಿಗೆ ಒಂದು ತಿಂಗಳಿಗೆ ನಿರ್ವಹಣೆ @ ರೂ.2,500/– (ಆಹಾರ, ಬಟ್ಟೆಗಳು, ಔಷಧಗಳು, ಸೋಪು, ಎಣ್ಣೆ, ಪೂರಕ ಶಿಕ್ಷಣ, ಇತ್ಯಾದಿ) 25 ಮಕ್ಕಳಿಗೆ | 7,50,000 |
| 2. | ಆಡಳಿತಾತ್ಮಕ ವೆಚ್ಚಗಳು (ನೀರು, ವಿದ್ಯುತ್, ಸಾರಿಗೆ, ಕಟ್ಟಡದ ಬಾಡಿಗೆ 3 ಸಂಪರ್ಕ ಬಿಂದುಗಳು ಒಳಗೊಂಡಂತೆ, ಇತರೆ (ಹೊರಗೆ ಹೋಗಲು, ಗ್ರಂಥಾಲಯಕ್ಕೆ ಪುಸ್ತಕಗಳು, ಆಟಿಕೆಗಳು, ಶಿಕ್ಷಣ/ ಕ್ರೀಡಾ ಉಪಕರಣ, ಇತ್ಯಾದಿ) ಹಾಗೂ ಆಕಸ್ಮಿಕ ವೆಚ್ಚಗಳು (ಅಂಚೆ, ಸ್ಟೇಷನರಿ, ದೂರವಾಣಿ, ಜೆರಾಕ್ಸ್ ಇತ್ಯಾದಿ) | 5,00,000 |
| | **ಒಟ್ಟು** | **12,50,000** |
| **ಒಟ್ಟು ಆವರ್ತಕ ವೆಚ್ಚ (ಬಿ+ಸಿ)** | | **25,13,096** |
| **ಒಟ್ಟು (ಎ+ಬಿ+ಸಿ) ಅನಾವರ್ತಕ ವೆಚ್ಚ + ಆವರ್ತಕ ಅನುದಾನ.** | | **29,48,096** |

** ಕಾರ್ಯಕ್ರಮದಲ್ಲಿ ಸೇವೆಯನ್ನು ಒದಗಿಸಬೇಕಾದ ಮಕ್ಕಳ ಸಂಖ್ಯೆ ಹಾಗೂ ಭೌಗೋಳಿಕ ಪ್ರದೇಶವನ್ನು ಆಧರಿಸಿ ಔಟ್‌ರೀಚ್ ಕಾರ್ಯಕರ್ತರು ಹಾಗೂ ಕಾಂಟ್ಯಾಕ್ಟ್ ಪಾಯಿಂಟ್‌ಗಳನ್ನು (ಸಂಪರ್ಕ ಬಿಂದುಗಳು) ಸಂಖ್ಯೆಯನ್ನು ಗರಿಷ್ಠ ಐದಕ್ಕೆ ಹೆಚ್ಚಿಸಬಹುದು.*

## ಇ. ಸಿಸಿಐಗಳಿಗಾಗಿ ಮೂಲಸೌಕರ್ಯ ಹಣಕಾಸಿನ ಬೆಂಬಲ –

## Infrastructural Financial support for CCIs:

### i. 50 ಮಕ್ಕಳ ಹೊಸ ಘಟಕಕ್ಕೆ (ಕಟ್ಟಡ) ನಿರ್ಮಾಣ ಅನುದಾನ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| 1 | ನಿರ್ಮಾಣ ವೆಚ್ಚ – 8745 ಚದರಡಿ @ ರೂ.1,543/– ಪ್ರತಿ ಚದರಡಿಗೆ | 1,34,93,500 |

** 2019ರ ಸಿಪಿಡಬ್ಲ್ಯೂಡಿ ಷೆಡ್ಯೂಲ್ ಪ್ರಕಾರ ಅಂದಾಜು ದರಗಳು.*

### ವಾತ್ಸಲ್ಯ ಸದನ – 50 ಮಕ್ಕಳ ಘಟಕಕ್ಕಾಗಿ (ಕಟ್ಟಡ) ಹಣಕಾಸಿನ ಬೆಂಬಲ:

| ಕ್ರ.ಸಂ. | ಮಕ್ಕಳ ಪೋಷಣಾ ಕೇಂದ್ರ/ ಸಿಡಬ್ಲ್ಯೂಸಿ/ ಜೆಜೆಬಿ ವಿಧ | ಮಕ್ಕಳ ಪೋಷಣಾ ಕೇಂದ್ರ/ ಸಿಡಬ್ಲ್ಯೂಸಿ/ ಜೆಜೆಬಿ ಪ್ರದೇಶ ಅಳತೆ ಚದರಡಿಗಳಲ್ಲಿ* | ನಿರ್ಮಾಣ ವೆಚ್ಚ (ರೂ.ಗಳಲ್ಲಿ) |
|---|---|---|---|
| 1. | ಮಕ್ಕಳ **ಪೋಷಣಾ** ಕೇಂದ್ರ (Childrens Home) | 8745 ಚದರಡಿ | 1,34,93,500 |
| 2. | ಪರಿವೀಕ್ಷಣಾ ಗೃಹ (ವೀಕ್ಷಣಾಲಯ– OH-Observation Home)) | 8745 ಚದರಡಿ | 1,34,93,500 |
| 3. | ವಿಶೇಷ ಗೃಹ (Special Home) | 8745 ಚದರಡಿ | 1,34,93,500 |
| 4. | ಸುರಕ್ಷತಾ ಸ್ಥಳ (Place Of Safety) | 8745 ಚದರಡಿ | 1,34,93,500 |
| 5. | ಸಿಡಬ್ಲ್ಯೂಸಿ (CWC) | 600 ಚದರಡಿ | 9,25,800 |
| 6. | ಜೆಜೆಬಿ (JJB) | 600 ಚದರಡಿ | 9,25,800 |
| | **ಒಟ್ಟು** | **36180 ಚದರಡಿ** | **5,58,25,600** |

** 2019ರ ಸಿಪಿಡಬ್ಲ್ಯೂಡಿ– (CPWD) ಷೆಡ್ಯೂಲ್ ಪ್ರಕಾರ ಅಂದಾಜು ವೆಚ್ಚಗಳು*

## ii. 25 ಮಕ್ಕಳಿರುವ ಹೊಸ ಘಟಕಕ್ಕೆ (ಕಟ್ಟಡ) ನಿರ್ಮಾಣ ಅನುದಾನ:

| ಕ್ರ.ಸಂ. | ವೆಚ್ಚದ ಅಂಶ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ನಿರ್ಮಾಣ ವೆಚ್ಚ – 5000 ಚದರಡಿ@ರೂ.1543/– ಪ್ರತಿ ಚದರಡಿಗೆ | 77,15,000 |

*** 2019ರ ಸಿಪಿಡಬ್ಲ್ಯೂಡಿ (CPWD) ಷೆಡ್ಯೂಲ್ ಪ್ರಕಾರ ಅಂದಾಜು ದರ.*

## iii. 25 ಮಕ್ಕಳ ಘಟಕಕ್ಕೆ ವಾತ್ಸಲ್ಯ ಸದನಕ್ಕೆ ಹಣಕಾಸು ಬೆಂಬಲ:

| ಕ್ರ.ಸಂ. | ಮಕ್ಕಳ ಪೋಷಣಾ ಕೇಂದ್ರ / ಸಿಡಬ್ಲ್ಯೂಸಿ/ ಜೆಜೆಬಿ ವಿಧ | ಮಕ್ಕಳ ಪೋಷಣಾ ಕೇಂದ್ರ / ಸಿಡಬ್ಲ್ಯೂಸಿ/ ಜೆಜೆಬಿ ಪ್ರದೇಶ ಅಳತೆ ಚದರಡಿಗಳಲ್ಲಿ* | ನಿರ್ಮಾಣ ವೆಚ್ಚ (ರೂ.ಗಳಲ್ಲಿ) |
|---|---|---|---|
| 1. | ಮಕ್ಕಳ **ಪೋಷಣಾ** ಕೇಂದ್ರ (Childrens Home) | 5000 ಚದರಡಿ | 77,15,000 |
| 2. | ಪರಿವೀಕ್ಷಣಾ ಗೃಹ (ವೀಕ್ಷಣಾಲಯ–OH-Observation Home)) | 5000 ಚದರಡಿ | 77,15,000 |
| 3. | ವಿಶೇಷ ಗೃಹ (Special Home) | 5000 ಚದರಡಿ | 77,15,000 |
| 4. | ಸುರಕ್ಷತಾ ಸ್ಥಳ (Place Of Safety) | 5000 ಚದರಡಿ | 77,15,000 |
| 5. | ಸಿಡಬ್ಲ್ಯೂಸಿ (CWC) | 600 ಚದರಡಿ | 9,25,800 |
| 6. | ಜೆಜೆಬಿ (JJB) | 600 ಚದರಡಿ | 9,25,800 |
| | **ಒಟ್ಟು** | **21200 ಚದರಡಿ** | **3,27,11,600** |

*** 2019ರ ಸಿಪಿಡಬ್ಲ್ಯೂಡಿ (CPWD) ಷೆಡ್ಯೂಲ್ ಪ್ರಕಾರ ಅಂದಾಜು ದರ.*



**ಪ್ರಕಟಣೆ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು,
ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ, ಜಿಲ್ಲಾಧಿಕಾರಿಗಳವರ ಕಛೇರಿ ಕೊಪ್ಪಳ ಮತ್ತು
ಯುನಿಸಫ್ ಹೈದರಾಬಾದ್.